ಲಂಕೇಶ್

ಜೂನ್ 9, 2010 ರೂ. 12/-

GIM
ಡಾಲರ್ ಮಾರುಕಟ್ಟೆ ದಲ್ಲಾಳಿ ಸರ್ಕಾರ!




ಬಾಯ್ ಕಳ್ಳನಿಂದ

ಅನಾಥಾಶ್ರಮ ಗುಳುಂ!

ಉದಾಸಿ ಪುತ್ರನ ಸೀಕ್ರೆಟ್ ಸಿಡಿ?





ನಿವಾಸಮೂರ್ತಿ

ಲು ಶಿಕ್ಷೆಗೆ
ದರಿದರೇ?

ಮೈಸೂರಿನ ಟಿಟಿಎಲ್ ಟ್ರಸ್ಟ್

ಉಪ್ಪಾರರಿಗೆ ಉಪ್ಪು ನೀರು

ಬಾಗಲಕೋಟೆ

ಶುರುವಾಯಿತು ಬಿಜೆಪಿಗಳ 'ಸುಪಾರಿ' ರಾಜಕೀಯ



ಮೇಯರ್ ಸುತ್ತ ಮನೆಹಾಳರು

ಜಾಗತಿಕ ಹೂಡಿಕೆದಾರರ ಸಮಾವೇಶ- GIM


ಡಾಲರ್ ಮಾರುಕಟ್ಟೆಯಲ್ಲಿ ನಾಡನ್ನು ಮಾರುತ್ತಿರುವ ದಲ್ಲಾಳಿ ಸರ್ಕಾರ!


ಬಿಜೆಪಿ ಸರ್ಕಾರ ಕಿಂಚಿತ್ತೂ ಬಡ್ಡಿ ಸ್ವೀಕರಿಸದೆ ಸಾಲವನ್ನು ಒದಗಿಸುವ ಭರವಸೆಯ ಮೇಲೆ ಹಲವು ಕಂಪನಿಗಳನ್ನು ಆಕರ್ಷಿಸಿದೆ. ಸರ್ಕಾರ ಎಲ್ಲಿಂದ ದುಡ್ಡನ್ನು ತರುತ್ತದೆ? ನಮ್ಮ ತೆರಿಗೆ ಹಣದಿಂದ! ಬಜೆಟ್ಟುಗಳಲ್ಲಿ ನಮ್ಮ ಹಳ್ಳಿಯ ರಸ್ತೆ, ಶಾಲೆಗೆ, ಪಡಿತರಕ್ಕೆ ಕೊಡಬೇಕಾದ ಹಣವನ್ನು ಕಿತ್ತು ಅವರಿಗೆ ಕೊಡುವುದರಿಂದ! ಬ್ಯಾಂಕುಗಳಲ್ಲಿ ನಾವಿಟ್ಟಿರುವ ಉಳಿತಾಯದ ಹಣದಿಂದ! ಅಂದರೆ ಹಣ ನಮ್ಮದು. ಲಾಭ ಅವರದು.



"ಇತ್ತೀಚೆಗೆ ನಡೆದ ಐಎಎಸ್ ಪರೀಕ್ಷೆಗಳ ಭಾಗವಾಗಿ ಅಭ್ಯರ್ಥಿಗಳ ಸಂದರ್ಶನದಲ್ಲಿ ಕರ್ನಾಟಕದ ಹಿರಿಯ ಅಧಿಕಾರಿಯೊಬ್ಬರು ಕರ್ನಾಟಕದ ಅಭ್ಯರ್ಥಿಗಳನ್ನು ಹೀಗೊಂದು ಪ್ರಶ್ನೆ ಕೇಳಿದರಂತೆ "ನೀವು ನೋಡಲ್ ಅಧಿಕಾರಿಯಾಗಿ ನೇಮಿಸಲ್ಪಟ್ಟರೆ ಕರ್ನಾಟಕವನ್ನು ಹೇಗೆ ಮಾರುತ್ತೀರಿ?". ಪ್ರಶ್ನೆ ಎಷ್ಟು ಸಹಜವಾಗಿತ್ತೆಂದರೆ ಅಭ್ಯರ್ಥಿಗಳು ಈ ಪ್ರಶ್ನೆಯನ್ನು ಅಸಹಜವೆಂದು ಭಾವಿಸಿದರೆ ಅವರು ಐಎಎಸ್ ಅಧಿಕಾರಿಯಾಗಲು ಅನರ್ಹ ಎಂಬಂತೆ! ಇದೇ ರೀತಿಯ ಅನುಭವ ನನಗೂ ಹದಿನೈದು ವರ್ಷದ ಕೆಳಗೆ ದೆಹಲಿಯ ಪ್ರಗತಿ ಮೈದಾನದಲ್ಲಿ ಆಗಿತ್ತು, ಅಲ್ಲಿ ವಿಶ್ವದ ಹಲವೆಡೆಗಳಿಂದ ಬರುವ ಬಹುರಾಷ್ಟ್ರೀಯ ಕಂಪನಿಗಳಿಗೆ ಭಾರತದಲ್ಲಿ ಬಂಡವಾಳ ಹೂಡಿಕೆ ಮಾಡುವಂತೆ ಪುಸಲಾಯಿಸಲು ಎಲ್ಲಾ ರಾಜ್ಯದವರೂ "ಅಂಗಡಿ"ಗಳನ್ನು ತೆರೆದಿಟ್ಟುಕೊಂಡಿದ್ದರು. ಅಲ್ಲಿ ಇನ್ಚಾರ್ಜ್ ಆಗಿ ಕರ್ನಾಟಕದ "ಉದ್ಯೋಗ ಮಿತ್ರ" ಇಲಾಖೆಯಿಂದ ನೇಮಕವಾಗಿದ್ದ ಅಧಿಕಾರಿಯೊಬ್ಬರು ತಮ್ಮ ಕೆಲಸವನ್ನು ವಿವರಿಸಿದ್ದೂ ಹೀಗೆಯೇ! **"Well, I am here to sell Karnataka and I am doing my duty sincerely"** - ನನಗಿಲ್ಲಿ ಕರ್ನಾಟಕವನ್ನು ಮಾರುವ ಕೆಲಸ ಕೊಟ್ಟಿದ್ದಾರೆ ಮತ್ತು ನಾನದನ್ನು ನಿಷ್ಠೆಯಿಂದಲೇ ಮಾಡುತ್ತಿದ್ದೇನೆ!

ಆಗಿನ್ನು ಜಾಗತೀಕರಣದ ಪ್ರಾರಂಭದ ಕಾಲ. ಮಾರುಕಟ್ಟೆ ಆರ್ಥಿಕತೆ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ರಾಜ್ಯವನ್ನು ಮಾರುವ ಕೈಂಕರ್ಯ ಇನ್ನೂ ಅಷ್ಟೊಂದು ಜನಮಾನ್ಯವಾಗಿರಲಿಲ್ಲ. ಆಗಲೇ ನಮ್ಮ ಸರ್ಕಾರ ನಿರ್ಲಜ್ಜೆಯಿಂದ ಕರ್ನಾಟಕವನ್ನು ಅತಿ ಲಾಭದ ದರಕ್ಕೆ ಮಾರಿಕೊಳ್ಳುವುದೇ ಯಶಸ್ವಿ ಆಡಳಿತವೆಂದು ಭಾವಿಸಿಬಿಟ್ಟಿತ್ತು. ಇದರ ಭಾಗವಾಗಿಯೇ 2000ದ ಜೂನ್‌ನಲ್ಲೂ ಆಗಿನ ಕಾಂಗ್ರೆಸ್ಸಿನ ಎಸ್. ಎಂ. ಕೃಷ್ಣರ ಸರ್ಕಾರ ಜಾಗತಿಕ ಹೂಡಿಕೆದಾರರ ಸಮಾವೇಶ- **Global Investors Meet-GIM** ಅನ್ನು ನಡೆಸಿತ್ತು, ಅದರ ವಿರುದ್ಧ ಪ್ರತಿಭಟನೆ ನಡೆಸಿದ ರೈತರನ್ನೂ ಮತ್ತು ಸಾಮ್ರಾಜ್ಯಶಾಹಿ ವಿರೋಧೀ ದೇಶಭಕ್ತರನ್ನೂ ಜೈಲಿಗೆ ಅಟ್ಟಿ ಸಮಾವೇಶವನ್ನು ಯಶಸ್ವಿಗೊಳಿಸಿಕೊಂಡಿತ್ತು. ಕರ್ನಾಟಕದ ಜನ ವಿಧಾನ ಸೌಧದ ಒಂದು ಕಿಮೀ ಸುತ್ತ ಪ್ರತಿಭಟಿಸುವುದನ್ನು ನಿಷೇಧಿಸಿದ್ದ ಸರ್ಕಾರ ಕರ್ನಾಟಕವನ್ನೇ ಲೂಟಿ ಹೊಡೆಯಲು ಬಂದಿದ್ದ ವಿದೇಶಿ ಲೂಟಿಕೋರರನ್ನು ಮಾತ್ರ ವಿಧಾನ ಸೌಧದ ಬಾಂಕ್ವೆಟ್ ಹಾಲಿನೊಳಗೆ ಕೆಂಪು ಹಾಸು ಹಾಕಿ ಸ್ವಾಗತಿಸಿತ್ತು, ಅಂದು ನಾಡಿನ ಲೂಟಿಕೋರರನ್ನೇ ಸನ್ಮಾನಿಸುತ್ತಿದ್ದ ನವಸಾಹತುಶಾಹಿ ಧೋರಣೆಯ ವಿರುದ್ಧ ಹೋರಾಡಿದ ದೇಶಭಕ್ತರಲ್ಲಿ 'ನಮ್ಮದು ದೇಶಭಕ್ತ ರಾಜಕೀಯ ಪಕ್ಷ' ಎಂದು ಹೇಳಿಕೊಳ್ಳುವ ಯಾವೊಬ್ಬ ಬಿಜೆಪಿಯವನಾಗಲೀ, ಸಂಘಪರಿವಾರದವರಾಗಲೀ ಇರಲಿಲ್ಲ.





ಈಗ ಜಾಗತೀಕರಣ ಪ್ರಾರಂಭವಾಗಿ ಇಪ್ಪತ್ತು ವರ್ಷಗಳಾಗಿವೆ. ಅದರಲ್ಲೂ ಕಳೆದ ಒಂದು ದಶಕದಲ್ಲಿ ನಾಡಿನ ಸಂಪತ್ತೆಲ್ಲಾ ಅತಿವೇಗವಾಗಿ ವಿದೇಶಿ ಕಂಪನಿಗಳ ಪಾಲಾಗಿದೆ. ಹೀಗಾಗಿ ನಾಡನ್ನು ಮಾರಿಕೊಳ್ಳುವುದು ಮತ್ತು ಅದನ್ನು ನಿರ್ಲಜ್ಜೆಯಿಂದ ಮತ್ತು ಯಶಸ್ವಿಯಾಗಿ ಮಾಡುವುದೇ ಒಂದು ಸರ್ಕಾರದ ಆಧುನಿಕತೆ ಮತ್ತು ಪ್ರಗತಿಪರತೆಯ ಸಂಕೇತವಾಗಿದೆ. ನಾಡನ್ನು ಮಾರಿಕೊಳ್ಳುವಲ್ಲಿ ಎಲ್ಲಾ ಬ್ರಾಂಡಿನ ಪಕ್ಷಗಳಲ್ಲೂ ಒಂದು ಬಗೆಯ ಪೈಪೋಟಿಯೇ ಏರ್ಪಟ್ಟಿದೆ. ವಾಸ್ತವವಾಗಿ ನಾಡನ್ನು ಹರಾಜು ಮಾಡುವ ಪೈಪೋಟಿಯಲ್ಲಿ ಕಾಂಗ್ರೆಸ್‌ಗೆ ಅತ್ಯಂತ ಸಮೀಪದ ಪ್ರತಿಸ್ಪರ್ಧಿ "ದೇಶಭಕ್ತ ಬಿಜೆಪಿ" ಪಕ್ಷವೇ! ಮೋದಿಯ ಗುಜರಾತ್ ಅದಕ್ಕೆ ಅತಿದೊಡ್ಡ ಸಾಕ್ಷಿ.

ಕರ್ನಾಟಕವನ್ನು ಎಲ್ಲಾ ರೀತಿಯಲ್ಲೂ ಮೋದಿಯ ಗುಜರಾತ್ ಮಾಡಲು ಹೊರಟಿರುವ ಯಡಿಯೂರಪ್ಪನ ಬಿಜೆಪಿ ಸರ್ಕಾರ ಇಡೀ ಕನ್ನಡ ನಾಡನ್ನೇ ದುಗ್ಗಾಣಿ ಬೆಲೆಗೆ ಹರಾಜು ಮಾಡಲು ಇದೇ ಜೂನ್ 3 ಮತ್ತು 4ರಂದು ಬೆಂಗಳೂರಿನಲ್ಲಿ ಎರಡನೇ ಜಾಗತಿಕ ಹೂಡಿಕೆದಾರರ ಸಮಾವೇಶ- **Global Investors Meet-GIM** ಅನ್ನು ನಡೆಸುತ್ತಿದೆ. ಕಳೆದ ಕೆಲ ವಾರಗಳಿಂದ ಕರ್ನಾಟಕದ ಎಲ್ಲಾ ದಿನಪತ್ರಿಕೆಗಳಲ್ಲಿ ಸರ್ಕಾರ ಮತ್ತು ವಿವಿಧ ಇಲಾಖೆಗಳು ಇದರ ಬಗ್ಗೆ ಪೂರ್ಣ ಪುಟದ ಜಾಹೀರಾತನ್ನು ನೀಡುತ್ತಿವೆ. ಈ ಜಾಹಿರಾತು ವೆಚ್ಚಕ್ಕೆಂದು ಸರ್ಕಾರ ನಿಗದಿಮಾಡಿರುವ ಮೊತ್ತವೆಷ್ಟು ಗೊತ್ತೆ? 22 ಕೋಟಿ ರೂಪಾಯಿಗಳು! ಉತ್ತರ ಕರ್ನಾಟಕದ ನೆರೆ ಸಂತ್ರಸ್ತರ ಪುನರ್ವಸತಿಗಾಗಿ ಕಳೆದ ಒಂದು ವರ್ಷದಿಂದ ಸರ್ಕಾರ ವೆಚ್ಚ ಮಾಡಿರುವ ಹಣಕ್ಕಿಂತ ಇದು ಹೆಚ್ಚು! ಗುಲ್ಬರ್ಗದಲ್ಲಿ 34 ತಿಂಗಳಿಂದ ಸಂಬಳವಿಲ್ಲದೆ ಉಪವಾಸ ಸತ್ಯಾಗ್ರಹ ಮಾಡುತ್ತಾ ಪೌರಕಾರ್ಮಿಕರು ಸಾಯುತ್ತಿದ್ದಾರಲ್ಲ ಅವರ ಸಂಬಳವನ್ನೆಲ್ಲಾ ಒಂದೇ ಬಾರಿ ಪಾವತಿ ಮಾಡಲು ಇದರ ಅರ್ಧಕ್ಕಿಂತಲೂ ಕಡಿಮೆ ಹಣ ಸಾಕು! ಇದರಿಂದಲೇ ಈ ದೇಶಭಕ್ತರ ಭಕ್ತಿ ಯಾರ ಕಡೆಗಿದೆ ಎಂಬುದು ಮತ್ತು ಇವರು ಯಾವ ದೇವರ ವಿಭೂತಿಯನ್ನು ನೆಚ್ಚಿಕೊಳ್ಳುವವರು ಎಂಬುದೂ ಗೊತ್ತಾಗುತ್ತದೆ.

ಸರ್ಕಾರ ಈ ಸಮಾವೇಶ ನಡೆಯುವ ಮುನ್ನವೇ ಇದರಿಂದಾಗಿ ರಾಜ್ಯಕ್ಕೆ ಏನಿಲ್ಲವೆಂದರೂ 3 ಲಕ್ಷ ಕೋಟಿ ರೂಪಾಯಿಗಳಷ್ಟು ಬಂಡವಾಳ ಹರಿದು ಬಂದು 3 ಲಕ್ಷ ಉದ್ಯೋಗ ಸೃಷ್ಟಿಯಾಗುತ್ತವೆ ಎಂದು ಬೊಗಳೆ ಬಿಡುತ್ತಿದೆ. ಅಲ್ಲದೆ ಈಗಾಗಲೇ 50 ಕೋಟಿಗೂ ಹೆಚ್ಚಿನ ಬಂಡವಾಳ ಹೂಡುವ 108 ಯೋಜನೆಗಳಿಗೂ ಹಾಗೂ 3-50 ಕೋಟಿ ಬಂಡವಾಳ ಹೂಡಿಕೆಯಾಗುವ 228 ಯೋಜನೆಗಳಿಗೂ ಅನುಮತಿ ನೀಡಲಾಗಿದೆ ಎಂದೂ ಹೇಳುತ್ತಿದೆ. ಇದರಲ್ಲಿ 1.66 ಲಕ್ಷ ಕೋಟಿ ರೂಪಾಯಿಯಷ್ಟು ಬಂಡವಾಳ ಬಳ್ಳಾರಿ ವಲಯಕ್ಕೂ ಹಾಗೂ ಬಾಗಲಕೋಟೆ ವಲಯಕ್ಕೆ 32, 900 ಕೋಟಿ ರೂಪಾಯಿ ಬಂಡವಾಳ ಹರಿದುಬರುವುದರಿಂದ ಉತ್ತರ ಕರ್ನಾಟಕ ಈ ಸಮಾವೇಶದ ಬೃಹತ್ ಫಲಾನುಭವಿಯಾಗಲಿದೆಯೆಂದು ಬೃಹತ್ ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿ ಹೇಳುತ್ತಿದ್ದಾರೆ. ಇದಕ್ಕೆ ಪೂರ್ವಭಾವಿಯಾಗಿ ಇದರ ಬಗ್ಗೆ ಕೊರಿಯಾ, ಸಿಂಗಪೂರ್, ಯೂರೋಪುಗಳಲ್ಲೂ, ಭಾರತದ ಚೆನ್ನೈ ಇತ್ಯಾದಿ ಬೃಹತ್ ನಗರಗಳಲ್ಲೂ ರೋಡ್ ಶೋಗಳನ್ನು ನಡೆಸಲಾಗಿದೆ. ಅಂದರೆ ಕರ್ನಾಟಕದಲ್ಲಿ ಏನೆಲ್ಲಾ ಆಕರ್ಷಕ ಲಾಭದ ದಾರಿಗಳಿವೆ ಎಂದು ದೇಶದ ಮತ್ತು ಜಗತ್ತಿನ ಬಂಡವಾಳಿಗರ ಮುಂದೆಲ್ಲಾ ಪ್ರದರ್ಶನ ನಡೆಸಿ ಆಹ್ವಾನಿಸಲಾಗಿದೆ. ಇವಕ್ಕೆಲ್ಲಾ ಎಷ್ಟು ಕೋಟಿ ರೂಪಾಯಿ ಖರ್ಚಾಗಿರಬಹುದು? ಅಲ್ಲದೆ ಜೂನ್ 3-4ರಂದು ನಡೆಯುವ ಸಮಾವೇಶಕ್ಕೆ ಎಷ್ಟು ಕೋಟಿ ವೆಚ್ಚವಾಗಬಹುದು?

ಯಡಿಯೂರಪ್ಪನವರ ನೆಚ್ಚಿನ ಅಧಿಕಾರಿಯಾದ ಮೇಲೆ ತಮ್ಮ ನಾಲಿಗೆಯನ್ನು ಬಿಜೆಪಿಗೆ ಗುತ್ತಿಗೆಗೆ ಕೊಟ್ಟಿರುವ ಬಳಿಗಾರ್‌ರವರ ಪ್ರಕಾರ ಇದಕ್ಕೆ ಬೊಕ್ಕಸದಿಂದ ಒಂದು ಪೈಸೆಯೂ ವೆಚ್ಚವಾಗುತ್ತಿಲ್ಲ, ಈಗಾಗಲೇ ಬಂಡವಾಳ ಹೂಡಲು ಬಯಸುವ ಕಂಪನಿಗಳು 600 ಕೋಟಿಯಷ್ಟು ಅಡ್ವಾನ್ಸ್ ದುಡ್ಡು ಕೊಟ್ಟಿವೆ. ಅದರ ಬಡ್ಡಿಯಲ್ಲಿ 20 ಕೋಟಿ ಬರಲಿದ್ದು ಆ ಹಣದಲ್ಲಿ ಈ ಜಾಹಿರಾತು, ರೋಡ್ ಶೋ ಮತ್ತು ಸಮಾವೇಶದ ವೆಚ್ಚಗಳನ್ನೆಲ್ಲಾ ಭರಿಸಲಾಗುತ್ತಿದೆ ಎಂದು ಬೊಗಳೆ ಬಿಟ್ಟಿದ್ದಾರೆ.

ಬಂಡವಾಳ ಹೂಡಲು ಒಪ್ಪಿಕೊಂಡ ಕಂಪನಿಗಳು ಅಡ್ವಾನ್ಸ್ ದುಡ್ಡುಕೊಟ್ಟಿವೆ ಎಂದು ಹೇಳುತ್ತಾ ಸರ್ಕಾರ ಕರ್ನಾಟಕದ ಜನತೆಯ ಕಿವಿಗೆ ಹೂವನ್ನಲ್ಲ, ಲಾಲ್‌ಬಾಗನ್ನೇ ಮುಡಿಸಲು ಹೊರಟಿದೆ! ಏಕೆಂದರೆ ಬಂಡವಾಳ ಹೂಡಿ ಎಂದು ಭಿಕ್ಷಾಟನೆ ಮಾಡುತ್ತಿರುವುದು ಕರ್ನಾಟಕ ಸರ್ಕಾರ. ಕರ್ನಾಟಕದ ತರಹವೇ ಮಹಾರಾಷ್ಟ್ರ, ಒರಿಸ್ಸಾ, ಮಧ್ಯಪ್ರದೇಶ ಸರ್ಕಾರಗಳೂ ಭಿಕ್ಷಾಪಾತ್ರೆ ಎತ್ತಿಕೊಂಡು ಪ್ರಪಂಚ ಪರ್ಯಟನೆ ಮಾಡುತ್ತಿವೆ. ಯಾವ ರಾಜ್ಯದಲ್ಲಿ ಹೆಚ್ಚು ರಿಯಾಯತಿ, ಲಾಭ, ವಿನಾಯತಿ ಸಿಗುತ್ತದೋ ಅಲ್ಲಿ ಮಾತ್ರ ಆ ರಾಜ್ಯವನ್ನು ಅವರು ಆಯ್ಕೆ ಮಾಡಿಕೊಳ್ಳುತ್ತಾರೆ. ಏಕೆಂದರೆ ಅವರು ನಮ್ಮನ್ನು ಕೇಳಿಕೊಂಡು ಬಂದಿಲ್ಲ, ನಾವು ಕೇಳಿಕೊಂಡು ಹೋಗುತ್ತಿದ್ದೇವೆ. ಹೀಗಾಗಿ ಅಡ್ವಾನ್ಸ್ ಕೊಟ್ಟರೆ ಮಾತ್ರ ನಮ್ಮ ರಾಜ್ಯಕ್ಕೆ ಪ್ರವೇಶ ಎಂದರೆ ಯಾವ ಬಂಡವಾಳಿಗನೂ ಕರ್ನಾಟಕದಲ್ಲಿ ಕಾಲಿಡುವುದಿಲ್ಲ. ಕಂಪನಿಗಳು ಸರ್ಕಾರಕ್ಕೆ ಅಡ್ವಾನ್ಸಾಗಿ ಹಣ ಕೊಡುವುದಿರಲಿ, ರಾಜ್ಯ ಸರ್ಕಾರವೇ ಈ ಕಂಪನಿಗಳಿಗೆ ತನ್ನ ಬೊಕ್ಕಸದಿಂದ ಹೇಗೆ ಬಂಡವಾಳವನ್ನು ಒದಗಿಸುತ್ತದೆ ಎಂಬುದನ್ನು ನಂತರ ನೋಡೋಣ! ಹೀಗಾಗಿ ಅಡ್ವಾನ್ಸಾಗಿ ಸಿಕ್ಕ ಹಣದಿಂದ ಈ ಸಮಾವೇಶ ನಡೆಯುತ್ತಿದೆ ಎಂಬುದು ಹಸಿಹಸಿ ಸುಳ್ಳು!

ಇದರಷ್ಟೇ ಹಸಿ ಸುಳ್ಳು ಈ ಸಮಾವೇಶದಲ್ಲಿ ಮೂರು ಲಕ್ಷ ಕೋಟಿ ರೂ. ಬಂಡವಾಳ ಹರಿದುಬಂದು ಮೂರು ಲಕ್ಷ ಉದ್ಯೋಗಗಳು ದೊರೆಯುತ್ತವೆ ಎಂಬುದು. ಏಕೆಂದರೆ ರಿಸರ್ವ್ ಬ್ಯಾಂಕ್ ಮತ್ತು ಕೇಂದ್ರ ಸರ್ಕಾರ ಕೈಗಾರಿಕಾ ಅಂಕಿಅಂಶ ಇಲಾಖೆಯು 2010ರ ಮಾರ್ಚ್‌ನಲ್ಲಿ ನೀಡಿರುವ ವರದಿಯ ಪ್ರಕಾರ 2000-2010ರ ನಡುವಿನ ಹತ್ತು ವರ್ಷಗಳಲ್ಲಿ ಒಟ್ಟಾರೆ ಭಾರತಕ್ಕೆ ಹರಿದು ಬಂದ ವಿದೇಶಿ ಬಂಡವಾಳದ ಮೊತ್ತವೇ ಕೇವಲ 4,68,000 ಕೋಟಿ ರೂಪಾಯಿಗಳು. ಅದರಲ್ಲಿ ಸಿಂಹಪಾಲು ಪಡೆದದ್ದು ಮುಂಬೈ ಪ್ರಾಂತ್ಯ, ಮೂಲಭೂತ ಸೌಕರ್ಯ, ರಸ್ತೆ ಸಂಪರ್ಕ, ಮಾನವ ಸಂಪನ್ಮೂಲ ಇನ್ನಿತ್ಯಾದಿಗಳಲ್ಲಿ ಬಂಡವಾಳಿಗರ ಸ್ವರ್ಗವಾಗಿರುವ ಮುಂಬೈ ವಲಯಕ್ಕೆ ಕಳೆದ ಹತ್ತು ವರ್ಷಗಳಲ್ಲಿ ಹರಿದುಬಂದಿರುವ ವಿದೇಶಿ ಬಂಡವಾಳ ಕೇವಲ 1,69,691 ಕೋಟಿ ರೂಪಾಯಿಗಳು. ಎರಡನೇ ▶▶ 16

ನೋ ಕಾಮೆಂಟ್ಸ್

"ಛತ್ತೀಸಘಡದಲ್ಲಿರುವ ಗಣಿಸಂಪತ್ತಿನ ಒಡೆತನ ಯಾರಿ ಸೇರಬೇಕು? ಅದರ ನಿಜವಾದ ಹಕ್ಕುದಾರರು ಈ ದೇಶ ಜನತೆ. ಆದರೆ ಅದನ್ನು ಕಾರ್ಪೊರೇಟ್ ಸಂಸ್ಥೆಗಳ ಮಾರಿಕೊಳ್ಳುತ್ತಿರುವುದರಿಂದಲೇ ಮಾವೋವಾ ಹುಟ್ಟಿಕೊಂಡಿದೆ. ಆಂಧ್ರದಲ್ಲಿ ಗ್ರೇ ಹೌಂಡ್ಸ್ ಪೊಲೀಸ್ ಕಾರ್ಯಾಚರಣೆ ನಕ್ಸಲ್ ಚಳವಳಿಗೆ ತಾತ್ಕಾಲಿಕ ತ ಒಡ್ಡಿರಬಹುದು. ಆದರೆ ಅಲ್ಲಿಯೂ ಭೂಹಂಚಿಕೆಯು ಕೈಗೊಳ್ಳದಿದ್ದರೆ ನಕ್ಸಲ್ ಮರುಹುಟ್ಟುಪಡೆಯುವುದ ಖಂಡಿತ"

- ರಾಮಮೋಹನ್, ಬಿಎಸ್‌ಎಫ್‌ನ ಮಾ ಡೈರೆಕ್ಟರ್ ಜನರಲ್ ಮತ್ತು ದಾಂತೇವಾ ದುರಂತವನ್ನು ಅಧ್ಯಯನ ಮಾಡಲು ನೇಮಕವಾ ಸಮಿತಿ ಅಧ್ಯ

"ಯಾರ್ಯಾರೋ ಮಾಡುವ ತಪ್ಪುಗಳಿಂದ ದೇಶದಲ್ಲಾಗು ಹಿಂಸಾಚಾರ ಹಾಗೂ ಗಣಿಯಂತ ಪ್ರಾಕೃತಿಕ ಸಂಪತ್ತ ಕೊಳ್ಳೆಹೊಡೆಯುವ ಲೂಟಿಕೋರರ ತಪ್ಪುಗಳ ಸಿಆರ್‌ಪಿಎಫ್ ಯೋಧರು ಬಲಿಯಾಗುತ್ತಿದ್ದಾರೆ."

- ಬಾಬಾ ರಾಮದೇ

"ನಾನು ನಕ್ಸಲ್ ಚಳವಳಿಯನ್ನು ಬಹಳ ವರ್ಷಗಳಿಂ ಗಮನಿಸುತ್ತಿರುವೆ. ಅವರು ಪೊಲೀಸ್ ಮಾಹಿತಿದಾರರಾ ಕಾರ್ಯನಿರ್ವಹಿಸುತ್ತಿರುವವರನ್ನು ಹೊರತುಪಡಿಸಿ ಸಾಮಾ ಜನರ ಮೇಲೆ ದಾಳಿ ಮಾಡಿಲ್ಲ."

- ಲಾಲೂ ಪ್ರಸಾದ್ ಯಾದ

"ನಮ್ಮಲ್ಲಿ ಶೇ.97ರಷ್ಟು ಮಕ್ಕಳು ಉದ್ಯೋಗವ ದೃಷ್ಟಿಯಲ್ಲಿಟ್ಟುಕೊಂಡು ಕಲಿಯುತ್ತಾರೆ. ಆದರೆ 100ಕ್ಕೆ ಜನರಿಗೆ ಮಾತ್ರ ಉದ್ಯೋಗ ಸಿಗುತ್ತದೆ. ಈ ಪೈಕಿ ಇಬ್ಬರ ಮಾತ್ರ ಸರ್ಕಾರಿ ನೌಕರಿ ದೊರೆತರೆ ಆರು ಮಂದಿ ಖಾಸಗಿಯಲ್ಲಿ ನೌಕರಿ ದೊರೆಯುತ್ತದೆ. ಉಳಿದವರು ನೌ ಹುಡುಕುವುದರಲ್ಲೇ ತಮ್ಮ ಯೌವನವನ್ನು ಕಳೆದುಬಿಡುತ್ತಾ

- ಸೋದಂ, ಶಿಕ್ಷಣ ತ

"ಈ ಸಾವಯವ ಕೃಷಿ ಸಮಾವೇಶದಲ್ಲಿ ಸಾವಯ ಕೃಷಿ ಕುರಿತು ಉಪನ್ಯಾಸ, ಚರ್ಚೆ, ಸಂವಾದ ಏನ ನಡೆಯದಿರುವುದು ಬೇಸರದ ಸಂಗತಿ. ಗ್ರಾಮಪಂಚಾ ಚುನಾವಣೆಗಳಲ್ಲಿ ಗೆದ್ದಿರುವ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳ ಕರೆತರಲಾಗಿದ್ದು ಸಾವಯವ ಕೃಷಿ ಪರಿವಾರದ ಹೆಸರ ಸಂಘಪರಿವಾರದ ಸಮಾವೇಶ ನಡೆಯುತ್ತಿದೆ."

- ಶ್ರೀಶೈಲ್ ಪಾಟೀಲ್, ಸಭೆಗೆ ಬಂದಿದ್ದ ರೈ ಪ್ರತಿನಿ

"ಮುಖ್ಯಮಂತ್ರಿಗಳು ಹಾಗೂ ಯಾವುದಾದರ ಮಂತ್ರಿಗಳು ನೆರೆಪೀಡಿತ ಉತ್ತರ ಕರ್ನಾಟಕಕ್ಕೆ ಬಂ ನಮಸ್ಕಾರ ಹಾಕುವ ಬದಲು ಹಿಡಿದು ಒದೆಯಿ ನೆರೆಹಾವಳಿ ಸಂಭವಿಸಿ ವರ್ಷವಾಗುತ್ತಿದೆ. ನಾಚಿಕೆಯಿಲ ಈ ಸರ್ಕಾರ ಈವರೆಗೆ ಯಾರಿಗೂ ಸರಿಯಾದ ಪರಿಹ ಒದಗಿಸಿಲ್ಲ."

- ಎಚ್.ಡಿ. ಕುಮಾರಸ್ವಾ

ನಂಬಿದ್ರೆನಂಬಿ ಬಿಟ್ರೆಬಿಡಿ

"ಗೋವಾ ಸ್ವಾತಂತ್ರ್ಯ ಹೋರಾಟಗಾರರಿಗೆ ಮಾ 2,000ರೂ ಮಾಸಾಶನ ಬಿಡುಗಡೆ ಮಾಡುವ ಸಂಬಂಧಿಸಿದ ಆಡಳಿತ ಸುಧಾರಣಾ ಇಲಾಖೆ ಆದೆ ಹೊರಡಿಸಿದೆ. ಆದರೆ 2010-11ನೇ ಸಾಲಿನ ಬಜೆಟ್ಟ ಅದಕ್ಕೆ ಹಣವನ್ನೇ ಒದಗಿಸಿಲ್ಲವೆಂದು ಖಜಾನೆ ಇಲ ಹೇಳುತ್ತಿದೆ."

- ಮುನಿಯಪ್ಪ, ಗೋವಾ ಹೋರಾಟಗಾ ಸಂಘದ ಅಧ್ಯ

"ನಾನೂ ಕೂಡಾ ಕಮ್ಯುನಿಸ್ಟೇ. ಈಗಲೂ ನಾ ಕಮ್ಯುನಿಸ್ಟೇ. ಆದರೂ ಬಂಡವಾಳವಾದ ಚೀನಾಗೆ ಒಳ್ಳೆಯದು ಮಾಡಿದೆ ಎಂದು ಹೇಳುವಲ್ಲಿ ನನಗೇನೂ ಹಿಂಜರಿಕೆಯಿ

- ದಲಾಯಿ ಲಾ

ದಿಗಂಬರಗೊಂಡ ಮಹಿಳಾ ಮೀಸಲಾ ವಿರೋಧಿಗಳ ಅಸಲಿ ಮುಖ!

"ಮಹಿಳೆಯರು ರಾಜಕಾರಣಕ್ಕೆ ಬಂದರೆ ಅ ಸಮಾಜದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತ ಮಹಿಳೆಯರೇ ಶೇ.33 ಮೀಸಲಾತಿ ರಾಜಕಾರಣ ಬಲಿಬೀಳಬೇಡಿ. ರಾಜಕೀಯ ನಿಮ್ಮನ್ನು ತ ದಾರಿಗೆಳೆಯುತ್ತದೆ. ಮಹಿಳೆಯರು ಮುಂದಿನ ಪೀಳಿಗೆ ಲಾಲನೆ ಮತ್ತು ಪೋಷಣೆಯನ್ನು ನೋಡಿಕೊಳ್ಳುವ ಮೂ ಸಮಾಜದ ಬದಲಾವಣೆಯಲ್ಲಿ ಮಹತ್ತರ ಪಾ ವಹಿಸಬೇಕು."

- ದಿಗಂಬರ್ ಕಾಮತ್, ಗೋವ ಬಿಜೆಪಿ ಮುಖ್ಯಮ

ಬಿರ್ಸಾ ಮುಂಡ ನೆನಪಿನಲ್ಲಿ...



ಕಂಡಹಾಗೆ

ಗೌರಿ ಲಂಕೇಶ್

ಬಿರುವ ಜೂನ್ 9 ಕ್ಕೆ ಬಿರ್ಸಾ ಮುಂಡ ...ರಿಕೊಂಡು 110 ವರ್ಷಗಳಾಗುತ್ತದೆ. ಈ ನೂರಾ ...ತ್ತು ವರ್ಷಗಳಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ...ತ್ತಿನಲ್ಲೇ ಭಾರತ ಅತಿ ದೊಡ್ಡ ಪ್ರಜಾಪ್ರಭುತ್ವ ...ಸಿಕೊಂಡಿದೆ. ಈಗ ಭವಿಷ್ಯದ ಸೂಪರ್ ಪವರ್ ...ವ ಹಂಬಲದಲ್ಲಿದೆ. ಭಾರತ ರಾಕೆಟ್‌ಗಳನ್ನು ...ರಿಸಿದೆ, ಅಣುಬಾಂಬ್ ಅನ್ನು ಸ್ಫೋಟಿಸಿದೆ, ಚಂದ್ರನ ... ಉಪಗ್ರಹವನ್ನು ಕಳುಹಿಸಿದೆ. ಐಟಿ ಕ್ರಾಂತಿ, ... ಭ್ರಾಂತಿ, ಮಾಲ್ ಸಂಸ್ಕೃತಿ, ಐಪಿಎಲ್ ಕುತಂತ್ರ, ...ಮಾ ಮಂತ್ರ, ಚುನಾವಣೆಗಳೆಂಬ ಗಿಮ್ಮಿಕ್ಕು, ...ಟ್ಯಾಧಿಪತಿಗಳ ಧಿಮಾಕು.... ಎಷ್ಟೆಲ್ಲಾ ಬದಲಾ...ಣೆಗಳಾಗಿವೆ...



... 110 ವರ್ಷಗಳು...

... ಆದರೆ ಈ ದೇಶದ ಆದಿವಾಸಿಗಳ ಬದುಕಿನಲ್ಲಿ ಮಾತ್ರ ...ತ್ತೂ ಬದಲಾವಣೆಗಳಾಗಿಲ್ಲ. ಅವರ ಶೋಷಕರ ಸ್ಥಾನದಲ್ಲಿ ...ಟಿಷರ ಬದಲಾಗಿ ಭಾರತೀಯರು ಬಂದಿದ್ದಾರೆ. ಅವರು ...ಸುವ ಕಾಡುಗಳು ಇನ್ನೂ ಸರ್ಕಾರದ ಸ್ವತ್ತೇ ಆಗಿದೆ. ...ರೆಲ್ಲರ ಬದುಕು ಅಂದು ಎಷ್ಟು ಅತಂತ್ರವಾಗಿತ್ತೋ ...ದಿಗೂ ಅಷ್ಟೇ ಅತಂತ್ರವಾಗಿ ಮುಂದುವರೆದಿದೆ. ...ರಾರು ವರ್ಷಗಳ ಹಿಂದೆ ಅವರು ಕೈಗೆತ್ತಿಕೊಂಡ ...ಲ್ಲುಬಾಣಗಳನ್ನು ಅವರಿನ್ನೂ ಕೆಳಗಿಟ್ಟಿಲ್ಲ. ಆದರೆ ಅವರ ...ದಯದಲ್ಲಿರುವ ಆಕ್ರೋಶ ಮಾತ್ರ ವರ್ಷವರ್ಷಕ್ಕೆ ...ಚ್ಚಾಗುತ್ತಲೇ ಹೋಗುತ್ತಿದೆ. ಅವರಲ್ಲಿ ಸ್ವಾಭಿಮಾನದ ...ನ್ನು ಹಚ್ಚಿಸಿದ ಬಿರ್ಸಾ ಮುಂಡನ ಹೋರಾಟವನ್ನು ...ರು ಮುಂದುವರೆಸುತ್ತಿದ್ದಾರೆ....


... ಯಾರು ಈ ಬಿರ್ಸಾ ಮುಂಡ?

... ಭಗತ್ ಸಿಂಗ್ ಹುಟ್ಟುವುದಕ್ಕೂ ಮುನ್ನ, ಮಹಾತ್ಮಾ ...ಧಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗುವುದಕ್ಕೂ ...ನ್ನ ಬ್ರಿಟಿಷ್ ಸಾಮ್ರಾಜ್ಯಕ್ಕೆ ದೊಡ್ಡ ದುಃಸ್ವಪ್ನವಾಗಿದ್ದ ...ರ ವಿರುದ್ಧ ತನ್ನ ಜನರನ್ನು ಸಂಘಟಿಸಿ ಸಶಸ್ತ್ರ ...ರಾಟವನ್ನು ಮಾಡಿದ್ದ, ಆದಿವಾಸಿಗಳ ಸ್ವಾತಂತ್ರ್ಯಕ್ಕಾಗಿ ...ರಾಡಿ ಮಡಿದ ಆದಿವಾಸಿ ನಾಯಕ ಬಿರ್ಸಾ ಮುಂಡ.

... ಅದು ಹತ್ತೊಂಭತ್ತನೆ ಶತಮಾನ. ಭಾರತವನ್ನು ಲೂಟಿ ...ಡೆಯಲೆಂದೇ ಬಂದಿದ್ದ ಬ್ರಿಟಿಷರು ಅಪಾರ ಸಂಪತ್ತಿನ ...ಗಿದ್ದ ಭಾರತದ ಮಧ್ಯಭಾಗದಲ್ಲಿರುವ ಕಾಡುಗಳ ...ಲೆ ತಮ್ಮ ಅಧಿಕಾರ ಸ್ಥಾಪಿಸಲು ಹೊರಟರು. ಆ ...ಗಳಲ್ಲಿ ವಾಸಿಸುತ್ತಿದ್ದ, ಆ ಕಾಡುಗಳನ್ನು ಪೂಜಿಸುತ್ತಿದ್ದ ...ಡುಗಳನ್ನು ರಕ್ಷಿಸುತ್ತಿದ್ದ ಆದಿವಾಸಿಗಳು ಇನ್ನು ಮುಂದೆ ...ನ ಉತ್ಪನ್ನಗಳನ್ನು ಸಂಗ್ರಹಿಸುವಂತಿಲ್ಲ ಎಂದರು ...ಷರು. ಅದೇ ಹೊತ್ತಿಗೆ ಜಾತಿ ವ್ಯವಸ್ಥೆಯಿಂದ 'ನಾಗರಿಕ' ...ತ್ತಿನ ಲೋಭ, ಅಸಮಾನತೆಯಿಂದ ಹೊರತಾಗಿದ್ದ ...ವಾಸಿಗಳನ್ನು 'ಹಿಂದೂ' ವ್ಯಾಪಾರಸ್ಥರು ಮತ್ತು ...ಾದೇವಿಗಾರರು ಸುಲಿಯಲಾರಂಭಿಸಿದರು. ಇವೆರಡರ ...ೈ ಕ್ರಿಶ್ಚಿಯನ್ ಮತಾಂತರಿಗಳು ಆದಿವಾಸಿಗಳನ್ನು ತಮ್ಮ ...ರ್ಮಕ್ಕೆ ಸೇರಿಕೊಳ್ಳಲು ಹೊಂಚು ಹಾಕುತ್ತಿದ್ದರು.

... ಹೀಗೆ ತಮ್ಮ ಅಸ್ತಿತ್ವ, ತಮ್ಮ ಸಂಸ್ಕೃತಿ ಮತ್ತು ಭೇದಭಾವ ...ುದೇ ಗೊತ್ತಿಲ್ಲದಿದ್ದ ತಮ್ಮ ಸೌಹಾರ್ದ ಪರಂಪರೆಯ ...ಲೆ ಮೂರು ದಿಕ್ಕುಗಳಿಂದ ದಾಳಿಗಳು ಪ್ರಾರಂಭವಾದಾಗ ...ವಾಸಿಗಳು ವಿವಿಧ ಪ್ರದೇಶಗಳಲ್ಲಿ, ವಿವಿಧ ನಾಯಕರ ...ತ್ವದಲ್ಲಿ ಪ್ರತಿಭಟಿಸಲಾರಂಭಿಸಿದ್ದರು.

... ಅಂತಹ ಸಂದರ್ಭದಲ್ಲಿ ಓರ್ವ ರೈತ ಗುತ್ತಿಗೆದಾರ ...ಂಬದಲ್ಲಿ ಬಿರ್ಸಾ ಮುಂಡ ಜನಿಸಿದ ...75). ಫಲವತ್ತಾದ ಭೂಪ್ರದೇಶದಲ್ಲಿ ...ಡ ದಂಪತಿಗಳದ್ದು ರೈತ ಕುಟುಂಬ. ...ರೂ ಬಡತನ ಎಂಬುದು ಅವರ ...ಯ ಬಾಗಿಲಿಗೆ ತೋರಣವಾಗಿತ್ತು. ...ಟ್ಟೆಪಾಡಿಗಾಗಿ ಮುಂಡಾ ಕುಟುಂಬ ...ನ ಬಿಹಾರ ಮತ್ತು ಜಾರ್ಖಂಡದ ವಿವಿಧ ...ಶಗಳಲ್ಲಿ ಗುತ್ತಿಗೆ ಪಡೆಯುತ್ತಾ ಜೀವನ ...ಸಿತ್ತು.



... ಜಾರ್ಖಂಡದ ಜನಪದಗಳ ಪ್ರಕಾರ ...ನ ಬಾಲ್ಯ ಎಲ್ಲರಂತೆಯೇ ಇತ್ತು. ಇತರೆ ...ುಗರಂತೆ ಆತನೂ ಆಟವಾಡುತ್ತಿದ್ದ, ಬೊಹೊಂಡ ...ಗಳಲ್ಲಿ ಕುರಿ ಕಾಯುತ್ತಿದ್ದ. ಹೀಗೆ ಆಟವಾಡಿಕೊಂಡು ...ುತ್ತಿದ್ದಾಗಲೇ ಬಿರ್ಸಾನಿಗೆ ಕೊಳಲಿನ ಬಗ್ಗೆ ಆಸಕ್ತಿ ...ಯಿತು. ಅದನ್ನು ಆತ ಎಷ್ಟು ಚೆನ್ನಾಗಿ ನುಡಿಸಲು ...ಸೆಂದರೆ ಎಲ್ಲರೂ ಅದನ್ನು ಕೇಳಲೆಂದೇ ಜಮೆ ...ತ್ತಿದ್ದರು. ಅದಾದ ನಂತರ ಬಿರ್ಸಾ ಎಲ್ಲೇ ಹೋದರೂ ...ಕೊಳಲನ್ನು ಸೊಂಟಕ್ಕೆ ಕಟ್ಟಿಕೊಂಡೇ ಹೋಗುತ್ತಿದ್ದ. ...ಬಡತನದ ಅಸಹಾಯಕತೆಯಿಂದ ಬಿರ್ಸಾನ ತಂದೆ ... ತನ್ನ ಇಡೀ ಕುಟುಂಬವನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳಿಸಿದ್ದ. ಈ ಕಾರಣಕ್ಕೆ ಬಿರ್ಸಾನಿಗೆ ಪ್ರಾಥಮಿಕ ಶಾಲೆ ತನಕ ಕ್ರಿಶ್ಚಿಯನ್ನರು ನಡೆಸುತ್ತಿದ್ದ ಶಾಲೆಗಳಲ್ಲಿ ವಿದ್ಯೆ ಪಡೆಯುವ ಅವಕಾಶ ಸಿಕ್ಕಿತು. ಕ್ರಿಶ್ಚಿಯನ್ನನಾಗಿದ್ದಾಗ ಬಿರ್ಸಾನಿಗೆ ದೌದ್ ಪುರ್ತಿ ಎಂದು ಮರುನಾಮಕರಣ ಮಾಡಲಾಗಿತ್ತು.

ಆಗ ಬಿರ್ಸಾನಿಗೆ 13 ವರ್ಷ ವಯಸ್ಸೂ ಆಗಿರಲಿಲ್ಲ. ಆದರೂ ಆತ ಹಲವಾರು ಆತಂಕಗಳಿಂದ ತುಂಬಿದ್ದ. ಒಂದೆಡೆ ಬಡತನದ ಬೇಗೆಯಲ್ಲಿ ಬೇಯುತ್ತಿದ್ದ ತನ್ನಂತಹ ಆದಿವಾಸಿಗಳಿಗೆ ಕ್ರಿಶ್ಚಿಯನ್ ಪಾದ್ರಿಗಳು ತಮ್ಮ ಧರ್ಮದ ಮುಖಾಂತರ ಸಾವಿನ ನಂತರ ಸ್ವರ್ಗ ಪ್ರಾಪ್ತಿಯಾಗುತ್ತದೆ ಎಂದು ಹೇಳುತ್ತಿದ್ದ ಕತೆಗಳಿಂದ ರೋಸಿಹೋದ. ಇನ್ನೊಂದೆಡೆ 'ಹಿಂದೂ' ಧರ್ಮಪ್ರಚಾರಕರು ತಮ್ಮ ಧರ್ಮದ ಶ್ರೇಷ್ಠತೆಯನ್ನು ಕೊಂಡಾಡುತ್ತಲೇ ಆದಿವಾಸಿಗಳ ಸಂಸ್ಕೃತಿಯನ್ನು ಹೀಗಳೆಯುವುದರ ವಿರುದ್ಧವೂ ಆಕ್ರೋಶಗೊಂಡಿದ್ದ.

ಮತ್ತೊಂದೆಡೆ ಬಿಳಿಯರ ಕಾನೂನುಗಳು ಮತ್ತು 'ಹಿಂದೂ' ವ್ಯಾಪಾರಸ್ಥರ ಕಪಟತನದ ನಡುವೆ ತನ್ನ ಜನ ತಮ್ಮ ಭೂಮಿಗಳನ್ನೇ ಕಳೆದುಕೊಂಡು ದಿನಗೂಲಿಗಳಾಗುತ್ತಿರುವುದನ್ನು ನೋಡಿ ಆತಂಕಗೊಂಡಿದ್ದ. ಇದೆಲ್ಲದರ ಮಧ್ಯೆ ಬ್ರಿಟಿಷರ ವಿರುದ್ಧ ಆದಿವಾಸಿಗಳು ದಂಗೆ ಏಳಲಾರಂಭಿಸಿದ್ದರು.

ಆಗ ಬಿರ್ಸಾ ಮತ್ತು ಆತನ ಇಡೀ ಕುಟುಂಬ ಕ್ರಿಶ್ಚಿಯನ್ ಧರ್ಮವನ್ನು ತಿರಸ್ಕರಿಸಿ ತಮ್ಮ ಆದಿವಾಸಿ ಸಂಸ್ಕೃತಿಗೆ ಹಿಂದಿರುಗಿತು. ಅಷ್ಟೊತ್ತಿಗೆ ಬಿರ್ಸಾ 17 ವರ್ಷ ವಯಸ್ಸಿನ ಆಕರ್ಷಕ ಯುವಕನಾಗಿದ್ದ. ಹೊಳಪು ಕಣ್ಣುಗಳ ಸುಂದರನಾಗಿದ್ದ ಬಿರ್ಸಾ ಕೇವಲ ಐದು ಅಡಿ ನಾಲ್ಕು ಇಂಚು ಎತ್ತರದವನಾಗಿದ್ದರೂ ಆದಿವಾಸಿಗಳ ಸಮುದಾಯದಲ್ಲಿ ಆತನೇ ಹೆಚ್ಚು ಎತ್ತರದವನಾಗಿದ್ದ. ಆ ವಯಸ್ಸಿಗೆ ಸಹಜವಾದಂತೆ ಆತನೂ ಓರ್ವ ಆದಿವಾಸಿ ಹುಡುಗಿಯನ್ನು ಪ್ರೇಮಿಸಿ ಅವಳನ್ನು ಮದುವೆ ಆಗುವುದಾಗಿ ಆಕೆಯ ತಂದೆತಾಯಿಗೆ ಹೇಳಿ ನಿಶ್ಚಿತಾರ್ಥವನ್ನು ಮಾಡಿಕೊಂಡ.

ಇದೆಲ್ಲಕ್ಕಿಂತ ಮುಖ್ಯವಾಗಿ ಬಿರ್ಸಾ ತನ್ನ ಆದಿವಾಸಿ ಸಮುದಾಯದಲ್ಲಿ ಸಾಮಾಜಿಕ ನ್ಯಾಯ, ಸಾಂಸ್ಕೃತಿಕ ಪುನರುಜ್ಜೀವನ ಮತ್ತು ಧಾರ್ಮಿಕ ಬದಲಾವಣೆಗಳನ್ನು ತರಲು ಯತ್ನಿಸಿದ. ಆದಿವಾಸಿಗಳ ಮಿಥ್ಯೆ ಮತ್ತು ಸಂಕೇತಗಳನ್ನೇ ಉಪಯೋಗಿಸಿಕೊಂಡು ಅವರಲ್ಲಿ ಮತ್ತೆ ಸ್ವಾಭಿಮಾನ ಮೂಡುವಂತೆ ಮಾಡಿದ.

ಈ ಮಧ್ಯೆ ಬ್ರಿಟಿಷರ ವಿರುದ್ಧದ ಹೋರಾಟಕ್ಕೆ ಮತ್ತು ಆದಿವಾಸಿಗಳಲ್ಲಿ ಹೊಸ ಚೈತನ್ಯವನ್ನು ಮೂಡಿಸಲಿಕ್ಕೆ ಎಂಬ ಕಾರಣದಿಂದಲೋ ಏನೋ ಬಿರ್ಸಾ ತಾನು ದೇವರ ಅವತಾರವೆಂದು ಘೋಷಿಸಿಕೊಂಡ! ತನ್ನ ಈ ಅವತಾರದಲ್ಲಿ ಆತ ಘೋಷಿಸಿದ ಹೊಸ ಧರ್ಮದಲ್ಲಿ ಪ್ರಕೃತಿಯೇ ದೇವರೆಂದು; ಸಮಾನ ಸಮಾಜವೇ ನೀತಿಯೆಂದು; ಸುಳ್ಳು, ವ್ಯಭಿಚಾರ, ಕಳ್ಳತನ, ಭಿಕ್ಷಾಟನೆ, ಕಪಟತನ, ಸ್ವಾರ್ಥಗಳು ನಿಷೇಧ ಎಂದು ಘೋಷಿಸಿದ.

ಆತನ ಈ ಹೊಸ ಧರ್ಮದ ಎಲ್ಲಾ ನೀತಿಗಳು ಆದಿವಾಸಿಗಳ ಸಂಸ್ಕೃತಿಯೊಂದಿಗೆ ಬೆಸೆದುಕೊಂಡಿದ್ದರಿಂದ ಬಹಳ ಬೇಗ ಬಿರ್ಸಾ ಜನಪ್ರಿಯತೆ ಪಡೆದ. ಆತನನ್ನು 'ದೇವಮಾನವ' ಎಂದೂ, 'ಧರ್ತಿ ಅಬ್ಬಾ' (ಭೂಮಿಯ ತಂದೆ) ಎಂದೂ ಜನ ಕೊಂಡಾಡಲಾರಂಭಿಸಿದರು. ಎಲ್ಲ 'ದೇವಮಾನವರ' ಸುತ್ತ ಆಗುವಂತೆ ಬಿರ್ಸಾನ ಸುತ್ತಲೂ ರೋಗಗಳನ್ನು ಗುಣಪಡಿಸುವ, ಸಮಸ್ಯೆಗಳನ್ನು ಪರಿಹರಿಸುವ ಪವಾಡ ಶಕ್ತಿ ಆತನಿಗೆ ಇದೆ ಎಂಬ ದಂತಕತೆಗಳು ಹುಟ್ಟಿಕೊಂಡವು. ಬಿರ್ಸಾನ ಮುಂಡ ಸಮುದಾಯವಲ್ಲದೆ ಇತರೆ ಬುಡಕಟ್ಟು ಸಮುದಾಯಗಳೂ ಆತನ ಹಿಂಬಾಲಕರಾದರು. ಈ ಮಧ್ಯೆ 1893-94 ರಲ್ಲಿ ಬ್ರಿಟಿಷ್ ಸರ್ಕಾರ ಎಲ್ಲಾ ಕಾಡುಗಳನ್ನು ಮತ್ತು ಅವುಗಳಲ್ಲಿದ್ದ ಹಳ್ಳಿಗಳನ್ನು ರಕ್ಷಿತ ಅರಣ್ಯ ಎಂದು ಘೋಷಿಸಿತು. ಆ ಮೂಲಕ ಆದಿವಾಸಿಗಳ ಎಲ್ಲಾ ಹಕ್ಕುಗಳನ್ನು ಕಿತ್ತುಕೊಂಡಿತು. ಬ್ರಿಟಿಷರ ಈ ನೀತಿಯ ವಿರುದ್ಧ ಬಿರ್ಸಾ ತನ್ನ ಜನಪ್ರಿಯತೆಯನ್ನೇ ಸ್ವಾತಂತ್ರ ಸಂಗ್ರಾಮವಾಗಿ ರೂಪಿಸುವಲ್ಲಿ ಯಶಸ್ವಿಯಾದ. ಬ್ರಿಟಿಷರಿಂದ, ಹಿಂದೂ ಭೂಮಾಲೀಕರಿಂದ ಮತ್ತು ವ್ಯಾಪಾರಸ್ಥರಿಂದ ಬಿಡುಗಡೆಯ ಹೋರಾಟಕ್ಕೆ ತನ್ನ ಜನರನ್ನು ಸಜ್ಜುಗೊಳಿಸಿದ.

1894ರ ಅಕ್ಟೋಬರ್ 1 ರಂದು ಚೋಟಾ ನಾಗ್ಪುರ್ ಎಂಬಲ್ಲಿಗೆ ಬೃಹತ್ ಮೆರವಣಿಗೆಗೆ ಕರೆ ನೀಡಿದ. "ಉಳುವವನೇ ಭೂಮಿಯ ಒಡೆಯನಾಗಬೇಕು", "ಮಹಾರಾಣಿಯ ಆಡಳಿತವನ್ನು ಕಿತ್ತು ಹಾಕಿ ಜನತಾ ಆಡಳಿತವನ್ನು ಸ್ಥಾಪಿಸಬೇಕು" ಎಂಬ ಎರಡು ಉದ್ದೇಶಗಳು ಈ ಮೆರವಣಿಗೆಯ ಪ್ರಮುಖ ಅಂಶಗಳಾಗಿದ್ದವು. ಬಿರ್ಸಾನ ಕರೆಗೆ ಆದಿವಾಸಿಗಳು ಸ್ಪಂದಿಸಿ ಮೆರವಣಿಗೆ ಯಶಸ್ವಿಯಾಯಿತು.

ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದ ಬಿರ್ಸಾನ ಜನಪ್ರಿಯತೆಯನ್ನು ಕಂಡು ಬ್ರಿಟಿಷರು ಕಂಗಾಲಾದರು. ಕೂಡಲೇ ಆತನನ್ನು ಬಂಧಿಸಿ ಹಜರಿಬಾದ್ ಜೈಲಿನಲ್ಲಿ ಹಾಕಿದರು. ಎರಡು ವರ್ಷಗಳನ್ನು ಜೈಲಿನಲ್ಲಿ ಕಳೆದ ಬಿರ್ಸಾ ಹೊರಬರುತ್ತಿದ್ದಂತೆ ತನ್ನ ಚಳವಳಿಯ ರೂಪವನ್ನೇ ಬದಲಾಯಿಸಿದ. ಬಿಡುಗಡೆಯ ನಂತರ ಭೂಗತನಾದ ಬಿರ್ಸಾ ಬ್ರಿಟಿಷರ ವಿರುದ್ಧ ಸಶಸ್ತ್ರ ಹೋರಾಟವನ್ನು ಪ್ರಾರಂಭಿಸಿದ.

ಬ್ರಿಟಿಷರ ಕಚೇರಿ ಕಟ್ಟಡಗಳ ಮೇಲೆ, ಅವರನ್ನು ಬೆಂಬಲಿಸುತ್ತಿದ್ದ ಜನರ ಮನೆಗಳ ಮೇಲೆ ಮತ್ತು ಪೊಲೀಸರ ತಂಡಗಳ ಮೇಲೆ ಬಿರ್ಸಾನ ಆದಿವಾಸಿಗಳ ಗೆರಿಲ್ಲಾ ಸೈನ್ಯ ದಾಳಿಗಳನ್ನು ಮಾಡಿತು. ನೂರಾರು ಪೊಲೀಸರನ್ನು ಕೊಂದು ಹಾಕಿತು. ಒಮ್ಮೆ ರಾಂಚಿ ಮತ್ತು ಖುಂತಿ ಎಂಬಲ್ಲಿ ಸುಮಾರು ನೂರು ಕಟ್ಟಡಗಳನ್ನು ಭಸ್ಮ ಮಾಡಿತು. ಬಿರ್ಸಾನನ್ನು ಹಿಡಿದುಕೊಟ್ಟವರಿಗೆ ಐನೂರು ರೂಪಾಯಿಗಳ ನಗದು ಬಹುಮಾನವನ್ನು ಬ್ರಿಟಿಷ್ ಸರ್ಕಾರ ಘೋಷಿಸಿತು.

ಚೋಟಾ ನಾಗ್ಪುರ್ ಸುತ್ತಲಿನ 550 ಚದುರಮೈಲಿ ಪ್ರದೇಶದಲ್ಲಿ ಆತನ ಹೋರಾಟ ಹಬ್ಬಿತು. 1899 ರಲ್ಲಿ ಬಿರ್ಸಾ ತನ್ನ ಬಂಡಾಯವನ್ನು ಮತ್ತಷ್ಟು ತೀವ್ರಗೊಳಿಸಿದ. ಖುಂತಿ, ಒಮರ್, ಬಸಿಯಾ, ರಾಂಚಿ ಇತ್ಯಾದಿ ಕಡೆಗಳಲ್ಲಿ ಪೊಲೀಸ್ ಠಾಣೆಗಳ ಮೇಲೆ ದಾಳಿಗಳು ನಡೆದವು. ಎಂಟು ಪೊಲೀಸರು ಕೊಲ್ಲಲ್ಪಟ್ಟು 32 ಜನ ಪರಾರಿಯಾದರು. ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಬಿಳಿಯರು ತಮ್ಮ ಪ್ರಾಣಕ್ಕೆ ಹೆದರಿ ಅಲ್ಲಿಂದ ಓಡಿಹೋದರು. 89 ಭೂಮಾಲೀಕರ ಮನೆಗಳು ಬೂದಿಯಾದವು. ಚರ್ಚ್ ಮತ್ತು ಬ್ರಿಟಿಷರ ಆಸ್ತಿಗಳಿಗೆ ಬೆಂಕಿ ಬಿದ್ದವು. ಆದಿವಾಸಿಗಳ ದಂಗೆ ಎಷ್ಟು ತೀವ್ರಗೊಂಡಿತ್ತೆಂದರೆ ರಾಂಚಿಯ ಜಿಲ್ಲಾಧಿಕಾರಿಗೆ ಅದನ್ನು ತಡೆಯಲಾಗದೆ ಕೊನೆಗೆ ಸೈನ್ಯಕ್ಕೆ ಬರಹೇಳಿದ.


1900ರ ಜನವರಿಯಲ್ಲಿ ಬಿರ್ಸಾ ತನ್ನ ದಂಗೆಯ ಎರಡನೆ ಅಧ್ಯಾಯಕ್ಕೆ ಚಾಲನೆ ನೀಡಿದ. ಈ ಅಧ್ಯಾಯದಲ್ಲಿ ಬ್ರಿಟಿಷರು ಮಾತ್ರವಲ್ಲ, ಅವರೊಂದಿಗೆ ಕೈಜೋಡಿಸಿದ್ದ ಲೇವಾದೇವಿಗಾರರು, ಭೂಮಾಲೀಕರು, ಕಾಂಟ್ರ್ಯಾಕ್ಟರುದಾರರೂ ಬಿರ್ಸಾನ ಸೈನ್ಯದ ದಾಳಿಗೆ ಗುರಿಯಾದರು. ಬಹಳಷ್ಟು ಜನ ಸಾವಿಗೀಡಾದರು, ಲೆಕ್ಕವಿಲ್ಲದಷ್ಟು ಕಟ್ಟಡಗಳು ಧ್ವಂಸಗೊಂಡವು.

ಆದರೆ ಅಷ್ಟು ಹೊತ್ತಿಗೆ ಬ್ರಿಟಿಷರ ಸೈನ್ಯ ರಾಂಚಿಗೆ ಆಗಮಿಸಿತು. ಅವರ ಬಂದೂಕುಗಳ ಮುಂದೆ ಬಿರ್ಸಾನ ಆದಿವಾಸಿಗಳ ಸೈನ್ಯದ ಬಿಲ್ಲುಬಾಣಗಳು ಯಾವ ಲೆಕ್ಕಕ್ಕೂ ಇರಲಿಲ್ಲ. ದುಂಬಾರಿ ಬೆಟ್ಟದ ಹತ್ತಿರ ಬಿರ್ಸಾ ಮತ್ತು ಬ್ರಿಟಿಷರ ಸೈನ್ಯ ಮುಖಾಮುಖಿ ಆಯಿತು. ಬ್ರಿಟಿಷರ ಬಂದೂಕುಗಳಿಗೆ ನೂರಾರು ಆದಿವಾಸಿಗಳ ಹೆಣಗಳು ಉರುಳಿದವು. ದುಂಬಾರಿ ಬೆಟ್ಟದ ಮೇಲೆ ಹೆಣಗಳ ರಾಶಿ ಇತ್ತು. ಈ ಹತ್ಯಾಕಾಂಡದ ನಂತರ ಜನ ಈ ಬೆಟ್ಟವನ್ನು 'ಹೆಣಗಳ ಬೆಟ್ಟ' ಎಂದೂ ಕರೆಯಲಾರಂಭಿಸಿದರು.

1999 ರ ಮಾರ್ಚ್ 3 ರಂದು ಚಕ್ರಧರ್ಪುರ್ ಎಂಬ ಕಾಡಿನಲ್ಲಿ ಬಿರ್ಸಾ ನಿದ್ರಿಸುತ್ತಿದ್ದಾಗ ಆತನನ್ನು ಬ್ರಿಟಿಷರು ಬಂಧಿಸಿದರು. ಬಿರ್ಸಾ ಮತ್ತು ಆತನ 482 ಸಂಗಡಿಗರ ವಿರುದ್ಧ ಹಲವಾರು ಕೇಸ್‌ಗಳನ್ನು ಜಡಿಯಲಾಯಿತು. ಈ ಪ್ರಕರಣಗಳ ವಿಚಾರಣೆ ನಡೆಯುತ್ತಿದ್ದಾಗಲೇ ಬಿರ್ಸಾ ಜೈಲಿನಲ್ಲಿ ರಕ್ತವನ್ನು ವಾಂತಿ ಮಾಡಿಕೊಳ್ಳಲಾರಂಭಿಸಿದ. 1990 ರ ಜೂನ್ 9 ರಂದು ಬಿರ್ಸಾ ಜೈಲಿನಲ್ಲೇ ಕೊನೆಯುಸಿರೆಳೆದ. ಆತ ಆತನಿಗೆ ಕೇವಲ 25 ವರ್ಷ ವಯಸ್ಸು.

ಆದರೆ ಬಿರ್ಸಾ ಇವತ್ತಿಗೂ ಛತ್ತೀಸಗಢ, ಜಾರ್ಖಂಡ್, ಒಡಿಶಾ ಮತ್ತು ಬಿಹಾರದ ಆದಿವಾಸಿಗಳಲ್ಲಿ ಜೀವಂತವಾಗಿದ್ದಾನೆ. "ಜಲ, ಜಂಗಲ್ ಮತ್ತು ಜನತೆ"ಗಾಗಿ ಆತ ಮಾಡಿದ್ದ ಹೋರಾಟವನ್ನು ಅವರೆಲ್ಲ ವಿವಿಧ ರೀತಿಗಳಲ್ಲಿ ಮುಂದುವರೆಸಿದ್ದಾರೆ. ಆ ಮೂಲಕವೇ ತಮ್ಮ ಅಸ್ತಿತ್ವ, ಭೂಮಿ ಮತ್ತು ಸಂಸ್ಕೃತಿಯನ್ನು ಕಾಪಾಡಿಕೊಳ್ಳಲು ಯತ್ನಿಸುತ್ತಿದ್ದಾರೆ.

ಅಲ್ಲಿನ ಆದಿವಾಸಿಗಳ ಬದುಕಿನಲ್ಲಿ ಹೇಗೆ ಭೂಮಿ, ಮರ, ನದಿ, ಕಾಡು, ಕೆರೆ, ಆಕಾಶ, ಹೂ, ಹಕ್ಕಿ, ಪ್ರಾಣಿಗಳು, ಹಾಡು, ನೃತ್ಯ ಸೂರ್ಯ, ಪ್ರೇಮ, ಕಾಮ, ಡೊಳ್ಳುಗಳು ಮುಖ್ಯವೋ ಹಾಗೆಯೇ ಬಿರ್ಸಾ ಬಿಟ್ಟು ಹೋದ ಕನಸುಗಳು ಕೂಡ ಅಷ್ಟೇ ಮುಖ್ಯ.



ಆದರೆ ವಿಪರ್ಯಾಸ ನೋಡಿ. 110 ವರ್ಷಗಳ ಹಿಂದೆ ಬ್ರಿಟಿಷರು ಬಿರ್ಸಾನನ್ನು ಕೊಂದರು. ಇವತ್ತು ಬಿರ್ಸಾನ ಅನುಯಾಯಿಗಳಾದ ಆದಿವಾಸಿಗಳನ್ನು ಕೊಲ್ಲುವ ಮೂಲಕ ಗೃಹ ಸಚಿವ ಪಿ. ಚಿದಂಬರಂ ಅವರು ಬಿರ್ಸಾ ಬಿತ್ತ ಕನಸನ್ನೂ ಕೊಲ್ಲಲು ಹೊರಟಿದ್ದಾರೆ.

ಆದಿವಾಸಿಗಳ ಆಕ್ರೋಶ ಹೆಚ್ಚದೆ ಇರುತ್ತದೆಯೇ?

ಮಂಗಳೂರು ವಿಮಾನ ದುರಂತ
ಅಪಘಾತವೋ? ಕಗ್ಗೊಲೆಯೋ?



ಕಳೆದ ಶನಿವಾರ ಮುಂಜಾನೆ ಬಜ್ಪೆಯಲ್ಲಿ ಏರ್ ಇಂಡಿಯಾದ ಎಕ್ಸ್‌ಪ್ರೆಸ್ ಬೋಯಿಂಗ್ 737-800 ಪ್ರಪಾತಕ್ಕುರುಳಿ 158 ಜನರು ತಮ್ಮ ಜೀವವನ್ನು ಕಳೆದುಕೊಂಡರು. ಈ ಅಪಘಾತದಲ್ಲಿ ಸಾವಿಗೀಡಾದ ಜನರ ಸಾವಿರಾರು ಬಂಧುಗಳು, ಸ್ನೇಹಿತರು ದುಃಖದಲ್ಲಿ ಮುಳುಗಿದರು. ಅದೆಷ್ಟೋ ತಂದೆ-ತಾಯಂದಿರು ತಮ್ಮ ಮಕ್ಕಳನ್ನು ಕಳೆದುಕೊಂಡರು. ಅದೆಷ್ಟೋ ಮಕ್ಕಳು ಅನಾಥವಾದವು. ಲೆಕ್ಕವಿಲ್ಲದಷ್ಟು ಕನಸುಗಳು ಈ ಅಪಘಾತದಲ್ಲಿ ಕಮರಿ ಹೋದವು.

ಆದರೆ ಇದು ನಿಜವಾಗಲೂ ಒಂದು ಅಪಘಾತವೋ? ಅಥವಾ ನಮ್ಮ ದೇಶದ ಹಿರಿಯ ಅಧಿಕಾರಿಗಳ ನಿರ್ಲಕ್ಷ್ಯ ರಾಜಕಾರಣಿಗಳ ಭ್ರಷ್ಟಾಚಾರ ಮತ್ತು ಉದ್ಯಮಿಗಳ ದುರಾಶೆಯಿಂದಾಗಿ ಸಂಭವಿಸಿದ ಕಗ್ಗೊಲೆಯೋ?

ಇದೊಂದು ಕಗ್ಗೊಲೆ ಎಂದು ವಿಮಾನ ನಿಲ್ದಾಣ ವಿಸ್ತರಣಾ ವಿರೋಧಿ ಸಮಿತಿ ಮತ್ತು **Environmental Support Group** (ಇಎಸ್‌ಜಿ) ವಾದಿಸುತ್ತಿವೆ. ಅವುಗಳ ಅಂತರರಾಷ್ಟ್ರೀಯ ನಿಯಮಗಳ ಪ್ರಕಾರ ಇಲ್ಲಿ ವಿಮಾನ ನಿಲ್ದಾಣ ಸಾಧ್ಯವಿಲ್ಲ, ಇದನ್ನು ಕಟ್ಟಿದ್ದೇ ಆದರೆ ಅಮಾಯಕರನ್ನು ಬಲಿ ತೆಗೆದುಕೊಳ್ಳುತ್ತೀರಾ ಎಂದು ಚೀರಿಕೊಂಡಿದ್ದರು. ಆದರೆ ಊಹೂ... ಇವರ ಕಾಳಜಿಯ ಬಗ್ಗೆ ಯಾರೂ ಕಿಂಚಿತ್ತೂ ತಲೆ ಕೆಡಿಸಿಕೊಳ್ಳಲಿಲ್ಲ. ಹೀಗೆ ನಿರ್ಲಕ್ಷಿಸಿದವರ ಕೈಗಳಿಗೆ ಇವತ್ತು 158 ಜನರ ರಕ್ತದ ಕಲೆಗಳು ಅಂಟಿಕೊಂಡಿವೆ.

ನ್ಯಾಯಾಲಯಕ್ಕೆ ಮೊರೆ

ಬಜ್ಪೆ ವಿಮಾನ ನಿಲ್ದಾಣದ ಮೂರು ದಿಕ್ಕುಗಳಲ್ಲಿ ಕಣಿವೆಗಳಿರುವುದರಿಂದ ನಿಯಮದಂತೆ ಇಲ್ಲಿ ತುರ್ತಾಗಿ ವಿಮಾನಗಳು ಇಳಿಯಲು ಸ್ಥಳಾವಕಾಶಗಳಿಲ್ಲ ಎಂದು ಇವರು 1990ರ ದಶಕದಲ್ಲಿ ಹೇಳಿದ್ದನ್ನು ಯಾರೂ ಕೇಳಿಸಿಕೊಳ್ಳಲಿಲ್ಲ. ಆಗ ಈ ಗುಂಪುಗಳು ನ್ಯಾಯಾಲಯದ ಮೆಟ್ಟಿಲನ್ನೇರಿದವು (ಆರ್ಥರ್ ಪೆರೇರ ಮತ್ತು ಇತರರು V/s ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು, **WP No. 37681/1997**). ಆ ದಾವೆಯಲ್ಲಿ ಮುಂದಿಸಲಾಗಿದ್ದ ವಿಷಯಗಳಲ್ಲಿ ಪ್ರಮುಖವಾದದ್ದು ಈ ವಿಮಾನ ನಿಲ್ದಾಣದಲ್ಲಿ ವಿಮಾನಗಳಿಗೆ ತುರ್ತಾಗಿ ಏರುವುದಕ್ಕಾಗಲಿ, ಇಳಿಯುವುದಕ್ಕಾಗಲಿ (ವಿಮಾನ ಅಪಘಾತಗಳು ಹೆಚ್ಚಾಗಿ ಸಂಭವಿಸುವುದು ಈ ಎರಡು ಪ್ರಕ್ರಿಯೆಗಳಲ್ಲೇ) ಬೇಕಾದಷ್ಟು ಸ್ಥಳವಿಲ್ಲ ಎಂಬುದಾಗಿತ್ತು.


ಅವರ ವಾದವೂ ಸರಿಯಾಗಿತ್ತು. **ICAO** ರೂಪಿಸಿರುವ ನಿಯಮಗಳ ಪ್ರಕಾರ ಅಕಸ್ಮಾತ್ ವಿಮಾನವೊಂದು ಹಾರಲೆತ್ನಿಸುತ್ತಿರುವಾಗ ಅಥವಾ ಇಳಿಯಲು ಪ್ರಯತ್ನಿಸುತ್ತಿರುವಾಗ ಲೆಕ್ಕತಪ್ಪಿ ತುರ್ತುಪರಿಸ್ಥಿತಿ ಉಂಟಾದರೆ ವಿಮಾನವನ್ನು ಕೂಡಲೇ ನಿಲ್ಲಿಸುವುದಕ್ಕೆ ರನ್‌ವೇ ಸಾಕಷ್ಟು ಉದ್ದವಿರಬೇಕು.



ಆದರೆ ಬಜ್ಪೆ ವಿಮಾನ ನಿಲ್ದಾಣದ ಎರಡನೇ ರನ್‌ವೇಯ ಉದ್ದವಿರುವುದೇ 2400 ಮೀಟರ್. ಇಷ್ಟು ಚಿಕ್ಕದಾದ ರನ್‌ವೇ ಮೇಲೆ ಪೈಲಟ್ ಎಷ್ಟೇ ಕಷ್ಟಪಟ್ಟರೂ ವಿಮಾನವನ್ನು ನಿಲ್ಲಿಸುವುದಕ್ಕೆ ಉಳಿಯುವುದು ಕೇವಲ 300 ಮೀಟರ್‌ಗಳಷ್ಟು ಮಾತ್ರ. ಹಾರಲೆತ್ನಿಸುವಾಗ ಮತ್ತು ಇಳಿಯುವಾಗ ವಿಮಾನಗಳು ಎಷ್ಟು ವೇಗವಾಗಿ ಚಲಿಸುತ್ತಿರುತ್ತವೆ ಎಂದರೆ ಅವುಗಳನ್ನು ಏನೇ ಮಾಡಿದರೂ 300 ಮೀಟರ್‌ಗಳಲ್ಲಿ ನಿಲ್ಲಿಸುವುದು ಅಸಾಧ್ಯ. ಇನ್ನು ಬಜ್ಪೆ ವಿಮಾನ ನಿಲ್ದಾಣದ ಆಚೆಯೂ ಚಪ್ಪಟೆ ಭೂಮಿ ಇಲ್ಲ. ಅಲ್ಲಿರುವುದು 80-100 ಮೀಟರ್‌ನಷ್ಟು ಆಳವಾದ ಕಣಿವೆ. ಅಂತಹದರಲ್ಲಿ ಮೊನ್ನೆ ಏರ್ ಇಂಡಿಯಾದ ವಿಮಾನ ಇದೇ ರನ್‌ವೇ ಅನ್ನು ದಾಟಿ, ಕಣಿವೆಗೆ ಬಿದ್ದು 158 ಜನರನ್ನು ಬಲಿ ತೆಗೆದುಕೊಂಡಿದ್ದು ಒಂದು ದುರಂತವಾದರೂ ಆಕಸ್ಮಿಕವೇನಲ್ಲ.

ಆದರೆ ವಿಮಾನ ನಿಲ್ದಾಣ ವಿಸ್ತರಣಾ ವಿರೋಧ ಸಮಿತಿ ಮತ್ತು ಈಎಸ್‌ಜಿ ಸಲ್ಲಿಸಿದ್ದ ದಾವೆಯ ವಿರುದ್ಧ **Airports Authority of India (AAI)** ಪ್ರತಿವಾದವನ್ನು ಸಲ್ಲಿಸಿ ಇವರ ಎಲ್ಲಾ ಕಾಳಜಿಗಳು ನಿರಾಧಾರವೆಂದೂ, ಅಂತಹ ಅಪಘಾತಗಳು ಸಂಭವಿಸದಂತೆ ಎಲ್ಲಾ ಸುರಕ್ಷತಾ ನಿಯಮಗಳನ್ನು ಪಾಲಿಸಲಾಗುವುದು ಎಂದೂ ನ್ಯಾಯಾಲಯದ ಮುಂದೆ ಹೇಳಿತು.

AAI ನೀಡಿದ ಪ್ರತಿವಾರದ ಆಧಾರದ ಮೇಲೆ ಕರ್ನಾಟಕ ಹೈಕೋರ್ಟು ಇವರ ದಾವೆಯನ್ನು ತಿರಸ್ಕರಿಸಿತು. ಅಷ್ಟೇ ಅಲ್ಲ, "ತುರ್ತು ಪರಿಸ್ಥಿತಿಯಲ್ಲಿ ವಿಮಾನವೊಂದು ಇಳಿಯುವುದಕ್ಕೆ ಇಲ್ಲಿನ ರನ್‌ವೇ ಸಾಕಷ್ಟು ಉದ್ದವಿಲ್ಲ ಎಂಬ ಅರ್ಜಿದಾರರ ವಾದ ನಿರಾಧಾರವಾದದ್ದು. ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡ ನಂತರವೇ ಈ ವಿಮಾನ ನಿಲ್ದಾಣಕ್ಕೆ ಚಾಲನೆ ನೀಡಲಾಗಿದೆ. ಬಜ್ಪೆ ವಿಮಾನ ನಿಲ್ದಾಣದ ವಿಸ್ತರಣೆಗೆ ಬೇಕಾದ ಎಲ್ಲಾ ಸುರಕ್ಷಣಾ ಕ್ರಮಗಳನ್ನು ಪರಿಗಣಿಸಿಯೇ ಇದಕ್ಕೆ ಭೂಸ್ವಾಧೀನ ಪ್ರಕ್ರಿಯೆ ನಡೆದಿದೆ. ಈ ಎಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಂಡ ನಂತರ ಈ ಅರ್ಜಿಯನ್ನು ತರಾತುರಿಯಲ್ಲಿ ಹಾಕಲಾಗಿದೆ ಎಂದೇ ಭಾವಿಸಲಾಗುತ್ತಿದೆ. ತಾವು ಎಲ್ಲಾ ನಿಯಮಗಳನ್ನು ಪಾಲಿಸುತ್ತೇವೆ ಎಂದಿರುವ ಪ್ರತಿವಾದಿಗಳ ಹೇಳಿಕೆಯನ್ನು ಅನುಮಾನಿಸುವ ಅಗತ್ಯವಿಲ್ಲ. ಆದ್ದರಿಂದ ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ತಿರಸ್ಕರಿಸಲಾಗುತ್ತಿದೆ" ಎಂದೂ ಹೈಕೋರ್ಟ್ ಹೇಳಿತ್ತು!



ಬಜ್ಪೆ ವಿಮಾನ ನಿಲ್ದಾಣವನ್ನು ವಿಸ್ತರಿಸುವ ಬದಲಾಗಿ ಪರ್ಯಾಯ ಜಾಗದಲ್ಲಿ ಹೊಸದೊಂದು ವಿಮಾನ ನಿಲ್ದಾಣವನ್ನು ನಿರ್ಮಿಸಬಹುದಿತ್ತು. ಆದರೆ ಸ್ಥಳೀಯ ವ್ಯಾಪಾರಿಗಳು, ರಿಯಲ್ ಎಸ್ಟೇಟ್ ದಂಧೆಕೋರರು ಮತ್ತು ಹೋಟೆಲ್ ಉದ್ಯಮಿಗಳಿಗೆ ಬಜ್ಪೆ ವಿಮಾನ ನಿಲ್ದಾಣದಿಂದ ಹೆಚ್ಚು ಲಾಭವಾಗುತ್ತಿದ್ದರಿಂದ ಅವರೆಲ್ಲ ಸರ್ಕಾರದ ಮೇಲೆ ಒತ್ತಡ ತಂದರು. ಮಂಗಳೂರು ಛೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರಿ ಕೂಡ ಇವರೆಲ್ಲರ ಬೆನ್ನಿಗೆ ನಿಂತಿತು. ರಾಜಕಾರಣಿಗಳೂ ಜನರ ರಕ್ಷಣೆಗಿಂತ ತಮ್ಮ "ಲಾಭ" ಮುಖ್ಯವಾಯಿತು.

ಬಜ್ಪೆ ಬದಲಾಗಿ ಮಂಗಳೂರು ಮತ್ತು ಉಡುಪಿ ನಡುವೆ ಇರುವ ಪಡುಬಿದ್ರಿ ಪ್ರದೇಶವೇ ವಿಮಾನ ನಿಲ್ದಾಣಕ್ಕೆ ಸೂಕ್ತ ಎಂದು ಹೇಳಿದರೆ, ಪಡುಬಿದ್ರಿಯಲ್ಲಿನ ದೊಡ್ಡ ಭೂಮಾಲೀಕರು ಮತ್ತು ರಾಜಕೀಯವಾಗಿ ಪ್ರಬಲರಾಗಿದ್ದ ಜನ ಒತ್ತಡ ತಂದಿದ್ದರಿಂದ ರಾಜ್ಯ ಸರ್ಕಾರವಾಗಲಿ, ಕೇಂದ್ರ ವಿಮಾನಯಾನ ಸಚಿವಾಲಯವಾಗಲಿ ಅದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಬದಲಾಗಿ ಸ್ಥಳೀಯ ಜನರ ಮತ್ತು ಈಎಸ್‌ಜಿ ವಿರೋಧದ ನಡುವೆಯೇ ಬಜ್ಪೆ ವಿಮಾನ ನಿಲ್ದಾಣದ ವಿಸ್ತರಣೆಯನ್ನು ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಂಡವು. ಅವರ ಈ ಪ್ರತಿಷ್ಠೆಗೆ ಈಗ 158 ಮಂದಿ ಜೀವಂತವಾಗಿ ಸುಟ್ಟು ಕರಕಲಾಗಿದ್ದಾರೆ.

ಹೈಕೋರ್ಟಿನ ಈ ತೀರ್ಪಿನ ನಂತರವೂ ಎಎಐ ಎಚ್ಚರಗೊಳ್ಳಲಿಲ್ಲ. ಬಜ್ಪೆ ವಿಮಾನ ನಿಲ್ದಾಣ ವಿಸ್ತರಣೆ ಬಗ್ಗೆ ಸರಿಯಾದ ಕಾರ್ಯಸಾಧ್ಯತೆಗಳ ಸಮೀಕ್ಷೆಯನ್ನೂ ನಡೆಸಲಿಲ್ಲ. ಇದ್ಯಾಕೆ ಹೀಗೆ ಎಂದು ಪ್ರಶ್ನಿಸಿದರೆ ನಿಲ್ದಾಣ ವಿಸ್ತರಣೆಗೆ ಭೂಸ್ವಾಧೀನ ಪ್ರಕ್ರಿಯೆ ಮುಗಿದನಂತರ ಕಾರ್ಯಸಾಧ್ಯತೆಯ ಸಮೀಕ್ಷೆ ನಡೆಸುತ್ತೇವೆ ಎಂದಿತು **AAI!** (ಆಗ ಇದನ್ನು "ಕುದುರೆ ಮುಂದೆ ಗಾಡಿಯನ್ನು ಕಟ್ಟಿದಂತೆ" ಎಂದು ಟೀಕಿಸಲಾಗಿತ್ತು. ಆದರೀಗ ಅದನ್ನೇ "ದುರಂತಕ್ಕೆ ಮುನ್ನ ತೋಡಿದ ಗುಂಡಿ" ಎಂದೇ ಕರೆಯಬಹುದೇನೋ.)

ನಿಯಮಗಳನ್ನು ಪಾಲಿಸುವ ಬಗ್ಗೆ ಮತ್ತು ಅವನ್ನು ಪಾಲಿಸದೇ ಜನರ ಜೀವನಗಳನ್ನು ನಿರ್ಲಕ್ಷಿಸಿದ್ದರ ಬಗ್ಗೆ ಆತಂಕಗೊಂಡ ಈಎಸ್‌ಜಿ **ICOA** ಗೆ ಮನವಿ ಸಲ್ಲಿಸಿ ತಾನು ಮಂಡಿಸಿರುವ ವಿಷಯದತ್ತ ಗಮನ ಹರಿಸಬೇಕೆಂದು ಕೋರಿತು. ಆದರೆ **ICOA** ಇಂದ ಯಾವುದೇ ಪ್ರತಿಕ್ರಿಯೆ ಬಾರದಿದ್ದಾಗ 2002 ರಲ್ಲಿ ಈಎಸ್‌ಜಿ ಮತ್ತೆ ಹೈಕೋರ್ಟಿನ ಮುಂದೆ ಮತ್ತೊಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಿತು. ಬೇಕಾದಷ್ಟು ಸಂಶೋಧನೆ ಮಾಡಿ, ಎಲ್ಲೆಡೆಯಿಂದ ಮಾಹಿತಿಗಳನ್ನು ಸಂಗ್ರಹಿಸಿ ಸಲ್ಲಿಸಲಾಗಿದ್ದ ಈ ಅರ್ಜಿಯಲ್ಲಿ ಬಜ್ಪೆ ವಿಮಾನ ನಿಲ್ದಾಣದಲ್ಲಿನ ಎರಡನೆ ರನ್‌ವೇಯ ನಿರುಪಯುಕ್ತತೆ ಬಗ್ಗೆ ಒತ್ತಿ ಹೇಳಲಾಗಿತ್ತು.

ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (**WP 20905/2002**) ತಿರಸ್ಕರಿಸಿದ ರಾಜ್ಯ ಹೈಕೋರ್ಟ್ ತನ್ನ ತೀರ್ಪಿನಲ್ಲಿ ಹೀಗೆ ಹೇಳಿತ್ತು:

"ಮೂಲಭೂತ ಹಕ್ಕುಗಳ ಉಲ್ಲಂಘನೆ ಆಗುತ್ತಿದ್ದರೆ ಅಥವಾ ಈ ನ್ಯಾಯಾಲಯದ ಆತ್ಮಸಾಕ್ಷಿಯನ್ನು ತಾಕುವಂತಹ ವಿಚಾರವಾಗಿದ್ದರೆ ಅದನ್ನು ಕುರಿತು ಈ ನ್ಯಾಯಾಲಯ ಆದೇಶಗಳನ್ನು ಹೊರಡಿಸಬಹುದು. ಆದರೆ ವೈಯಕ್ತಿಕ ಅಥವಾ ರಾಜಕೀಯ ಲಾಭಕ್ಕೆ ಸಂಬಂಧಿಸಿದ್ದನ್ನು ಗಂಭೀರವಾಗಿ ಪರಿಗಣಿಸಲಾಗುವುದಿಲ್ಲ. ಮಂಗಳೂರು ವಿಮಾನ ನಿಲ್ದಾಣದಲ್ಲಿ ಎರಡನೇ ರನ್‌ವೇ ಮತ್ತು ಟರ್ಮಿನಲ್ ಟವರ್‌ಗಳನ್ನು ನಿರ್ಮಿಸುತ್ತಿರುವುದು ಜನರಿಗಾಗಿ. ಅರ್ಜಿದಾರರ ವಕೀಲರಿಗೆ ಇದು ಜನರ ಹಿತಾಸಕ್ತಿಗೆ ವಿರುದ್ಧವಾದದ್ದು ಎಂದು ಸಾಬೀತುಪಡಿಸಲು ಸಾಧ್ಯವಾಗಿಲ್ಲ. ಈ ಯೋಜನೆಯ ಆರಂಭದ ಮುನ್ನ ಅಧಿಕಾರಿಗಳು ಎಲ್ಲಾ ನಿಯಮಗಳನ್ನು ಪಾಲಿಸತಕ್ಕದ್ದು. ಆದ್ದರಿಂದ ಈ ಅರ್ಜಿಯನ್ನು ತಿರಸ್ಕರಿಸಲಾಗಿದೆ. ಆದರೆ ಸ್ಪಷ್ಟಪಡಿಸುವುದು ಏನೆನ್ನೆಂದರೆ, ಈ ಅರ್ಜಿಯನ್ನು ತಿರಸ್ಕರಿಸಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳನ್ನು ಅಗತ್ಯವಾದ ಎಲ್ಲಾ ಎಚ್ಚರಿಕೆ ಮತ್ತು ಕಾನೂನಿನ ಎಲ್ಲಾ ನಿಯಮಗಳನ್ನು ಪಾಲಿಸುವುದರಿಂದ ವಿನಾಯತಿಯನ್ನು ನೀಡಲಾಗಿಲ್ಲ."



ಎರಡನೆ ಬಾರಿಯೂ ಹೈಕೋರ್ಟ್ ತಮ್ಮ ಮನವಿಯನ್ನು ತಿರಸ್ಕರಿಸಿದ್ದರಿಂದ, ಮತ್ತು ಈ ತೀರ್ಪುಗಳಿಂದ ಉತ್ತೇಜನ ಪಡೆದ ಅಧಿಕಾರಿಗಳು ಅಮಾಯಕ ಜನರ ಜೀವಗಳನ್ನು ಅನಗತ್ಯವಾಗಿ ಅಪಾಯಕ್ಕೆ ಸಿಲುಕಿಸುತ್ತಾರೆ ಎಂದು ಆತಂಕಗೊಂಡು ಈಎಸ್‌ಜಿ ಕೊನೆಗೆ ಸುಪ್ರೀಂಕೋರ್ಟಿನ ಮೆಟ್ಟಿಲನ್ನೂ ಏರಿತು. 2003 ರ ಫೆಬ್ರವರಿ 7 ರಂದು ಸುಪ್ರೀಂಕೋರ್ಟ್ ಕೂಡ ಇವರ ಅರ್ಜಿಯನ್ನು ತಿರಸ್ಕರಿಸಿತು. (ಈಎಸ್‌ಜಿ ಮತ್ತು ಇತರರು ಗಿ/. ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು-ಎಸ್‌ಎಲ್‌ಪಿಸಿಸಿ- 1172/2003). ಆದರೆ ಆ ತೀರ್ಪಿನಲ್ಲಿ ಸುಪ್ರೀಂಕೋರ್ಟ್ "ಈ ವಿಮಾನ ನಿಲ್ದಾಣದ ನಿರ್ಮಾಣದಲ್ಲಿ ಎಲ್ಲಾ ಕಾನೂನು ಮತ್ತು ನಿಯಮಗಳನ್ನು ಸರ್ಕಾರ ಪಾಲಿಸತಕ್ಕದ್ದು" ಎಂದಿತು.

ಸುಪ್ರೀಂಕೋರ್ಟ್ ನೀಡಿದ್ದ ಈ ತೀರ್ಪಿನ ಪ್ರಕಾರ **Director General of Civil Aviation** ಅಥವಾ **AAI** ಎಲ್ಲಾ ಕಾನೂನು ಮತ್ತು ನಿಯಮಗಳನ್ನು ಪಾಲಿಸಿಯೇ ಬಜ್ಪೆ ವಿಮಾನ ನಿಲ್ದಾಣವನ್ನು ವಿಸ್ತರಿಸಿದ್ದರೆ ಮೊನ್ನೆ ನಡೆದ ಅಪಘಾತ ಸಂಭವಿಸುತ್ತಿರಲಿಲ್ಲ.

ಆದರೆ ಈಎಸ್‌ಜಿ ಸಲ್ಲಿಸಿದ್ದ ಅರ್ಜಿಯ ತಿರಸ್ಕಾರವನ್ನೇ ತನ್ನ ಗೆಲುವು ಎಂದು ಪರಿಗಣಿಸಿದ, ಸುಪ್ರೀಂಕೋರ್ಟ್ ನೀಡಿದ್ದ ಆದೇಶವನ್ನು ಕಡೆಗಣಿಸಿದ ಸರ್ಕಾರ ಯಾವುದೇ ತಾಂತ್ರಿಕ-ಆರ್ಥಿಕ ಸಮೀಕ್ಷೆಯನ್ನು ನಡೆಸದೆ, ಕಾರ್ಯಸಾಧ್ಯತೆಯ ಬಗ್ಗೆ ಸಮೀಕ್ಷೆಯನ್ನೂ ಮಾಡದೆ, ಪರಿಸರದ ಮೇಲಾಗುವ ಹಾನಿಯನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ 2004 ರಲ್ಲಿ ಎರಡನೆ ರನ್‌ವೇ ಕೆಲಸವನ್ನು ಕೈಗೆತ್ತಿಕೊಂಡಿತು. ಎಲ್ಲಾ ಕಾನೂನು ಮತ್ತು ನಿಯಮಗಳನ್ನು ಗಾಳಿಗೆ ತೂರಿ, ಸುಪ್ರೀಂಕೋರ್ಟ್‌ನ ಆದೇಶವನ್ನೂ ಕಡೆಗಣಿಸಿ 2006 ರ ಮೇ ತಿಂಗಳಲ್ಲಿ ಎರಡನೆ ರನ್‌ವೇ ಅನ್ನು ಉದ್ಘಾಟಿಸಿತು.

ಇದಾದನಂತರವೂ ಈಎಸ್‌ಜಿ ಕೈಚೆಲ್ಲಿ ಕೂರದೆ ತನ್ನ ಹೋರಾಟವನ್ನು ಮುಂದುವರೆಸಿತು. 2004 ರ ಮಾರ್ಚ್ 8 ರಂದು ಕೇಂದ್ರ ವಿಮಾನಯಾನ ಸಚಿವಾಲಯದ ಅಧಿಕಾರಿಯಾದ ಡಾ. ನಸೀಮ್ ಜೈದಿ ಅವರಿಗೆ ಪತ್ರ ಬರೆದು ಬಜ್ಪೆ ವಿಮಾನ ನಿಲ್ದಾಣದಲ್ಲಿ ಸುಪ್ರೀಂಕೋರ್ಟಿನ ಆದೇಶವನ್ನು ಕಡೆಗಣಿಸಲಾಗಿದೆ ಎಂದು ಎಚ್ಚರಿಸಿತು. ಅದಕ್ಕಿಂತ ಮುಖ್ಯವಾಗಿ "ಇಂತಹ ಕ್ರಿಯೆಗಳಿಂದಾಗಿ ವಿಮಾನದ ಪ್ರಯಾಣಿಕರ ಜೀವವನ್ನು ಅಪಾಯಕ್ಕೆ ದೂಡಲಾಗಿದೆಯಲ್ಲದೆ, ಸ್ಥಳೀಯರನ್ನು ಆತಂಕದಲ್ಲಿ ಸಿಲುಕಿಸಿದಂತಾಗಿದೆ. ಜೊತೆಗೆ ಯಾವುದೇ ನಿಯಮಗಳನ್ನು ಪಾಲಿಸದಿರುವುದರಿಂದ ಈ ವಿಮಾನ ನಿಲ್ದಾಣಕ್ಕಾಗಿ ಸ್ಥಳೀಯರ ಭೂಮಿಗಳನ್ನು ಅನಗತ್ಯವಾಗಿ ವಶಪಡಿಸಿಕೊಳ್ಳಲಾಗಿದೆ ಹಾಗು ಸಾರ್ವಜನಿಕರ ಹಣವನ್ನು ಪೋಲು ಮಾಡಲಾಗಿದೆ" ಎಂದು ವಿವರಿಸಲಾಗಿತ್ತು. ಆದರೆ ಕೇಂದ್ರ ವಿಮಾನಯಾನ ಸಚಿವಾಲಯದಿಂದ ಈ ಪತ್ರಕ್ಕೆ ಯಾವ ಪ್ರತಿಕ್ರಿಯೆಯೂ ವ್ಯಕ್ತವಾಗಿರಲಿಲ್ಲ.

1995 ರಿಂದ 2004 ರ ತನಕ ಯಾವ ದುರಂತವನ್ನು ತಪ್ಪಿಸಲು ಈಎಸ್‌ಜಿ ಮತ್ತು ವಿಮಾನ ನಿಲ್ದಾಣ ವಿಸ್ತರಣಾ ವಿರೋಧಿ ಸಮಿತಿಗಳು ಅಪಾರ ಕಾಳಜಿಯಿಂದ ಹೋರಾಡಿದ್ದವೋ ಅದೇ ದುರಂತ ಮೊನ್ನೆ ಸಂಭವಿಸಿದೆ.

"ಇವತ್ತು ಬದುಕಿರಬೇಕಿದ್ದ ಇಷ್ಟೊಂದು ಜನರ ಸಾವಿಗೆ ನಾವು ಕಣ್ಣೀರಿಡುತ್ತಿದ್ದೇವೆ. ಆದರೆ ಇದು ಅಪಘಾತವಲ್ಲ ಎಂಬುದು ನಮ್ಮ ಸ್ಪಷ್ಟ ನಿಲುವಾಗಿದೆ. ಬದಲಾಗಿ ಈ ಸಾವುಗಳಿಗೆ ನೇರವಾಗಿ ಕಾರಣರಾಗುವವರು ಈ ಎರಡನೆ ರನ್‌ವೇಗೆ ಅನುಮತಿ ನೀಡಿದ ಅಧಿಕಾರಿಗಳು. ಇವತ್ತು ಅವರೆಲ್ಲ ಈ ಘಟನೆ ಕುರಿತಂತೆ ಹಲವಾರು ಸಬೂಬುಗಳನ್ನು ನೀಡಬಹುದು. ಆದರೆ ಆ ಯಾವ ಸಬೂಬುಗಳೂ ಈ ದುರಂತದಲ್ಲಿ ಮಡಿದವರನ್ನು ಮತ್ತೆ ತರುವುದಿಲ್ಲ, ಅವರ ಸಂಬಂಧಿಗಳ ಕಣ್ಣೀರನ್ನು ನಿಲ್ಲಿಸುವುದಿಲ್ಲ" ಎನ್ನುತ್ತಾರೆ ಈಎಸ್‌ಜಿ ಅಧ್ಯಕ್ಷ ಲಿಯೋ ಸಾಲ್ಡಾನಾ.

ಇವತ್ತು ವಿಭಿನ್ನ-ವಿಚಿತ್ರ ಕಾರಣಗಳಿಗೆ ಭಾರತದಾದ್ಯಂತ ವಿಮಾನ ನಿಲ್ದಾಣಗಳನ್ನು ನಿರ್ಮಿಸಲಾಗುತ್ತಿದೆ. ಇವುಗಳ ಹಿಂದೆ ಎಂತಹ ರಾಜಕೀಯ, ಅಧಿಕಾರಶಾಹಿ ಮತ್ತು ಕಾರ್ಪೊರೇಟ್ ಕಂಪನಿಗಳ ಒತ್ತಡ ಇದೆಯೆಂದರೆ (ಬಳ್ಳಾರಿಯ ಗಣಿ ಧಣಿಗಳ ಹಿತಾಸಕ್ತಿಗಾಗಿ ರೈತರ ಫಲವತ್ತಾದ ಭೂಮಿಯಲ್ಲಿ ವಿಮಾನ ನಿಲ್ದಾಣ ನಿರ್ಮಿತವಾಗಿರುತ್ತಿರುವಂತೆ) ಇವುಗಳ ತರ್ಕವನ್ನು ಪ್ರಶ್ನಿಸುವವರನ್ನೇ "ಕೆಲಸವಿಲ್ಲದವರು", "ಅಭಿವೃದ್ಧಿ ವಿರೋಧಿಗಳು", "ಪಟ್ಟಭದ್ರ ಹಿತಾಸಕ್ತಿ ಹೊಂದಿರುವವರು" ಅಥವಾ "ತಿಕ್ಕಲುಗಳು" ಎಂದೇ ಬಣ್ಣಿಸಲಾಗುತ್ತಿದೆ.

ಆದರೆ ವಾಸ್ತವ ಏನೆಂದರೆ ಇಂತಹ ಹಲವು "ತಿಕ್ಕಲುಗಳು" ಮುಂದಿರಿಸಿದ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಿದ್ದರೆ ಇವತ್ತು ಇಂತಹ ಘೋರ ಕಗ್ಗೊಲೆಯೇ ಸಂಭವಿಸುತ್ತಿರಲಿಲ್ಲ.

ಯಾವ ದುರಂತವನ್ನು ತಪ್ಪಿಸಲು ಈಎಸ್‌ಜಿ ಇಷ್ಟು ವರ್ಷಗಳ ಕಾಲ ಪ್ರಯತ್ನಿಸಿತ್ತೋ, ಅದೇ ಈಎಸ್‌ಜಿ ಈಗ ದುರಂತದಲ್ಲಿ ಸಾವಿಗೀಡಾಗಿರುವವರ ಬಂಧುಗಳು ಸರ್ಕಾರದ ವಿರುದ್ಧ ದಾವೆಗಳನ್ನು ಹೂಡಲು ನೆರವು ನೀಡಲು ಸಿದ್ಧವಾಗಿದೆ. ಅಷ್ಟೇ ಅಲ್ಲ, ಸುಪ್ರೀಂಕೋರ್ಟಿನ ಆದೇಶದ ವಿರುದ್ಧವೇ ಬಜ್ಪೆಯಲ್ಲಿ ಎರಡನೆ ರನ್‌ವೇಗೆ ಹಸಿರು ನಿಶಾನೆಯನ್ನು ನೀಡಿದ ಎಲ್ಲಾ ಅಧಿಕಾರಿಗಳ ವಿರುದ್ಧ ನ್ಯಾಯಾಲಯದ ಮುಂದೆ ದಾವೆಗಳನ್ನು ಹೂಡಲು ಸಜ್ಜಾಗುತ್ತಿದೆ.


ರಾಜಕಾರಣಿಗಳ ಸ್ವಪ್ರತಿಷ್ಠೆಗೆ, ಅಧಿಕಾರಿಗಳ ನಿರ್ಲಕ್ಷಕ್ಕೆ, ಕಾರ್ಪೊರೇಟ್‌ಗಳ ಲಾಭಕೋರತನಕ್ಕೆ ಈಎಸ್‌ಜಿ ತಕ್ಕ ಪಾಠ ಕಲಿಸುವಂತಾಗಲಿ...


ಹಾಗಾದಾಗ ಮಾತ್ರ ಮೊನ್ನೆ ನಡೆದಂತಹ ಕಗ್ಗೊಲೆಗಳನ್ನು, ನೂರಾರು ಜನರ ದುಃಖವನ್ನು, ಸಾವಿರಾರು ಕನಸುಗಳ ನಿರ್ನಾಮವನ್ನು ತಡೆಯಬಹುದು.


● ಸಾವಂತ್ರಿ

ವಿಧಾನಪರಿಷತ್: ಪ್ರಾರಂಭವಾಯಿತು ಕೊಡು, ಕೊಂಡುಕೊಳ್ಳುವಿಕೆ

ಪ್ರತಿ ಚುನಾವಣೆಯಲ್ಲೂ ತನ್ನ ರಾಜಕೀಯ ಚತುರತೆಯನ್ನು ಮೆರೆಯುವ ಜೆಡಿಎಸ್‌ನ ಮಹಾ ದಂಡನಾಯಕ ದೇವೇಗೌಡರು ಈ ಬಾರಿಯೂ ಕಾಂಗ್ರೆ ಅಧಿನಾಯಕಿ ಸೋನಿಯಾ ಮೇಡಂ ಜೊತೆ ವ್ಯಾಪಾರ ಮಾಡಿ ಒಂದು ಸೀಟನ್ನು ಹೆಚ್ಚಿಸಿಕೊಂಡಿದ್ದನ್ನು ನೋಡಿ ರಾಜ್ಯ ಕಾಂಗ್ರೆ ನಾಯಕರಾದ ಸಿದ್ದರಾಮಯ್ಯ, ದೇಶಪಾಂಡೆ ಮತ್ತು ಡಿ.ಕೆ.ಶಿವಕುಮಾರ್ ಬೆಚ್ಚಿಬಿದ್ದಿದ್ದಾರೆ. ದೇವೇಗೌಡರ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಬಿಜೆಪಿಯನ್ನು ತೊರೆದು ಬಂದ ಬಸನಗೌಡ ಯತ್ನಾಳ್ ಹೆಸರು ಇದೆ. ದೇವೇಗೌಡರು ಈಗ ವಿಧಾನ ಪರಿಷತ್ತಿಗೆ ಅವರನ್ನು ಕಳುಹಿಸುವ ಮೂಲಕ ಯಡ್ಡಿ ವಿರುದ್ಧ ನೇರವಾದ ಕಾಳಗಕ್ಕೆ ಅವರನ್ನು ಅಣಿಮಾಡುತ್ತಿದ್ದಾರೆ.









ವಿಧಾನಪರಿಷತ್ ಮತ್ತು ರಾಜ್ಯಸಭಾ ಚುನಾವಣೆಯ ಹಿನ್ನೆಲೆಯಲ್ಲಿ ರಾಜ್ಯ ರಾಜಕೀಯದಲ್ಲಿ ತೀವ್ರವಾದ ಚಟುವಟಿಕೆ ಆರಂಭವಾಗಿದೆ. ವಿಧಾನ ಪರಿಷತ್ತಿನ ಆಯ್ಕೆಗಾಗಿ ಪ್ರಯತ್ನಿಸುತ್ತಿರುವ ಕಾಂಗ್ರೆ ಆಕಾಂಕ್ಷಿಗಳು ದೆಹಲಿ ವಿಮಾನ ಹತ್ತಿ ಅಲ್ಲೇ ಮೊಕ್ಕಾಂ ಹೂಡಿದ್ದಾರೆ. ಈ ಕಡೆ ಬಿಜೆಪಿಯ ಆಕಾಂಕ್ಷಿಗಳು ಯಡಿಯೂರಪ್ಪ ಮತ್ತು ಈಶ್ವರಪ್ಪನವರ ಸುತ್ತ ಗಿರಕಿ ಹೊಡೆಯುತ್ತಿದ್ದಾರೆ. ಈ ಮಧ್ಯೆ ಜನತಾದಳದ ಆಕಾಂಕ್ಷಿಗಳು ದೇವೇಗೌಡರ ಬಾಯಲ್ಲಿ ಮಂತ್ರವೆಂಬಂತೆ ಯಾರ ಹೆಸರು ಉದುರುತ್ತದೋ ಎಂದು ಕುತೂಹಲದಿಂದ ಗೌಡರ ಬಾಯಿಯನ್ನೇ ತದೇಕಚಿತ್ತದಿಂದ ನೋಡುತ್ತಿದ್ದಾರೆ.

ಆದರೆ ಈ ಚುನಾವಣೆಯಲ್ಲಿ ಅಂತಹ ಭಾರೀ ಅಚ್ಚರಿಯ ಅಭ್ಯರ್ಥಿಗಳು ಸ್ಪರ್ಧಿಸಿ ರಾಜ್ಯ ರಾಜಕೀಯದಲ್ಲಿ ತೀವ್ರತರ ಸಂಚಲನ ಮೂಡಿಸುವ ಸಾಧ್ಯತೆಗಳು ತೀರಾ ಕಡಿಮೆ. ಯಾಕೆಂದರೆ ಬಹುತೇಕ ಎಲ್ಲಾ ಸ್ಪರ್ಧಿಗಳ ಹೆಸರುಗಳನ್ನು ಆಯಾ ಪಕ್ಷದ ನಾಯಕರು ಪಕ್ಕಾ ಮಾಡಿದ್ದಾರೆ. ಆದರೆ ವಿರೋಧ ಪಕ್ಷಗಳು ಸ್ಪರ್ಧಿಯ ಹೆಸರನ್ನು ಹೇಳಲಿ ಎಂದು ಆಡಳಿತ ಪಕ್ಷವಾದ ಬಿಜೆಪಿ ಮೌನವಾಗಿದ್ದರೆ, ಆಡಳಿತ ಪಕ್ಷದವರೇ ಮೊದಲಿಗೆ ಅಖಾಡಕ್ಕಿಳಿಯಲಿ ಆನಂತರ ನಮ್ಮ ಗಾಳ ಹಾಕೋಣ ಎಂದು ಕಾಂಗ್ರೆ ಮತ್ತು ಜೆಡಿಎಸ್ ಪಕ್ಷ ತೆರೆಮರೆಯಲ್ಲಿ ಕಾಯುತ್ತಾ ಕುಳಿತಿವೆ.

ಯಡ್ಡಿ ನೇತೃತ್ವದ ಚೆಡ್ಡಿ ಪಕ್ಷ ಸೋಮಣ್ಣ ಮತ್ತು ತಿಪ್ಪಣ್ಣ ಇವರಿಬ್ಬರನ್ನು ವಿಧಾನಪರಿಷತ್ತಿಗೆ ಕಳುಹಿಸಲೇಬೇಕೆಂಬ ತೀರ್ಮಾನ ಕೈಗೊಂಡಿದೆ. ಈ ಹಿಂದೆ ಸೋಮಣ್ಣನವರ ಶಿಫಾರಸ್ಸನ್ನು ರಾಜ್ಯಪಾಲರು ಹಿಂದಿರುಗಿಸಿದ ಸೇಡನ್ನು ಈ ಬಾರಿ ತೀರಿಸಿಕೊಳ್ಳಲು ಯಡಿಯೂರಪ್ಪ ಈ ಸಂದರ್ಭವನ್ನು ಬಳಸಿಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲ, ಮೊನ್ನೆ ಬೆಂಗಳೂರು ಮಹಾನಗರ ಪಾಲಿಕೆಗೆ ನಡೆದ ಚುನಾವಣೆಯಲ್ಲಿ ತನ್ನ ಕ್ಷೇತ್ರವಾದ ಗೋವಿಂದರಾಜನಗರದಲ್ಲಿ 17 ಸೀಟುಗಳ ಪೈಕಿ 16ನ್ನು ಗೆಲ್ಲಿಸಿಕೊಟ್ಟು ಸೋಮಣ್ಣ ತನ್ನ ಪ್ರಾಬಲ್ಯವನ್ನು ಪಕ್ಷಕ್ಕೆ ತೋರಿಸಿಕೊಟ್ಟಿದ್ದಾರೆ. ಸೋಮಣ್ಣನವರನ್ನು ಎಮ್ಮೆಲ್ಸಿ ಮಾಡಬೇಕೆಂದು ಸುತ್ತೂರು ಮತ್ತು ಸಿದ್ಧಗಂಗಾ ಮಠದ ಸ್ವಾಮೀಜಿಗಳು ಮುಖ್ಯಮಂತ್ರಿಗೆ 'ವಿಪ್' ನೀಡಿದ್ದಾರೆ. 'ರೋಗಿ ಬಯಸಿದ್ದೂ ಹಾಲು, ವೈದ್ಯ ಹೇಳಿದ್ದೂ....' ಎಂಬಂತೆ ಜಾತೀ ಬಾಂಧವರಾದ ಸೋಮಣ್ಣನವರನ್ನು ಮೇಲ್ಮನೆಗೆ ಕಳುಹಿಸಲು ಯಡಿಯೂರಪ್ಪ ಅತ್ಯುತ್ಸಾಹದಲ್ಲಿದ್ದಾರೆ. ಹೀಗಾಗಿ ಸೋಮಣ್ಣ ಮೇಲ್ಮನೆಗೆ ಹೋಗುವುದು ಶತಸಿದ್ಧ. ಅನಂತರ ಅವರು ಮಂತ್ರಿಯಾದರೂ ಆಶ್ಚರ್ಯಪಡಬೇಕಾಗಿಲ್ಲ.





ತಿಪ್ಪಣ್ಣ ಅವರ ಋಣ ತೀರಿಸಲು ಯಡಿಯೂರಪ್ಪ ಅವರನ್ನು ಮೇಲ್ಮನೆಗೆ ಕಳುಹಿಸಲೇಬೇಕಾಗಿದೆ. ಯಡಿಯೂರಪ್ಪನವರ ವಿನಂತಿ ಮೇರೆಗೆ ಈ ತಿಪ್ಪಣ್ಣ ಎಂಬ ಮುದಿರಾಜಕಾರಣಿ ದೇವೇಗೌಡರ ಪಕ್ಷವನ್ನು ತೊರೆದು ಬಿಜೆಪಿಗೆ ಬಂದರು. ಮೇಲ್ಮನೆಯಲ್ಲಿ ವಿರೋಧ ಪಕ್ಷದ ನಾಯಕನ ಸ್ಥಾನ ಜೆಡಿಎಸ್‌ಗೆ ಸಿಗಬಾರದೆಂಬ ಕಾರಣಕ್ಕಾಗಿ ಯಡಿಯೂರಪ್ಪ ತನ್ನ ರಾಜಕೀಯ ತಂತ್ರಗಾರಿಕೆಯನ್ನು ಬಳಸಿ ತಿಪ್ಪಣ್ಣ ಅವರನ್ನು ಹೈಜಾಕ್ ಮಾಡಿದ್ದರು. ಇನ್ನೂ ಎರಡೂವರೆ ವರ್ಷಗಳ ಕಾಲ ವಿಧಾನಪರಿಷತ್ ಸದಸ್ಯರಾಗಿ ಅಧಿಕಾರವನ್ನು ಅನುಭವಿಸಬಹುದಾದರೂ ಅದನ್ನು ತ್ಯಾಗ ಮಾಡಿದ 'ತ್ಯಾಗಜೀವಿ ತಿಪ್ಪಣ್ಣ' ಅವರಿಗೆ ಈಗ ಸೂಕ್ತ ಮರ್ಯಾದೆ ನೀಡಲು ಯಡ್ಡಿ ನಿರ್ಧರಿಸಿದ್ದಾರೆ. ಅಂದು ಎರಡೂವರೆ ವರ್ಷಗಳ ಅವಧಿಯನ್ನು ತ್ಯಾಗ ಮಾಡಿದ್ದಕ್ಕೆ ಇಂದು ತಿಪ್ಪಣ್ಣನಿಗೆ ಮತ್ತೆ ಆರು ವರ್ಷಗಳ ಹೊಸ ಅಧಿಕಾರ ಸಿಗುತ್ತಿದೆ.

ಹೀಗೆ ಎರಡು ಲಿಂಗಾಯತ ಸಮುದಾಯದ ಅಭ್ಯರ್ಥಿಗಳನ್ನು ಯಡಿಯೂರಪ್ಪ ಪಕ್ಷದಲ್ಲಿ ಬೇರಾವುದೇ ದೊಣ್ಣೆ ನಾಯಕನ ಅಪ್ಪಣೆಯಿಲ್ಲದೆ ಅಂತಿಮಗೊಳಿಸಿದ್ದಾರೆ. ಜಾತಿವಾರು ಲೆಕ್ಕ ಗಣನೆಗೆ ತೆಗೆದುಕೊಂಡರೆ ಬಿಜೆಪಿ ಗೆಲ್ಲಬಹುದಾದ ನಾಲ್ಕು ಸ್ಥಾನಗಳಲ್ಲಿ ಎರಡು ಸ್ಥಾನ ಲಿಂಗಾಯತರಿಗೆ ಕಾದಿರಿಸಿದಂತಾಗಿದೆ. ಈಗ ಪಕ್ಷದ ಮುಂದಿರುವ ಪ್ರಶ್ನೆಯೆಂದರೆ ಇನ್ನುಳಿದ ಎರಡು ಸ್ಥಾನಗಳನ್ನು ಯಾರಿಗೆ, ಯಾವ ಜನಾಂಗಕ್ಕೆ ನೀಡಬೇಕು ಎಂಬುದು.

ಮೈಸೂರು ಮತ್ತು ಮಂಡ್ಯ ಭಾಗದ ಕೆಲವು ಒಕ್ಕಲಿಗ ನಾಯಕರು ವಿಧಾನ ಪರಿಷತ್ ಸ್ಥಾನಗಳಿಗೆ ಭಾರಿ ಪ್ರಯತ್ನ ಮಾಡುತ್ತಿದ್ದಾರೆ. ಅದರಲ್ಲಿ ಜಿ.ಟಿ.ದೇವೇಗೌಡ, ಸಿ.ಪಿ.ಯೋಗೇಶ್ವರ್ ಮತ್ತು ಡಿ.ಸಿ.ತಮ್ಮಣ್ಣ ಪ್ರಮುಖರು. ಇವರೆಲ್ಲಾ ಹೇಳುವುದು ಒಂದೇ ಮಂತ್ರ "ಮೈಸೂರು-ಮಂಡ್ಯ ಪ್ರದೇಶದಲ್ಲಿ ದೇವೇಗೌಡರ ಹಿಡಿತದಲ್ಲಿರುವ ಒಕ್ಕಲಿಗರನ್ನು ಬಿಜೆಪಿ ಕಡೆ ವರ್ಗಾಯಿಸಬೇಕಾದರೆ ನಮ್ಮನ್ನು ವಿಧಾನ ಪರಿಷತ್ತಿಗೆ ಆಯ್ಕೆ ಮಾಡಿ" ಎಂದು. ಆದರೆ ಇವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಿ ಆನಂತರ ಇವರಿಗೆ ಮಂತ್ರಿ ಸ್ಥಾನ ಕೊಟ್ಟರೂ ಗೌಡರ ಹಿಡಿತದಲ್ಲಿರುವ ಒಕ್ಕಲಿಗರು ಬಿಜೆಪಿಗೆ ಬರುತ್ತಾರೆಂಬುದು ಸುಳ್ಳು ಎಂಬುದು ಯಡಿಯೂರಪ್ಪನವರಿಗೆ ಗೊತ್ತು. ಹಾಗಾಗಿ ಒಕ್ಕಲಿಗ ಜನಾಂಗದ ಪ್ರತಿನಿಧಿಯನ್ನು ಮೇಲ್ಮನೆಗೆ ಕರೆತರುವ ಬಗ್ಗೆ ಯಡ್ಡಿ ಮನಸ್ಸಿನಲ್ಲಿ ದ್ವಂದ್ವವಿದೆ.


ಇದಕ್ಕೆ ಪೂರಕವೆಂಬಂತೆ ಒಕ್ಕಲಿಗ ಮಂತ್ರಿಯಾದ ಅಶೋಕ್ ಕೂಡಾ ಯಡ್ಡಿಗೆ ತಮ್ಮ ಸಹಮತ ವ್ಯಕ್ತಪಡಿಸಿದ್ದಾರೆ. ಇಲ್ಲಿ ಅಶೋಕ್ ಸಮಸ್ಯೆಯೇ ಬೇರೆ. ಒಕ್ಕಲಿಗ ಜನಾಂಗದ ಯಾರೇ ಮುಂದೆ ಬಂದರೆ ಮುಂದೆ ಆತ ತನ್ನ ಅಧಿಪತ್ಯಕ್ಕೆ ತೊಂದರೆ ನೀಡಿಯಾನು ಎಂಬುದು ಅಶೋಕ್ ಅವರ ರಾಜಕೀಯ ಲೆಕ್ಕಾಚಾರ. ಆ ಕಾರಣದಿಂದಲೇ ಒಂದು ವೇಳೆ ಎಮ್ಮೆಲ್ಸಿ ಮಾಡಲೇಬೇಕಾದಲ್ಲಿ ವಯಸ್ಸಾಗಿರುವ ತಮ್ಮಣ್ಣನವರನ್ನೇ ಮಾಡಿ ಎಂದು ಅಶೋಕ್ ಹೇಳಿದ್ದಾರೆ. ಯಾಕೆಂದರೆ ತಮ್ಮಣ್ಣನವರಿಂದ ಅಶೋಕ್ ಸಾಮ್ರಾಜ್ಯಕ್ಕೆ ಯಾವುದೇ ತೊಡಕಾಗುವುದಿಲ್ಲ ತಾನೇ? ಈ ಮಧ್ಯೆ ಮೊನ್ನೆಮೊನ್ನೆಯಷ್ಟೇ ಒಕ್ಕಲಿಗ ಕೋಟಾದಲ್ಲಿ ನವರಸ ನಾಯಕ ಜಗ್ಗೇಶರನ್ನು ಆಯ್ಕೆ ಮಾಡಿಲ್ಲವೇ? ಒಬ್ಬ ಸಿನಿಮಾ ನಟನಿಗಿಂತ ಈ ಶಾಸಕರು ಹೆಚ್ಚು ಜನಪ್ರಿಯರಾಗಿ ಪಕ್ಷ ಸಂಘಟಿಸಲು ಸಾಧ್ಯವೇ? ಹೀಗಾಗಿ ಯಾವುದೇ ಕಾರಣಕ್ಕೆ ಒಕ್ಕಲಿಗರಿಗೆ ಮತ್ತೆ ಮಣೆಹಾಕುವುದು ಬೇಡ ಎಂಬ ಒಂದು ಅಪಸ್ವರವೆದ್ದಿದೆ.


ಒಕ್ಕಲಿಗರನ್ನು ಆಯ್ಕೆ ಮಾಡಿದರೆ ಅದರಿಂದ ಪಕ್ಷಕ್ಕೆ ಒಂದು ನಯಾಪೈಸೆ ಲಾಭವಿಲ್ಲ; ಅದರ ಬದಲು ಕುರುಬ ಜನಾಂಗದ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕೆಂಬುದು ಪಕ್ಷಾಧ್ಯಕ್ಷ ಈಶ್ವರಪ್ಪ ಪ್ರಬಲವಾಗಿ ವಾದ ಮಂಡಿಸಿದ್ದಾರೆ. ಲಿಂಗಾಯತ ಸಮುದಾಯ ಮತ್ತು ಕುರುಬ ಸಮುದಾಯದವರು ಒಟ್ಟು ಸೇರಿದರೆ ರಾಜಕೀಯವಾಗಿ ಬಲಿಷ್ಠವಾಗಿರುವ ಒಕ್ಕಲಿಗರನ್ನು ಸೆದ್ದುಹೊಡೆಯಬಹುದೆಂಬುದು ಈಶ್ವರಪ್ಪನವರ ದೂ(ದು)ರಾಲೋಚನೆ. ಈಶ್ವರಪ್ಪನ ವಾದಕ್ಕೆ ಮನ್ನಣೆ ದೊರೆತದ್ದೇ ಆದಲ್ಲಿ ಮೈಸೂರಿನ ಮಾಜಿ ಲೋಕಸಭಾ ಸದಸ್ಯ ವಿಜಯಶಂಕರ್ ಅಥವಾ ರಘುನಾಥ್ ಮಲ್ಕಾಪುರೆ ಇವರಿಬ್ಬರಲ್ಲಿ ಒಬ್ಬರ ಅದೃಷ್ಟ ಖುಲಾಯಿಸಬಹುದು.


ಈ ಇಬ್ಬರು ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮುಖಾಂತರ ಈಶ್ವರಪ್ಪ ಕೂಡಾ ತನ್ನ ರಾಜಕೀಯ ತಂತ್ರಗಾರಿಕೆಯನ್ನು ಮೆರೆದಿದ್ದಾರೆ. ಒಂದುವೇಳೆ ವಿಜಯಶಂಕರ್ ಅವರು ಆಯ್ಕೆಯಾದಲ್ಲಿ ತನ್ನ ರಾಜಕೀಯ ಪ್ರತಿಸ್ಪರ್ಧಿ ಕಾಂಗ್ರೆ ನಾಯಕ ಸಿದ್ದರಾಮಯ್ಯನವರ ಪ್ರಾಬಲ್ಯವನ್ನು ಮೈಸೂರು ಪ್ರಾಂತ್ಯದಲ್ಲಿ ಮಟ್ಟಹಾಕಬಹುದೆಂಬುದು ಅವರ ಲೆಕ್ಕಾಚಾರ. ಹಾಗೆಯೇ ರಘುನಾಥ ಮಲ್ಕಾಪುರೆಗೆ ಟಿಕೆಟ್ ದೊರೆತರೆ ಉತ್ತರ ಕರ್ನಾಟಕದಲ್ಲಿ ಆ ಮೂಲಕ ತನ್ನ ಇಮೇಜನ್ನು ವೃದ್ಧಿಸಿಕೊಂಡಂತಾಗುತ್ತದೆ ಎಂಬುದು ಈಶ್ವರಪ್ಪನವರಿಗೆ ಗೊತ್ತು. ಈ ರಘುನಾಥ್ ಅಖಿಲ ಭಾರತ ಕುರುಬರ ಸಂಘದ ಅಧ್ಯಕ್ಷರಾಗಿರುವುದರಿಂದ ಸಮಸ್ತ ಕುರುಬ ಜನಾಂಗ ತನ್ನನ್ನು ಕೊಂಡಾಡುತ್ತದೆಂದು ಈಶ್ವರಿ ಕನಸು ಕಾಣುತ್ತಿದ್ದಾರೆ.

ಹೀಗಾಗಿ ಬಿಜೆಪಿ ಪಕ್ಷದೊಳಗಡೆ ಒಕ್ಕಲಿಗ-ಕುರುಬ ಜನಾಂಗದ ನಡುವೆ ಒಂದು ಸಣ್ಣ ಕದನ ಆರಂಭವಾಗಿದೆ. ವಿಧಾನಪರಿಷತ್ ಚುನಾವಣೆ ಮುಗಿಯುವುದರೊಳಗಡೆ ಈ ಎರಡು ಪ್ರಮುಖ ಸಮುದಾಯದ ನಡುವಿನ ಭಿನ್ನಾಭಿಪ್ರಾಯ ಇನ್ನಷ್ಟು ಬಿಗಡಾಯಿಸಿದರೂ ಆಶ್ಚರ್ಯವಿಲ್ಲ.

ಇನ್ನುಳಿದ ಒಂದು ಸ್ಥಾನಕ್ಕೆ ಯಡಿಯೂರಪ್ಪನವರು ಹಿಂದುಳಿದ ವರ್ಗದ ಅಭ್ಯರ್ಥಿಯನ್ನು ಅಪ್ಪಿಕೊಳ್ಳಲಿದ್ದಾರೆ. ಈ ಕೋಟಾದಲ್ಲಿ ನಾರಾಯಣ್ ಸಾ ಬಾಂಡಗೆ ಎಂಬ ಹಿಂದುಳಿದ ವರ್ಗಗಳ ನಾಯಕನಿಗೆ ಅದೃಷ್ಟ ಖುಲಾಯಿಸಬಹುದು. ಇವರು ಬಾಗಲಕೋಟೆಯ ಜಿಲ್ಲಾಧ್ಯಕ್ಷರಾಗಿದ್ದ ಸಂದರ್ಭದಲ್ಲೇ ಪಕ್ಷ ಬಲವಾಗಿ ಬೇರೂರಿದ್ದನ್ನು ಪಕ್ಷದ ನಾಯಕರು ಸ್ಮರಿಸಿಕೊಂಡಿದ್ದಾರೆ. ಹೀಗಾಗಿ ನಾರಾಯಣ ಸಾ ಸರ್ವಸಮ್ಮತ ಅಭ್ಯರ್ಥಿಯಾಗಿ ಪಕ್ಷದಲ್ಲಿ ಮೂಡಿಬರುವ ಸಾಧ್ಯತೆ ಇದೆ.







ಇವೆಲ್ಲವೂ ಬಿಜೆಪಿ ಪಕ್ಷದಲ್ಲಿ ನಾಲ್ಕು ಸ್ಥಾನ ಗೆಲ್ಲಲು ನಡೆಯುತ್ತಿರುವ ಗುಣಾಕಾರ-ಭಾಗಾಕಾರ ಲೆಕ್ಕಾಚಾರಗಳು. ಈ ಮಧ್ಯೆ ಕಾಂಗ್ರೆಸ್ ನಾಯಕರ ಕಥೆ ಟಿವಿ ಮೆಗಾ ಸೀರಿಯಲ್ ತರಹ ಇದೆ. ವಾಸ್ತವವಾಗಿ ಕಾಂಗ್ರೆ ಎರಡು ಸ್ಥಾನಗಳನ್ನು ಗೆಲ್ಲುವಷ್ಟು ಮತಗಳನ್ನು ಹೊಂದಿದೆ. ಆದರೆ ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆನ ಎರಡನೇ ಅಭ್ಯರ್ಥಿ ಗೆಲ್ಲಬೇಕಾದರೆ ಅವರಿಗೆ ಜೆಡಿಎಸ್ ಬೆಂಬಲ ಅನಿವಾರ್ಯವಾಗಿದೆ. ಕಾಂಗ್ರೆ ಹೈಕಮಾಂಡ್ ಪಾಲಿಗೆ ಒಂದು ರಾಜ್ಯಸಭಾ ಸ್ಥಾನವನ್ನು ಗೆಲ್ಲಲು ಒಂದು ವಿಧಾನಪರಿಷತ್ ಸ್ಥಾನವನ್ನು ತ್ಯಾಗ ಮಾಡುವ ಅನಿವಾರ್ಯ ಪರಿಸ್ಥಿತಿ ಬಂದಿದೆ. ಹೀಗಾಗಿ ಎರಡು ಸ್ಥಾನದ ಬದಲು ಈಗ ವಿಧಾನಪರಿಷತ್‌ಗೆ ಕಾಂಗ್ರೆ ಒಂದೇ ಅಭ್ಯರ್ಥಿಯನ್ನು ಕಳುಹಿಸಿಕೊಡುವ ಸಾಧ್ಯತೆಯಿದೆ.

ಈ ಒಂದು ಸ್ಥಾನಕ್ಕಾಗಿ ಕಾಂಗ್ರೆನ ಸುಮಾರು 75ಕ್ಕೂ ಹೆಚ್ಚು ಆಕಾಂಕ್ಷಿಗಳು ದೆಹಲಿಯಲ್ಲಿ ಬೀಡುಬಿಟ್ಟಿದ್ದಾರೆ. ಅದರಲ್ಲಿ ಕಾಂಗ್ರೆ ಅಧ್ಯಕ್ಷ ಆರ್.ವಿ.ದೇಶಪಾಂಡೆ ಕೂಡಾ ಒಬ್ಬರು. ಉತ್ತರ ಕರ್ನಾಟಕದ ಹೆಚ್.ಕೆ.ಪಾಟೀಲ್, ಉಗ್ರಪ್ಪ, ವೀರಣ್ಣ ಮತ್ತಿಕಟ್ಟಿ ಸಮೇತ ಅನೇಕಾನೇಕ ದೊಡ್ಡದೊಡ್ಡ ನಾಯಕರು ತಮ್ಮತಮ್ಮ ಗಾಡ್‌ಫಾದರ್‌ಗಳ ಮೂಲಕ ಕಾಂಗ್ರೆ ಹೈಕಮಾಂಡ್ ಮೇಲೆ ಒತ್ತಡ ಹೇರುತ್ತಿದ್ದಾರೆ. ಆದರೆ ಕಾಂಗ್ರೆ ಹೈಕಮಾಂಡ್ ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕನಾಗಿ ಸಮರ್ಥವಾಗಿ ಕಾರ್ಯ ನಿರ್ವಹಿಸಿದ ಉಗ್ರಪ್ಪನನ್ನೇ ಮತ್ತೆ ಅಖಾಡಕ್ಕಿಳಿಸುವ ಸಾಧ್ಯತೆಯೇ ಹೆಚ್ಚು. ಯಾಕೆಂದರೆ ಉಗ್ರಪ್ಪ ಬಿಜೆಪಿ ಸರ್ಕಾರವನ್ನು ತನ್ನ ಮಾತಿನ ವರಸೆಯಲ್ಲಿ ಕಟ್ಟಿಹಾಕಬಲ್ಲ ಚತುರ. ಹೀಗಾಗಿ ಕಾಂಗ್ರೆನ ಪೇಪರ್ ಟೈಗರ್ ನಾಯಕರಿಗೆಲ್ಲಾ ಇಲ್ಲಿ ನಿರಾಶೆಯಾಗಬಹುದು.

ಪ್ರತಿ ಚುನಾವಣೆಯಲ್ಲೂ ತನ್ನ ರಾಜಕೀಯ ಚತುರತೆಯನ್ನು ಮೆರೆಯುವ ಜೆಡಿಎಸ್‌ನ ಮಹಾ ದಂಡನಾಯಕ ದೇವೇಗೌಡರು ಈ ಬಾರಿಯೂ ಕಾಂಗ್ರೆ ಅಧಿನಾಯಕಿ ಸೋನಿಯಾ ಮೇಡಂ ಜೊತೆ ವ್ಯಾಪಾರ ಮಾಡಿ ಒಂದು ಸೀಟನ್ನು ಹೆಚ್ಚಿಸಿಕೊಂಡಿದ್ದನ್ನು ನೋಡಿ ರಾಜ್ಯ ಕಾಂಗ್ರೆ ನಾಯಕರಾದ ಸಿದ್ದರಾಮಯ್ಯ ದೇಶಪಾಂಡೆ ಮತ್ತು ಡಿ.ಕೆ.ಶಿವಕುಮಾರ್ ಬೆಚ್ಚಿಬಿದ್ದಿದ್ದಾರೆ. ಇಲ್ಲೂ ಅಷ್ಟೇ, ಒಂದು ಕಡೆಯಲ್ಲಿ ರಾಜ್ಯ ಕಾಂಗ್ರೆ ನಾಯಕರನ್ನು ಮೂಲೆಗುಂಪು ಮಾಡುವ ತನ್ನ ಹಳೇ ಚಾಳಿಯನ್ನು ಮುಂದುವರೆಸಿರುವ ದೇವೇಗೌಡರು ಯುದ್ಧ ಆರಂಭವಾಗುವ ಮುನ್ನವೇ ವಿಜಯಪತಾಕೆ ಹಾರಿಸಿರುವ ಹುಮ್ಮಸ್ಸಲ್ಲಿದ್ದಾರೆ.

ದೇವೇಗೌಡರ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಬಿಜೆಪಿಯನ್ನು ತೊರೆದು ಬಂದ ಬಸನಗೌಡ ಯತ್ನಾಳ್ ಹೆಸರು ಇದೆ. ಉತ್ತರ ಕರ್ನಾಟಕದಲ್ಲಿ ಬಿಜೆಪಿಯನ್ನು ಬೆಳೆಸಿದವರಲ್ಲಿ ಒಬ್ಬರಾದ ಯತ್ನಾಳ್ ಯಡ್ಡಿ ವಿರುದ್ಧ ಬಂಡಾಯದ ಬಾವುಟ ಹಾರಿಸಿ ಕೊನೆಗೆ ಉಚ್ಚಾಟನೆಗೊಂಡವರು. ಆಗ ಯತ್ನಾಳರನ್ನು ಆಲಿಂಗನ ಮಾಡಿ ಪಕ್ಷಕ್ಕೆ ಸೇರಿಸಿಕೊಂಡ ದೇವೇಗೌಡರು ಈಗ ವಿಧಾನ ಪರಿಷತ್ತಿಗೆ ಅವರನ್ನು ಕಳುಹಿಸುವ ಮೂಲಕ ಯಡ್ಡಿ ವಿರುದ್ಧ ನೇರವಾದ ಕಾಳಗಕ್ಕೆ ಅವರನ್ನು ಅಣಿಮಾಡುತ್ತಿದ್ದಾರೆ. ಯತ್ನಾಳ್ ವಿಧಾನ ಪರಿಷತ್ ಪ್ರವೇಶಿಸುವುದು; ಅನಂತರ ಯಡ್ಡಿ ವಿರುದ್ಧ ಮೇಲ್ಮನೆಯಲ್ಲಿ ಸಮರ ಸಾರುವುದು.. ಇತ್ಯಾದಿ ವಿಷಯಗಳು ಪಕ್ಕಾ ಆಗಿದೆ. ಈಗ ದೇವೇಗೌಡರು ಎರಡನೇ ಅಭ್ಯರ್ಥಿಯಾಗಿ ಯಾರನ್ನು ಆಯ್ಕೆ ಮಾಡುತ್ತಾರೆಂಬುದೇ ಜೆಡಿಎಸ್ ನಾಯಕರನ್ನು ಕಾಡುತ್ತಿರುವ ಪ್ರಶ್ನೆ.

ದೇವೇಗೌಡರ ಒಂದು ಕಾಲದ ಮಿತ್ರ, ಅನಂತರದ ಶತ್ರು, ಮತ್ತೆ ಇದೀಗ ಪುನಃ ಅವರ ಬಲಗೈ ಬಂಟನಾಗಿರುವ ಪಿ.ಜಿ.ಆರ್. ಸಿಂಧ್ಯಾಗೆ ಗೌಡರು ಟಿಕೆಟ್ ಕೊಡುವ ಬಗ್ಗೆ ಸುದ್ದಿಯಿದೆ. ಆದರೆ ಸಿಂಧ್ಯಾಗೆ ಕೊನೆ ಕ್ಷಣದಲ್ಲಿ ಕೈಕೊಟ್ಟು ಗೌಡರು ಯಾರನ್ನು ಬೇಕಾದರೂ ಚುನಾವಣೆಗೆ ನಿಲ್ಲಿಸಬಹುದು ಎಂದು ಅವರ ಪಕ್ಷದವರೇ ಹೇಳುತ್ತಿದ್ದಾರೆ. ಹೀಗಾಗಿ ದೇವೇಗೌಡರ ಮನಸ್ಸಿನಲ್ಲಿ ಯಾರ ಹೆಸರು ಇದೆ ಎಂಬುದು ಸದ್ಯಕ್ಕಂತೂ ನಿಗೂಢ. ಆದರೂ ಪರಿಷತ್ತಿನಲ್ಲಿ ಬಿಜೆಪಿ ಮಂತ್ರಿಗಳನ್ನು ಸಮರ್ಥವಾಗಿ ಎದುರಿಸಲು ಅಪಾರ ಅನುಭವವಿರುವ ಸಿಂಧ್ಯಾ ಒಳ್ಳೆಯ ಆಯ್ಕೆ ಎಂದೇ ಎಲ್ಲರ ಅಭಿಪ್ರಾಯ.

ಹೀಗೆ ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಲಿರುವ 7 ಸ್ಥಾನಗಳಿಗಾಗಿ ರಾಜಧಾನಿಯಲ್ಲಿ ಬಿರುಸಿನ ಚಟುವಟಿಕೆ ಆರಂಭವಾಗಿದೆ. ಪಕ್ಷಗಳ ನಡುವಿನ ಮೈತ್ರಿ, ತೆರೆಮರೆಯಲ್ಲಿ ಆಲಿಂಗನ, ಪರಸ್ಪರ ಕೊಡು-ಕೊಳ್ಳುವ ವ್ಯಾಪಾರ ಆರಂಭವಾಗಿದೆ. ಏನೇ ಆದರು ಕಾಂಗ್ರೆಸ್‌ನಿಂದ ಒಂದು ಸೀಟನ್ನು ಕಸಿದುಕೊಂಡಿರುವ ದೇವೇಗೌಡರು ಸದ್ಯಕ್ಕೆ ಅತ್ಯಂತ ಹೆಚ್ಚು ಲಾಭ ಪಡೆದಿರುವ ವ್ಯಕ್ತಿಯಾಗಿದ್ದಾರೆ. ಯಡ್ಡಿ ಪಾಲಿಗೆ ತನ್ನ ಭಂಟರನ್ನು ಆರಿಸುವ ಮುಖಾಂತರ ಪಕ್ಷದ ಮೇಲಿನ ತನ್ನ ಹಿಡಿತವನ್ನು ಮತ್ತೊಮ್ಮೆ ಸಾಬೀತುಮಾಡುವ ಅವಕಾಶ ದೊರೆತಿದೆ. ಕಾಂಗ್ರೆ ಆಕಾಂಕ್ಷಿಗಳಿಗಂತೂ ದೆಹಲಿಗೆ ಹೋಗಿ ಮೇಡಂ ದರ್ಶನ ಮಾಡಿದ್ದಷ್ಟೇ ಲಾಭ.

• ಸದಾಶಿವ ಶೆಣೈ
shenoylankesh@gmail.com


ಯಾರ ಬತ್ತಳಿಕೆಯಲ್ಲಿ ಯಾವ ಬಾಣವಿದೆಯೋ?

ಈ ಚುನಾವಣೆಯಲ್ಲಿ ಕೊನೇ ಕ್ಷಣದಲ್ಲಿ ಕೆಲವು ಅಚ್ಚರಿಯ ಅನಾಮಿಕ ಅಭ್ಯರ್ಥಿಗಳು ಕಣಕ್ಕಿಳಿದರೂ ಆಶ್ಚರ್ಯವಿಲ್ಲ, ಮುಂಬರುವ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಬಿಜೆಪಿ ಕೆಲವು ಕೊನೇ ಕ್ಷಣದ ಬದಲಾವಣೆಗಳನ್ನು ಮಾಡುವ ಮಾತುಗಳೂ ಕೇಳಿಬರುತ್ತಿವೆ. ಇದರಲ್ಲಿ ಮುಖ್ಯವಾಗಿ ಮೇಲ್ಮನೆಗೆ ಟಿಕೆಟ್ ಬಯಸುವ ವೀರಣ್ಣ ಮತ್ತಿಕಟ್ಟಿಗೆ ಕಾಂಗ್ರೆ ಹೈಕಮಾಂಡ್ ಅವಕಾಶ ನೀಡದಿದ್ದಲ್ಲಿ ಅವರನ್ನು ಕಿಡ್ನಾಪ್ ಮಾಡಿ ಬಿಜೆಪಿಗೆ ಕರೆತಂದು ಅಭ್ಯರ್ಥಿಯನ್ನಾಗಿಸುವ ಮಾತುಗಳು ಕೇಳಿಬರುತ್ತಿವೆ. ಉತ್ತರ ಕರ್ನಾಟಕದಲ್ಲಿ ಲಿಂಗಾಯತ ಸಮುದಾಯದ ಮತಗಳನ್ನು ಇನ್ನಷ್ಟು ಬಿಜೆಪಿಯತ್ತ ಕೇಂದ್ರೀಕರಿಸಲು ಯಡ್ಡಿ ಈ ಮಾಸ್ಟರ್ ಪ್ಲಾನ್ ಹಾಕಿಕೊಂಡಿದ್ದಾರೆನ್ನಲಾಗಿದೆ. ಈ ವೀರಣ್ಣ ಮತ್ತಿಕಟ್ಟಿ ಅತ್ಯಂತ ಜನಪ್ರಿಯ ಲಿಂಗಾಯತರ ನಾಯಕರು. ಹೀಗಾಗಿ ವೀರಣ್ಣ ಕಾಂಗ್ರೆ ತೊರೆದು ಚೆಡ್ಡಿ ಪಕ್ಷಕ್ಕೆ ಬಂದಲ್ಲಿ ಅದು ಖಂಡಿತ ಕಾಂಗ್ರೆ ಪಾಲಿಗೆ ಆಘಾತವಾಗಲಿದೆ.

ಇಂತಹ ಆಘಾತ ಮತ್ತು ಅಚ್ಚರಿ ನೀಡಲು ಬಿಜೆಪಿ ಮಾತ್ರವಲ್ಲ; ಕಾಂಗ್ರೆ ಮತ್ತು ಜೆಡಿಎಸ್ ಪಕ್ಷಗಳೂ ತಯ್ಯಾರಿ ನಡೆಸುತ್ತಿವೆ. ಯಾರ ಬತ್ತಳಿಕೆಯಲ್ಲಿ ಯಾವ ಬಾಣವಿದೆಯೋ? ಯಾರಿಗೆ ಗೊತ್ತು?

ಲೋಕೋಪಯೋಗಿ ಮಂತ್ರಿ ನಾಪತ್ತೆ!


ಉದಾಸಿ ಮಗನ ಸೀಕ್ರೆಟ್ ಸಿಡಿ?



ಲೋಕೋಪಯೋಗಿ ಮಂತ್ರಿ ಸಿ.ಎಂ.ಉದಾಸಿ ಇದ್ದಕ್ಕಿದ್ದಂತೆ ವಿಧಾನ ಸೌಧವನ್ನು ತೊರೆದು ಹಾನಗಲ್ ಹೊಕ್ಕು ಹಾಸಿಗೆ ಹಿಡಿದದ್ದಕ್ಕೂ, ಅದೆಂಥದ್ದೊ ಸಿಡಿಯಲ್ಲಿ ಅವರ ಮಗ ಶಿವಕುಮಾರ್ ಉದಾಸಿಯ ಚಿತ್ರವಿಚಿತ್ರ ದೃಶ್ಯಾವಳಿಗಳಿವೆ ಎಂಬ ಗಾಳಿಮಾತಿಗೂ ಏನಾದರೂ ಸಂಬಂಧವುಂಟೆ?

ಶಿವಕುಮಾರ್ ಉದಾಸಿ ಸದ್ಯ ಹಾವೇರಿಯ ಗೌರವಾನ್ವಿತ ಲೋಕಸಭಾ ಸದಸ್ಯ. ಮಂತ್ರಿ ಉದಾಸಿ ಸಾಹೇಬರ ಉತ್ತರಾಧಿಕಾರಿ ಕೂಡ. ಮಂತ್ರಿಯೊಬ್ಬ ಮಗನ ಕೈಗೆ ತನ್ನ ಇಲಾಖೆಯನ್ನೊಪ್ಪಿಸಿ ತಾನು ಮನೆ-ಮಠ ಎಂದು ಓಡಾಡಿಕೊಂಡಿದ್ದರೆ ಏನೆಲ್ಲಾ ಅವಘಡಗಳಾಗುತ್ತವೆ ಎಂಬುದಕ್ಕೆ ಸದ್ಯ ಲೋಕೋಪಯೋಗಿ ಇಲಾಖೆಯಲ್ಲಿ ನಡೆಯುತ್ತಿರುವ ಅನಾಚಾರಗಳೇ ಪುರಾವೆ ಕಲ್ಪಿಸುತ್ತವೆ.

ಆಗುವಾನೆ ಎಂಬ ಹುಟ್ಟಾ ಸೋಮಾರಿ ಮತ್ತು ತಿಂಡಿಪೋತ ಅಧಿಕಾರಿಯೊಬ್ಬ ಸದ್ಯ ಲೋಕೋಪಯೋಗಿ ಇಲಾಖೆಗೆ ಪ್ರಿನ್ಸಿಪಲ್ ಸೆಕ್ರೆಟರಿಯಾಗಿದ್ದಾನೆ. ಮಂತ್ರಿ ಪುತ್ರ ಶಿವಕುಮಾರ್ ಉದಾಸಿ ಹೇಳಿದ ಫೈಲಿಗೆ ಸಹಿ ಹಾಕುವುದು ಬಿಟ್ಟರೆ ತನ್ನ ಪಾಲಿನ ಕಮೀಶನ್ ಎಣಿಸಿಕೊಳ್ಳುವುದೊಂದೇ ಈತನ ಕೆಲಸ. ಉಳಿದಂತೆ ಲೋಕೋಪಯೋಗಿ ಇಲಾಖೆಯ ಕಾರುಬಾರು ನಿಭಾಯಿಸುವವನು ಚೀಫ್ ಇಂಜಿನಿಯರ್ ನಂಜುಂಡಸ್ವಾಮಿ! ಈತ ಕೂಡ ಕಮೀಶನ್ ಗಿರಾಕಿಯೇ! ಇವತ್ತು ಮಗ ಉದಾಸಿಯ ಚೇಲಾ ಸತೀಶ ಎಂಬ ಡೀಲರ್ ಇಡೀ ಲೋಕೋಪಯೋಗಿ ಇಲಾಖೆಯನ್ನು ಸಂಭಾಳಿಸುತ್ತಿದ್ದಾನೆ. ಈತನ 'ಬಾಸ್' ಆಗಿದ್ದು ಅಪ್ಪನ ಗಾದಿಯಲ್ಲಿ ಕೂತು ಇಡೀ ಲೋಕೋಪಯೋಗಿ ಖಾತೆಯ ದೊರೆಯಂತಿರುವ ಮಗ ಉದಾಸಿಯ ಯಾವ ಚೇಷ್ಟೆಯ ಯಾವ ಟೈಪಿನ ಸಿಡಿ ಪಕ್ಷಾಧ್ಯಕ್ಷ ಈಶ್ವರಪ್ಪನವರ ಕೈಸೇರಿದೆ?



ಹಾಗಂತ ಸುದ್ದಿಯಂತೂ ಹಬ್ಬಿದೆ. ಮಗನ ಪೌರುಷದ ಸಿಡಿ ರೆಡಿಯಾಗಿದೆ ಎಂಬ ಸುದ್ದಿ ಕೇಳಿಯೇ ಮಂತ್ರಿ ಉದಾಸಿ ಹಾಸಿಗೆ ಹಿಡಿದಿದ್ದಾರಂತೆ. ತನಗೆ ಮಂತ್ರಿಗಿರಿಯೂ ಬೇಡ, ವಿಧಾನ ಸೌಧದ ಸಹವಾಸವೂ ಬೇಡ ಎಂದು ಹಾನಗಲ್ ಸೇರಿಕೊಂಡು ಭೂಗತರಾಗಿರುವ ಉದಾಸಿಯನ್ನು ಸಂತೈಸಲು ಮುಖ್ಯಮಂತ್ರಿ ಯಡ್ಡಿಯೇ ಫೋನ್ ಮಾಡೀಮಾಡಿ ಸುಸ್ತಾಗಿದ್ದಾರಂತೆ!

ಮಂತ್ರಿ ಉದಾಸಿ ಏಕಾಏಕಿ ಹಾಸಿಗೆ ಹಿಡಿದಿದ್ದಕ್ಕೆ ಬೇರೆ ಕಾರಣಗಳಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನಾಯಕ ಸಲೀಮ್ ಅಹ್ಮದ್ ವಿರುದ್ಧ ಸಾಕಷ್ಟು ಲೀಡ್ ಪಡೆದೇ ಗೆದ್ದ ಮಗ ಶಿವಕುಮಾರ್ ಉದಾಸಿ ಹೇಳಿಕೇಳಿ ಶೋಕಿಲಾಲ. ಅಪ್ಪ ಪಿಡಬ್ಲ್ಯೂಡಿ ಮುಂತ್ರಿಯಾಗುತ್ತಿದ್ದಂತೆ ಮಗ ಉದಾಸಿಯ ಸುಪ್ತ ಚಪಲಗಳೆಲ್ಲಕ್ಕೂ ರೆಕ್ಕೆಪುಕ್ಕ ಬಲಿತಿವೆ. ಇದಕ್ಕೆ ತಕ್ಕಂತೆ ಮಗ ಉದಾಸಿಗೆ ಜೊತೆಯಾದವನು ಮಸ್ತ್ಕಾ ಗಿರಾಕಿ ಕಲ್ಲೇಶಿ!

ಈತ ಸದ್ಯ ದೇವನಹಳ್ಳಿಯ ಏರ್‌ಹೊಸ್ಟೆಸ್ ಕಾಲೇಜಿನ ಹಾಸ್ಟೆಲ್ ವಾರ್ಡನ್. ಏರ್‌ಹೊಸ್ಟೆಸ್ ಅಂದರೆ ಗಗನಸಖಿಯರನ್ನು ತಯಾರು ಮಾಡುವ ಕಾಲೇಜು. ಈ ಹಿಂದೆ ಆರ್.ಟಿ. ನಗರದ ಕಾಲೇಜೊಂದರಲ್ಲಿ ಈತ ಎಕನಾಮಿಕ್ಸ್ ಲೆಕ್ಚರರ್ ಆಗಿದ್ದ. ಈಗ ಜಲಸಂಪನ್ಮೂಲ ಸಚಿವ ಬಸವರಾಜು ಬೊಮ್ಮಾಯಿ ಸಾಹೇಬರ ಮೇಲೆ ದಾದಾಗಿರಿ ಮಾಡುತ್ತಿದ್ದಾನೆಂಬ ಕುಖ್ಯಾತಿ ಪಡೆದಿರುವ ಶಶಿಧರ ಎಂಬ ಡೀಲ್ ಮಾಸ್ಟರ್‌ಗೂ ಈ ಏರ್‌ಹೊಸ್ಟೆಸ್ ಕಾಲೇಜಿನ ಕಲ್ಲೇಶಿಗೂ ಗಳಸ್ಯ ಕಂಠಸ್ಯ.

ಏಕೆಂದರೆ ಒಂದಾನೊಂದು ಕಾಲಕ್ಕೆ ಇವರಿಬ್ಬರೂ ಮೆಜೆಸ್ಟಿಕ್‌ನ ಸರ್ಪಭೂಷಣ ಮಠದಲ್ಲಿದ್ದು ಕಾಲೇಜು ಪೂರೈಸಿಕೊಂಡವರು. ಒಂದಷ್ಟು ದಿನಗಳ ಕಾಲ ಕಲ್ಲೇಶಿ ಮತ್ತು ಶಶಿಧರ ಜೋಡಿ ಶಾಸಕರ ಭವನದಲ್ಲಿ ಅಂಡಲೆದುಕೊಂಡಿತ್ತು. ಶಾಸಕರ ಶೋಕಿಗೆ ತಕ್ಕಂತೆ ಬೇಕುಬೇಡಗಳನ್ನೆಲ್ಲ ಪೂರೈಸುವ ವಿದ್ಯೆ ಇಬ್ಬರಿಗೂ ಮೈಗಂಟಿತ್ತು. ಹರಿಹರದ ಮಾಜಿ ಶಾಸಕ ಶಿವಶಂಕರ್, ಭದ್ರಾವತಿಯ ಅಪ್ಪಾಜಿ, ಜೆ.ಎಚ್.ಪಟೇಲ್ ತಮ್ಮ ತೇಜಸ್ವಿ ಪಟೇಲ್, ಬೊಮ್ಮಾಯಿ ತಮ್ಮ

ಮಾ. ನಾಗರಾಜನ ಗೆಸ್ಟ್ ಹೌಸ್ ಮತ್ತು ಕಾಳರಾತ್ರಿಯ ಕನ್ನಿಕೆಯರು

ಉದಾಸಿ ಮಗನ ನಿಗೂಢ ಸೀಡಿಗೂ ಸದ್ಯ ಕೆಪಿಎಸ್‌ಸಿ ಅಂದರೆ ಲೋಕಸೇವಾ ಆಯೋಗದ ಸದಸ್ಯನಾಗಿರುವ ಮಾ. ನಾಗರಾಜ್ ಎಂಬಾತನಿಗೂ ಯಾವುದೋ ಬಾದರಾಯಣ ಸಂಬಂಧವಿರುವಂತಿದೆ.

2005 ರ ಹೊತ್ತಿಗೆ ಒಂದಲ್ಲ ಎರಡು ಬಾರಿ ರಾಜ್ಯ ಎಬಿವಿಪಿ ಅಂದರೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿಗೆ ಅಧ್ಯಕ್ಷನಾಗಿದ್ದವನು ಮಾ. ನಾಗರಾಜ್. ಈಗ ಶಿವಕುಮಾರ್ ಉದಾಸಿಗೆ ಭಟ್ಟಂಗಿಯಂತಿರುವ ಭೋಜರಾಜ್ ಕೆರೂದಿ ಮತ್ತು ಈ ನಾಗರಾಜ್ ಇಬ್ಬರೂ ಚೆಡ್ಡಿದೋಸ್ತ್‌ಗಳು. ಆ ಹೊತ್ತಿಗೆ ಹುಬ್ಬಳ್ಳಿಯ ಭೂಮರೆಡ್ಡಿ ಕಾಲೇಜಿನಲ್ಲಿ ಮೆಕಾನಿಕಲ್ ವಿಭಾಗದ ಮುಖ್ಯಸ್ಥನಾಗಿದ್ದ ನಾಗರಾಜ್ ತನ್ನದೇ ಕಾಲೇಜಿನ ವಿದ್ಯಾರ್ಥಿನಿಯೊಬ್ಬಳನ್ನು ಪಟ್ಯಾಯಿಸಿಕೊಂಡು ಪರಾರಿಯಾಗಿದ್ದ. ಇದು ದೊಡ್ಡ ರಾದ್ಧಾಂತವಾಗಿ ನಾಗರಾಜನ ಪತ್ನಿ ಎಲ್ಲೆಂದರಲ್ಲಿಗೆ ದಾಳಿಯಿಡತೊಡಗಿದಳು. ಕೊನೆಗೆ ಕೇಂದ್ರ ಮಂತ್ರಿ ಅನಂತ್‌ಕುಮಾರ್ ಸ್ವತಃ ಆಸಕ್ತಿ ವಹಿಸಿ ಪಂಚಾಯತಿಗಿಳಿದರೂ ನಾಗರಾಜ್ ಆ ಹುಡುಗಿಯನ್ನು ಬಿಡಲಿಲ್ಲ, ಅಂತಿಮವಾಗಿ ನಾಗರಾಜನ ಹೆಂಡತಿಗೆ ನ್ಯಾಯ ಕೊಡಿಸಿದ್ದು ಪೇಜಾವರ ಸ್ವಾಮೀಜಿ.

ರಾಜ್ಯ ಎಬಿವಿಪಿ ಅಧ್ಯಕ್ಷನೇ ಲೈಂಗಿಕ ಸುಳಿಯಲ್ಲಿ ಸಿಕ್ಕಿಬಿದ್ದ ಮೇಲೆ ಅದಕ್ಕೇನಾದರೂ ತೇಪೆ ಹಾಕಲೇಬೇಕಲ್ಲವೆ?

ಅದಕ್ಕೆ ಆರೆಸ್ಸೆಸ್ ಮುಖಂಡರು ಮಾಡಿದ ಮದ್ದೇ ಮಾ. ನಾಗರಾಜ್‌ಗೆ ಲೋಕಸೇವಾ ಸದಸ್ಯತ್ವ. ಎಬಿವಿಪಿ ಅಧ್ಯಕ್ಷ ಗಾದಿಯಿಂದ ಇಳಿಸಿದಂತೆಯೂ ಆಗಬೇಕು ಹಾಗೇ ಮಾ. ನಾಗರಾಜ್‌ಗೊಂದು ಪರ್ಯಾಯ ಹುದ್ದೆ ಸಿಕ್ಕಂತೆಯೂ ಆಗಬೇಕು!

ಹೀಗೆ ಹುಬ್ಬಳ್ಳಿಯಲ್ಲಿ ಸೆಕ್ಸ್ ಸ್ಕ್ಯಾಂಡಲ್ಲಿಗೆ ಸಿಲುಕಿ ಬೆಂಗಳೂರಿನ ಲೋಕಸೇವಾ ಆಯೋಗದ ಗಾದಿಗೇರಿದ ಮಾ. ನಾಗರಾಜ್‌ಗೆ ಅವತ್ತು ಕಾಲೇಜಿನ ಆ ಯುವತಿಯನ್ನು ಧಾರೆಯೆರೆದು(!) ಕೊಟ್ಟವನು ಇದೇ ಭೋಜರಾಜ್ ಕೆರೂದಿ. ಸದ್ಯ ಲೋಕಸೇವಾ ಆಯೋಗದ ಆಮದನಿಯೇ ಕೋಟಿ ಲೆಕ್ಕದಲ್ಲಿ ಬರುತ್ತಿದೆ. ಹಡಬೆ ದುಡ್ಡನ್ನು ಹೇಗಾದರೂ ಖರ್ಚು ಮಾಡಲೇಬೇಕಲ್ಲ; ಅದಕ್ಕೊಂದು ಮಾ. ನಾಗರಾಜ್ ಶಿವಾನಂದ ಸರ್ಕಲ್ ಸಮೀಪ ಗೆಸ್ಟ್ ಹೌಸ್ ಒಂದನ್ನು ಹಿಡಿದಿದ್ದಾನೆ. ಮಂತ್ರಿ ಗೋವಿಂದ್ ಕಾರಜೋಳರ ಮನೆಯೆದುರೇ ನಾಗರಾಜನ ಗೆಸ್ಟ್ ಹೌಸಿದೆ. ಈ ಗೆಸ್ಟ್ ಹೌಸ್‌ನಿಂದ ಐದನೇ ಮನೆಯೇ ಉದಾಸಿಯವರದ್ದು.

ಪ್ರತಿ ಸಂಜೆಯಾದರೆ ನಾಗರಾಜ್‌ನ ಗೆಸ್ಟ್ ಹೌಸ್‌ನಲ್ಲಿ ಬರಪೂರ ಪಾರ್ಟಿಯಿರುತ್ತದೆ. ಅಲ್ಲಿಗೆ ಕೆರೂದಿ ಮಾತ್ರವಲ್ಲದೇ ಉದಾಸಿ ಮಗ ಶಿವಕುಮಾರನೂ ಬರುತ್ತಾನೆ. ರಾತ್ರಿ ಕತ್ತಲಾಗುತ್ತಿದ್ದಂತೆ ಕೆಲ ನಿಗೂಢ ಯುವತಿಯರೂ ಇದೇ ಗೆಸ್ಟ್‌ಹೌಸಿಗೆ ಬರುತ್ತಾರೆ. ಇಂಥ ಯಾವುದೋ ಮೈಮರೆತ ಗಳಿಗೆಯನ್ನು ಕಾದು ಯಾರೋ ಉದಾಸಿ ಮಗನ ವೀಡಿಯೋ ಹಿಡಿದಿರಬಹುದೇ?

ಯಡ್ಡಿ ಸರ್ಕಾರಕ್ಕೆ ಎಂಥಾ ಗತಿ ಬಂತಲ್ಲವೆ?

ಬಾಗಲಕೋಟೆ


ಶುರುವಾಯಿತು ಬಿಜೆಪಿಗಳ 'ಸುಪಾರಿ' ರಾಜಕೀಯ

ಇಡೀ ಬಾಗಲಕೋಟೆ ಬೆಚ್ಚಿಬಿದ್ದಿದೆ. ಬಿಜೆಪಿಯೊಳಗಿನ ಭಿನ್ನಮತ ನೆತ್ತರಿನ ಮಳೆ ಸುರಿಸಲು ಸಜ್ಜಾಗಿದೆ. ಬರೀ ಭ್ರಷ್ಟಾಚಾರ, ಲಫಂಗತನಗಳನ್ನೇ ದಿನಚರಿಯಾಗಿರಿಸಿಕೊಂಡಿರುವ ಬಿಜೆಪಿಗಳು ಈಗ ನೆತ್ತರು ಹೀರಲು ಸಜ್ಜಾಗಿದ್ದಾರೆ. ಬಾಗಲಕೋಟೆಯಲ್ಲಿ ಮಂತ್ರಿ ಮುರುಗೇಶ್ ನಿರಾಣಿಯ ಅಳಿಯ ಯೇಗಪ್ಪ ಹತ್ಯಾ ರಾಜಕಾರಣಕ್ಕೆ ಮುನ್ನುಡಿ ಹಾಡಿದ್ದಾನೆ. ಹಾಗೆ ಯೇಗಪ್ಪನಿಂದ ಹತ್ಯಾ ಯತ್ನಕ್ಕೆ ಒಳಗಾದವನ ಹೆಸರು ಹನುಮಂತ ಕಾತ್ರಾಳ.

ಬಾಗಲಕೋಟೆಯ ಜಮಖಂಡಿ ಈ ನೆತ್ತರ ಕಲಹದ ತವರು ನೆಲ. ಅಲ್ಲಿ ಈ ಹನುಮಂತ ಕಾತ್ರಾಳ ಈಗಷ್ಟೇ ಬೆಳಕಿಗೆ ಬರುತ್ತಿದ್ದ ಪ್ರಬಲ ನಾಯಕ. ಒಂದಿಷ್ಟು ಜಿದ್ದು, ಹುಂಬತನವನ್ನು ಮೈಗೂಡಿಸಿಕೊಂಡೇ ಬೆಳೆದು ಬಂದಾತ. ಆರ್ಥಿಕವಾಗಿಯೂ ಅಷ್ಟಿಷ್ಟು ಸಬಲನಾಗಿದ್ದ. ಜಾತಿಯಿಂದ ಉಪ್ಪಾರ. ಜಮಖಂಡಿ ಸೀಮೆಯ ಹಿರೇಪಡಲಗಿ ಸರಹದ್ದಿನಲ್ಲಿ ಒಂದಿಷ್ಟು ಪ್ರಬಲ ಹಿಡಿತ ಹೊಂದಿದ್ದ. ವಿಚಿತ್ರವೆಂದರೆ ಇದೇ ಹಿರೇಪಡಲಗಿ ಇಬ್ಬರು ಶಾಸಕರ ತವರೂ ಹೌದು. ಜಮಖಂಡಿಯ ಶ್ರೀಕಾಂತ ಕುಲಕರ್ಣಿ, ತೇರದಾಳದ ಸಿದ್ದು ಸವದಿ ಇದೇ ಹಿರೇಪಡಲಗಿ ಎಂಬ ಗ್ರಾಮದವರು.


ಬಾಗಲಕೋಟೆಯ ಜಿಲ್ಲಾ ಪಂಚಾಯತಿ ಅಧ್ಯಕ್ಷೆ ಕಸ್ತೂರಿ ಕಾತ್ರಾಳ ಕೂಡಾ ಇದೇ ಗ್ರಾಮದಾಕೆ. ಈಕೆ ಹನುಮಂತ ಕಾತ್ರಾಳನ ಖಾಸಾ ಹೆಂಡತಿ. ತನ್ನ ರಾಜಕೀಯ ತಂತ್ರ ಮತ್ತು ಶಕ್ತಿಯಿಂದ ಹೆಂಡತಿಯನ್ನು ಜಿಲ್ಲಾ ಪಂಚಾಯತಿಯ ಸದಸ್ಯೆಯನ್ನಾಗಿಸಿದ ಹನುಮಂತ ನಂತರದ ದಿನದಲ್ಲಿ ಆಕೆಯನ್ನು ಅದೇ ಜಿ.ಪಂ. ಅಧ್ಯಕ್ಷೆಯನ್ನಾಗಿಸಿದ. ಆರಂಭದ ದಿನದಿಂದಲೂ ಈತ ಮಹಾ ಮಹತ್ವಾಕಾಂಕ್ಷಿ. ಒಂದು ಕಾಲಕ್ಕೆ ಆರೆಸ್ಸೆಸ್ ಚಿಡ್ಡಿ ತೊಟ್ಟುಕೊಂಡೇ ರಾಜಕಾರಣದ


ಮಲ್ಲನಗೌಡ


ಸಿದ್ದು ಸವದಿ


ಶ್ರೀಕಾಂತ್‌ಕುಲಕರ್ಣಿ


ಕಸ್ತೂರಿಕಾತ್ರಾಳ


ಹನುಮಂತ ಕಾತ್ರಾಳ

ಮೊದಲ ಮೆಟ್ಟಿಲು ತುಳಿದ ಹನುಮಂತ ಕಾತ್ರಾಳ ನಂತರ ಕಾಂಗ್ರೆಸ್ ಸೇರಿ ಮತ್ತೆ ಬಿಜೆಪಿ ಸೇರಿ ಅಪ್ಪಟ ಅವಕಾಶವಾದಿಯಾಗಿದ್ದ.

ಈ ಎಲ್ಲ ಹಂತದಲ್ಲೂ ಅವನು ಜಮಖಂಡಿ ಶಾಸಕ ಶ್ರೀಕಾಂತ ಕುಲಕರ್ಣಿಯ ಗೆಳೆತನವನ್ನು ಬಿಟ್ಟಿರಲಿಲ್ಲ. ಜಮಖಂಡಿಯ ಚೆಡ್ಡಿ ಪಾಳೆಯದಲ್ಲಿ ಈ ಶ್ರೀಕಾಂತ್ ಕುಲಕರ್ಣಿಯದು ದೊಡ್ಡ ಹೆಸರು. ಹಿಂದೆಲ್ಲ ಸೋಲುವುದಕ್ಕೆ ನಿಲ್ಲುತ್ತಿದ್ದ ಶ್ರೀಕಾಂತ ಕುಲಕರ್ಣಿ ಈ ಬಾರಿ ಗೆದ್ದಿದ್ದೇ ಒಂದು ಪವಾಡ. ತನ್ನ ಬ್ರಾಹ್ಮಣಿಕೆ ಕುತಂತ್ರದಿಂದಲೇ ಸಿದ್ದು ಸವದಿಯನ್ನು ಪಕ್ಕದ ತೇರದಾಳಕ್ಕೆ ತಳ್ಳಿದ ಶ್ರೀಕಾಂತ ಜಮಖಂಡಿಯನ್ನು ಆಕ್ರಮಿಸಿಕೊಂಡ. ಗೆದ್ದ ಮಾರನೆಯ ದಿನದಿಂದಲೇ ತನ್ನ ನಿಯತ್ತು, ಪ್ರಾಮಾಣಿಕತೆಯನ್ನು ಬದಿಗೆ ತಳ್ಳಿ, ನಿರಂತರ ಸುಲಿಗೆಗೆ ನಿಂತ.

ಕೆಲ ತಿಂಗಳ ಹಿಂದೆ ನಡೆದ ಜಿಲ್ಲಾ ಪಂಚಾಯತಿ ಅಧ್ಯಕ್ಷ ಚುನಾವಣೆಯಲ್ಲಿ ಕಾಂಗ್ರೆಸ್‌ನ ಭಿನ್ನಮತ ಬೆಳಕಿಗೆ ಬಂತು. ಹಿಂದುಳಿದವರಿಗೆ ಅಧ್ಯಕ್ಷಸ್ಥಾನ ಮೀಸಲಾಗಿತ್ತು. ಬಹುಮತವಿದ್ದ ಕಾಂಗ್ರೆಸ್ ತನ್ನ ನಾಯಕರಿಂದಾಗಿಯೇ ಹಳ್ಳಕ್ಕೆ ಬಿತ್ತು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಚಿಮ್ಮನಕಟ್ಟಿ, ಮುಖಂಡ ಯಲಪ್ಪ ಮೇಟಿ ತಮ್ಮ ಕುರುಬ ಸ್ವಜಾತಿಯವರನ್ನು ಪಟ್ಟಕ್ಕೆ ಕಟ್ಟಲು ಯತ್ನಿಸಿದರು. ಕಾಂಗ್ರೆಸ್ ಪಾಳೆಯದಲ್ಲಿ ರಣರಂಗವಾಯಿತು.

ಇದನ್ನೇ ಹಸಿದ ನಾಯಿಯಂತೆ ಕಾಯುತಿದ್ದ ಬಿಜೆಪಿಗಳು ಪರಿಸ್ಥಿತಿಯನ್ನು ತಮ್ಮ ಅನುಕೂಲಕ್ಕೆ ಬಳಸಿಕೊಂಡರು. ಕಾಂಗ್ರೆಸ್‌ನಿಂದ ಹೆಂಡತಿಯನ್ನು ಜಿಲ್ಲಾ ಪಂಚಾಯತಿ ಸದಸ್ಯೆಯನ್ನಾಗಿಸಿದ್ದ ಹನುಮಂತ ಕಾತ್ರಾಳ ಪೂರ್ತಿ ಅವಕಾಶವಾದಿಯಾದ. ಬಿಜೆಪಿಗಳೊಂದಿಗೆ ಸೇರಿಕೊಂಡ ಕಾಂಗ್ರೆಸ್ ಇಬ್ಭಾಗವಾಯಿತು. ಜಿಲ್ಲಾ ಪಂಚಾಯತಿ ಅಧ್ಯಕ್ಷ ಪಟ್ಟ ಅವನ ಹೆಂಡತಿ ಕಸ್ತೂರಿ ಕಾತ್ರಾಳಳ ಪಾಲಿಗೆ ಬಂತು. ಇದೆಲ್ಲವೂ ಸಾಧ್ಯವಾಗಿದ್ದು ಶ್ರೀಕಾಂತ್ ಕುಲಕರ್ಣಿಯ ಕಪಟಬುದ್ಧಿಯಿಂದ.

ಹನುಮಂತ ಕಾತ್ರಾಳ ಬಿಜೆಪಿ ಸೇರಿಕೊಂಡ ಹೊಸ ಕದನ ಶುರುವಿಟ್ಟುಕೊಂಡ. ಹಳೇ ಬಿಜೆಪಿಗಳಾದ ಯೇಗಪ್ಪ ಮಲ್ಲನಗೌಡ ಪಾಟೀಲರೊಂದಿಗೆ ಜಿದ್ದಿಗೆ ಬಿದ್ದ. ಈ ಪೈಕಿ ಮಲ್ಲನಗೌಡ ಪಾಟೀಲನಿಗೆ ಕ್ರಿಮಿನಲ್ ಹಿನ್ನೆಲೆಯಿತ್ತು. ಒಂದು ಕಾಲಕ್ಕೆ ಇವರಿಬ್ಬರೂ ಗೆಳೆಯರೇ. ಅವನಿಗೂ ಹನುಮಂತನಿಗೂ ಶುದ್ಧ ರಾಜಕೀಯ ವೈಮನಸ್ಯವಿತ್ತು. ಜಮಖಂಡಿಯ ರಾಜಕಾರಣದಲ್ಲಿ ಯೇಗಪ್ಪನಿಗೆ ಕಿರಾತಕ ಹಿನ್ನೆಲೆಯಿದೆ. ಅವನು ಜಮಖಂಡಿಯ ಬಡ್ಡಿಮಗ ಕೌತರ ರಕ್ತ ಹೀರುತ್ತಿದ್ದ ಬಡ್ಡಿ ಕ್ರಿಮಿ ಜೊತೆಗೆ ಪಂಪ್‌ಸೆಟ್ ವ್ಯಾಪಾರಿ ಬೇರೆ.

ಮಲ್ಲನಗೌಡ ಪಾಟೀಲನಂತಹ ಹತ್ತಾರು ಅನಕ್ಷರಸ್ಥರನ್ನೂ ಸಾಕಿಕೊಂಡಿದ್ದ ಯೇಗಪ್ಪ ಅವರಿಗೆಲ್ಲ ಅಷ್ಟಿಷ್ಟು ಕಾಂಟ್ರ್ಯಾಕ್ಟ್ ಕೊಡಿಸಿ ಹಿಡಿತದಲ್ಲಿಟ್ಟುಕೊಂಡಿದ್ದ. ಮಲ್ಲನಗೌಡನ ಇತಿಹಾಸವೇ ಅಂತಹದು. ಅವನ ಹೆಸರಿನಲ್ಲಿ ಹಲವು ರೇಪ್, ಗಾಂಜಾ ಮಾರಾಟ, ಶ್ರೀಗಂಧ ಕಳ್ಳತನ, ಹಲ್ಲೆ ದರೋಡೆ ಇತ್ಯಾದಿ ಕೇಸುಗಳಿದ್ದವು. ಅದನ್ನೇ ತನ್ನ ಸಾಧನೆ ಎಂಬಂತೆ ತನ್ನೊಂದಿಗೆ ತನ್ನಷ್ಟು ಹೀನ ಹಿನ್ನೆಲೆಯ ಜನರನ್ನು ಇಟ್ಟುಕೊಂಡು ಮೆರೆದಾಡುತ್ತಿದ್ದ.

ಹನುಮಂತ ಕಾತ್ರಾಳನ ಹಂತಹಂತದ ಬೆಳವಣಿಗೆ ಯೇಗಪ್ಪನಿಗೆ ನಂಬಲಾಗಲಿಲ್ಲ. ದಿನದಿಂದದಿನಕ್ಕೆ ದ್ವೇಷ ಬೆಳೆಯತೊಡಗಿತ್ತು. ಒಂದೆರಡು ಬಾರಿ ನೇರ ಮುಖಾಮುಖಿ ಕದನಗಳಾದವು. ಹುಂಬ ಹನುಮಂತ ಕಾತ್ರಾಳ ಯೇಗಪ್ಪನಿಗೆ ಸೆಡ್ಡು ಹೊಡೆದು ಅವನನ್ನು ಇನ್ನಷ್ಟು ಕೆರಳಿಸಿದ.

ಆಗ ಶುರುವಾಯಿತು ಮಾರಣಹೋಮದ ಸ್ಕೆಚ್ಚು. ಹನುಮಂತ ಕಾತ್ರಾಳನನ್ನು ಮುಗಿಸಿ ಹಾಕಲು ಯೇಗಪ್ಪ ನಿರ್ಧರಿಸಿದ. ಅವನಿಗೆ ಸಿದ್ದು ಸವದಿಯ ಆಸರೆಯಿತ್ತು. ಮುರುಗೇಶ ನಿರಾಣಿಯ ಬೆಂಬಲವಿತ್ತು ಮತ್ತು ಇವರಿಬ್ಬರ ಬಗ್ಗೆ ಭಾರಿ ಭರವಸೆಯಿತ್ತು. ಈ ಕಾರಣಕ್ಕೆ ಇಂತಹ ಹೀನಕೃತ್ಯಕ್ಕೆ ಕೈಹಾಕಿದ. ಹನುಮಂತ ಕಾತ್ರಾಳನನ್ನು ಮುಗಿಸಲು ಸಂಚು ರೂಪಿಸಿದ ಯೇಗಪ್ಪ ಈ ಬಗ್ಗೆ ತನ್ನ ಬಲಗೈ ಬಂಟ ಮಲ್ಲನಗೌಡನ ಹತ್ತಿರ ದಿನಗಟ್ಟಲೇ ಚರ್ಚಿಸಿದ್ದಾನೆ.

ಕಾರ್ಜುನ: ಹೀಗೆ ಶಾಸಕರ
ದ ಚಪಲವಂತ ಧಣಿಗಳಿಗೆ
ದ ಶಶಿಧರ ಮತ್ತು ಕಲ್ಲೇಶಿಗೆ
ಹೊತ್ತಿಗೆ ಗಂಟುಬಿದ್ದವನು
ಮಾರ್ ಉದಾಸಿ. ಅದಕ್ಕೆ
ಭೋಜರಾಜ್ ಕೆರೂದಿ
ಕೇಸರಿ ವೀರನೊಬ್ಬ ಮಗ
ಸಿಗೆ ಗಂಟುಬಿದ್ದಿದ್ದಾನೆ. ಈತ
ರಾಜ್ಯ ಬಿಜೆಪಿಯ ಪ್ರಧಾನ
ದರ್ಶಿ. ಕಳೆದ ಸಂಸತ್
ವಣೆಯಲ್ಲಿ ಈತನೇ
ರಿಗೆ ಬಿಜೆಪಿ ಅಭ್ಯರ್ಥಿಯಾಗಬೇಕಿತ್ತು.
ಸಿ ಮಗನ ಜೊತೆ ದೊಡ್ಡ ಮಟ್ಟದಲ್ಲಿ ಡೀಲು
ರಿಸಿಕೊಂಡು ತನಗೆ ಮೀಸಲಿಟ್ಟಿದ್ದ ಪಕ್ಷದ
ನ್ನು ಬಿಟ್ಟುಕೊಟ್ಟ. ತಾನೇ ನಿಂತು ಮಗ
ಸಿಯನ್ನು ಗೆಲ್ಲಿಸಿಕೊಟ್ಟ. ಈಗ ಮಗ ಉದಾಸಿ
ನ ಋಣ ತೀರಿಸುತ್ತಿದ್ದಾನೆ.



ಂಜೆಯಾದರೆ ಸಾಕು ಮಗ ಉದಾಸಿ ಮತ್ತು
ಪಾರ್ಟಿ ಮಾಡುತ್ತಾರೆ. ಗುಂಡು-ತುಂಡಿನ
ಾಗಿ ಮತ್ತೇನಾದರೂ ಬೇಕೆಂದರೆ ಅದಕ್ಕೆ ಕಲ್ಲೇಶಿ
ಎ-'ಕಾಮಿ'ನಿಸ್ಟ್ ನೆರವಾಗುತ್ತಾನೆ. ಅತ್ತ ಶಶಿಧರ
ಮ್ಮಾಯಿಗೆ ಸೇವೆಗೈದಂತೆ ಕಲ್ಲೇಶಿ ಶಿವಕುಮಾರ್
ಸಿಗೆ ಝುಂಡುಬಾಮ್ ತಿಕ್ಕುತ್ತಾನೆ. ಉದಾಸಿ ಮಗನ
ಪಾರ್ಟಿ ನಡೆಯುವುದು ಲ್ಯಾವೆಲ್ಲಿ ರಸ್ತೆಯ ಹೌಸ್
ಲಾರ್ಡ್ಸ್ ಎಂಬ ಐಷಾರಾಮಿ ಕಾಂಪ್ಲೆಕ್ಸ್‌ನಲ್ಲಿ.
ಎರಡನೇ ಮಹಡಿಯಲ್ಲೇ ಮಗ ಉದಾಸಿಯ
'ಇನ್‌ಫೋಸೊಲ್ಯೂಷನ್ಸ್' ಮತ್ತು 'ರಾಶಿ
ಪರ್ಸ್' ಎಂಬ ಎರಡು ಕಂಪನಿಗಳ ಕಾರ್ಪೋರೇಟ್
ಗಳಿವೆ.

ಶಿ ಇನ್‌ಫೋಸಲ್ಯೂಷನ್ಸ್ ಮತ್ತು ರಾಶಿ
ಪರ್ಸ್ ಹೆಸರಿಗಷ್ಟೇ ಕಂಪನಿಗಳಾದರೂ ಇದಕ್ಕೆ
ದಾರರಾಗಿರುವ ಪ್ರಸಾದ್ ರೆಡ್ಡಿ ಮತ್ತು ರಮಣಾ
ಪ್ರಳಯಾಂತಕರು. ಮಗ ಉದಾಸಿಯನ್ನು
ಟ್ಟುಕೊಂಡು ಲೋಕೋಪಯೋಗಿ ಇಲಾಖೆಯ
ಮೊತ್ತದ ಕಾಂಟ್ರಾಕ್ಟ್ ಹಿಡಿಯುತ್ತಾರೆ. ಇಬ್ಬರೂ
ಮೂಲದ ಖದೀಮರು. ಹೆಸರಿಗಷ್ಟೇ ಐಟಿ
ಅಂತ ಮಾಡಿಕೊಂಡಿದ್ದಾರೆ. ಮಂತ್ರಿ ಮಗನನ್ನು
ನರ್ ಮಾಡಿಸಿಕೊಂಡು ಲೋಕೋಪಯೋಗಿ
ಯನ್ನು ದೋಚುತ್ತಿದ್ದಾರೆ. ಈ ಪ್ರಸಾದ್ ರೆಡ್ಡಿ
ರಮಣಾ ರೆಡ್ಡಿ ಕೂಡ ಪ್ರತಿ ಸಂಜೆಯ
ಯಲ್ಲಿ ಉದಾಸಿ ಮಗನಿಗೆ ಸಾಥ್ ಕೊಡುತ್ತಾರೆ.
ಉದಾಸಿ ಮಗನ ಇಂಥ ದೌರ್ಬಲ್ಯ ಗೊತ್ತಿದ್ದೇ
ಶಶಿಧರ್ ತನ್ನ ಶಿಷ್ಯ ಕಲ್ಲೇಶಿಯ ಮೂಲಕ
ಮಗನ ಪ್ರಣಯ ಪ್ರಸಂಗವನ್ನು ಚಿತ್ರೀಕರಿಸಿಕೊಂಡನೆ? ಅಥವಾ ಯಾವತ್ತಿದ್ದರೂ ಉದಾಸಿ ಮಗ ತನ್ನ ಪ್ರತಿಸ್ಪರ್ಧಿ ಎಂಬ ಹೊಟ್ಟೆಕಿಚ್ಚಿಗೆ ಬಿದ್ದು ಚೆಡ್ಡಿ ಪುಢಾರಿ ಕೆರೂದಿಯೇ ಕ್ಯಾಮೆರಾ ಫಿಕ್ಸ್ ಮಾಡಿದನೆ? ಬಹುಶಃ ಆಂಧ್ರದ ಖದೀಮರಾದ ಪ್ರಸಾದ್ ರೆಡ್ಡಿ ಮತ್ತು ರಮಣಾ ರೆಡ್ಡಿ ಸೇರಿಕೊಂಡು ತಮ್ಮ ಐಟಿ ತಲೆ ಓಡಿಸಿರಬಹುದೆ?

ಯಾವತ್ತು ಹಾಲಪ್ಪನ ಸೆಕ್ಸ್ ಸಿಡಿ ಟೀವಿಗಳಲ್ಲಿ ವಿಜೃಂಭಿಸಿತೋ ಇದಾಗಿ ವಾರಕ್ಕೇ ಉದಾಸಿ ಮಗನ ಸಿಡಿಯ ಸುದ್ದಿ ಪುಕಾರೆದ್ದಿದೆ. ಏರ್‌ಹೊಸ್ಟೆಸ್ ಕಾಲೇಜಿನ ಕಲ್ಲೇಶಿಗೂ ಮಗ ಉದಾಸಿಗೂ ನಂಟಿರುವುದಂತೂ ಸತ್ಯ. ಹಾಗೇ ಬೊಮ್ಮಾಯಿ ಚೇಲಾ ಶಶಿಧರ ಕೂಡ ಮಗ ಉದಾಸಿಗೆ ಆತ್ಮೀಯನೇ. ದೇವನಹಳ್ಳಿಯ ಏರ್‌ಹೊಸ್ಟೆಸ್ ಕಾಲೇಜಿನ ಬಿಂದಾಸ್ ಹುಡುಗಿಯರಿಗೆ ಕೆಲಸ, ಕಾರ್ಯ, ಖರ್ಚು ವೆಚ್ಚಗಳಿಗೆಲ್ಲ ಕಲ್ಲೇಶಿಯ ಮೂಲಕ ಉದಾಸಿ ಮತ್ತು ಕೆರೂದಿ ನೆರವಾಗುತ್ತಿದ್ದದ್ದೂ ಉಂಟಂತೆ. ಹೀಗೆ ಕಲ್ಲೇಶಿ ಪಾರ್ಟಿಗೆ ಕರೆತರುತ್ತಿದ್ದ ಕನ್ಯಾಮಣಿಗಳೆಲ್ಲ ನಿಜಕ್ಕೂ ಏರ್‌ಹೊಸ್ಟೆಸ್ ಕಾಲೇಜಿನವರಾ ಅಥವಾ ಶಶಿಧರನ ಬತ್ತಳಿಕೆಯಲ್ಲಿದ್ದ ಅಮೂಲ್ಯ ಮಣಿರತ್ನಗಳಾ ಗೊತ್ತಿಲ್ಲ. ಇಂಥವರೇ ಸಿಡಿ ಸೃಷ್ಟಿಸಿದ್ದಾರೆಂಬುದಕ್ಕೂ ಪುರಾವೆಗಳಿಲ್ಲ. ಅಂತೂ ಉದಾಸಿ ಮಗನ ಸಿಡಿ ಪಕ್ಷಾಧ್ಯಕ್ಷ ಈಶ್ವರಪ್ಪನವರ ಕೈ ಸೇರಿದೆಯೆಂಬ ಸುದ್ದಿಯಂತೂ ಹಬ್ಬಿದೆ.

ಇದು ಗೊತ್ತಾಗಿದ್ದೇ ತಡ, ಕುಸಿದು ಬಿದ್ದ ಉದಾಸಿ ಮಗನ ಮುಖ ಕೂಡ ನೋಡದೇ ಬೆಂಗಳೂರು ಬಿಟ್ಟಿದ್ದಾರೆ. ಸೀದಾ ತಮ್ಮ ಸ್ವಕ್ಷೇತ್ರ ಹಾನಗಲ್ಲಿಗೆ ಹೋಗಿದ್ದೇ ಹಾಸಿಗೆ ಹಿಡಿದಿದ್ದಾರೆ. ಇಲಾಖೆಯ ಪ್ರಿನ್ಸಿಪಲ್ ಸೆಕ್ರೆಟರಿ ಆಗುವಾನೆ, ತಮ್ಮ ಕಚೇರಿಯ ಪ್ರಮುಖ ಸಿಬ್ಬಂದಿ ಫೋನ್ ಮಾಡಿದಾಗಲೂ ಕನಿಷ್ಠ ಮಾತು ಕೂಡ ಆಡಿಲ್ಲವಂತೆ. ಕೊನೆಗೆ ಮುಖ್ಯಮಂತ್ರಿ ಯಡ್ಡಿಯೇ ಫೋನ್ ಮಾಡಿ ಸಂತೈಸಿದರಂತೆ. ಸಧ್ಯ ಲೋಕೋಪಯೋಗಿ ಇಲಾಖೆ ಪೂರ್ತಿ ಮಗ ಉದಾಸಿಯ ನಿಯಂತ್ರಣದಲ್ಲಿದೆ. ನಿಜಕ್ಕೂ ಅದು ಸೆಕ್ಸ್ ಸಿಡಿಯಾ? ಅಥವಾ ಲಂಚದ ರೊಕ್ಕ ಎಣಿಸಿಕೊಳ್ಳುತ್ತಿದ್ದ ದೃಶ್ಯವಿದೆಯಾ?

ಹಾಗೊಮ್ಮೆ ಅಂಥಾದ್ದೇನೂ ಇಲ್ಲದಿದ್ದರೆ ಮಂತ್ರಿ ಉದಾಸಿ ಏಕೆ ನಾಪತ್ತೆಯಾಗುತ್ತಿದ್ದರು? ಏಕೆ ಇದ್ದಕ್ಕಿದ್ದಂತೆ ಭೂಗತರಾಗಿ ಹಾಸಿಗೆ ಹಿಡಿಯುತ್ತಿದ್ದರು? ಅಂಥಾ ಮಂತ್ರಿಗಿರಿಯನ್ನೇ ಅರ್ಧಕ್ಕೆ ಬಿಟ್ಟು ಕೊರಗುತ್ತಾ ಕೂರುವಂಥಾದ್ದು ಏನಾಗಿತ್ತು?

• ರಾ.ಸೋಮನಾಥ್

ಕ್ಷಕ್ಕೆ ಡೀಲ್ ಕುದುರಿಸಲಾಗಿದೆ. ಅನಂತರ ಮಲ್ಲನಗೌಡ
ಕಿದ್ದು ವೃತ್ತಿಪರ ಕ್ರಿಮಿನಲ್‌ಗಳಾದ ರವಿಭಜಂತ್ರಿ
ವಿಠ್ಠಲ ಕೂಳಿ ಎಂಬುವವರನ್ನು. ಬಿಜಾಪುರ
ದ ಮಹಾಪಾತಕಿ ರವಿಭಜಂತ್ರಿ ದಾಳಿಯ ನೇತೃತ್ವ
ಕೊಂಡ. ವೃತ್ತಿಯಲ್ಲಿ ಆಟೋಡ್ರೈವರ್ ಆಗಿದ್ದ ಆತ
ಗಿ ಊರಿನ ಪಕ್ಕದ ಅಡಹುಡಿ ಗ್ರಾಮದವನು.
ದೊಂದಿಗೆ ಗಂಧಕಳ್ಳತನ, ಗಾಂಜಾ ಮಾರಾಟ ಅವನ
ಸುಬುಗಳಾಗಿದ್ದವು. ಮೊದಲ ಕಂತಾಗಿ ಪೂರ್ತಿ 8
ಕೊಡಲಾಗಿದೆ. ಅನುಮಾನಬರದಂತೆ ಹನುಮಂತ
ನನ್ನು ಕೊಂದುಹಾಕಲು ಸ್ಕೆಚ್ ರೂಪಿಸಲಾಗಿದೆ.
ತವಾದಂತೆ ತಂತ್ರ ರೂಪಿಸಿ ಕೊಲ್ಲಲು ಸಂಚು
ಾಗಿದೆ.

ಪರ್ಯಾಸವೆಂದರೆ ಇದು ಹನುಮಂತ ಕಾತ್ರಾಳನಿಗೂ
ಬಂದಿದೆ. ಇದೇ ಹಂತಕರ ಗುಂಪಿನಲ್ಲಿದ್ದವನೊಬ್ಬ
ಗಿ ಹನುಮಂತ ಕಾತ್ರಾಳನನ್ನು ಸಂಪರ್ಕಿಸಿ ಈ
ವಿವರಗಳನ್ನು ನೀಡಿದ್ದಾನೆ. ಕೂಡಲೇ ಹನುಮಂತ
ಎಸ್ಪಿ ಅಭಿಷೇಕ್ ಗೋಯಲ್‌ರನ್ನು ಕಂಡು ತನ್ನನ್ನು
ಸಂಚು ನಡೆದಿದೆ. ತನಿಖೆ ನಡೆಸಿ ರಕ್ಷಣೆಕೊಡಿ
ಹೇಳಿದ್ದಾನೆ.


ತ್ತ ಹಂತಕರು 2.5 ಲಕ್ಷಕ್ಕೆ ಒಂದು ಟ್ರಕ್
ಕೊಂಡಿದ್ದಾರೆ. 2 ಲಕ್ಷ ಅಡ್ವಾನ್ಸ್ ಕೂಡ ಕೊಟ್ಟಿದ್ದಾರೆ. ಹಂತಕರು ಲಾರಿ ಸಮೇತ ಹನುಮಂತ ಕಾತ್ರಾಳನಿಗಾಗಿ ಕಾದಿದ್ದಾರೆ. ಆ ಸಮಯ ಬಂದೇ ಬಿಟ್ಟಿತ್ತು, ಹನುಮಂತ ಕಾತ್ರಾಳ ತನ್ನ ಹೆಂಡತಿಗೆ ನೀಡಲಾಗಿದ್ದ ಜಿಲ್ಲಾ ಪಂಚಾಯತಿಯ ಕಾರಿನಲ್ಲಿ ಸಾಗುತ್ತಿದ್ದ. ಜಮಖಂಡಿಯಿಂದ ಬಿಂಕದಹಳ್ಳಕ್ಕೆ ಸಾಗುತ್ತಿರುವಾಗ ಈ ಹಂತಕರ ಲಾರಿ ಎದುರಾಗಿದೆ. ರಾಕ್ಷಸ ವೇಗದಲ್ಲಿದ್ದ ಆ ಲಾರಿ ಇನ್ನೇನು ಹನುಮಂತನಿದ್ದ ಕಾರಿಗೆ ಗುದ್ದೇಬಿಟ್ಟಿತು ಎನ್ನುವಷ್ಟರಲ್ಲಿ ಅಪಾಯಗ್ರಹಿಸಿ, ಹನುಮಂತನ ಕಾರು ಪಕ್ಕಕ್ಕೆ ಸರಿದಿದೆ. ಅದೃಷ್ಟ ಹನುಮಂತನ ಪಾಲಿಗೆ ಇತ್ತು, ಆತ ಬಚಾವಾಗಿ ಬಿಟ್ಟ. ಅಲ್ಲಿಂದ ನೇರವಾಗಿ ಎಸ್ಪಿ ಗೋಯಲ್‌ರ ಬಳಿ ಬಂದು ದೂರು ನೀಡಿದ್ದಾನೆ.

ಕಾರ್ ಡ್ರೈವರ್ ಕಲ್ಲಪ್ಪನ ಹೇಳಿಕೆ ಪಡೆಯಲಾಗಿದೆ. ಸಿಪಿಐ ಶ್ಯಾಮರಾಜ್ ಸಜ್ಜನ ನೇತೃತ್ವದಲ್ಲಿ ತಂಡ ರಚಿಸಲಾಗಿದೆ. ಕೂಡಲೇ ರವಿ ಭಜಂತ್ರಿ ಮತ್ತು ವಿಠ್ಠಲ ಕೂಳಿರನ್ನು ಬಂಧಿಸಲಾಗಿದೆ. ಮಲ್ಲನಗೌಡ ಪಾಟೀಲ ಮತ್ತು ರಾಜು ತಲೆ ತಪ್ಪಿಸಿಕೊಂಡಿದ್ದಾರೆ. ಅಸಲಿ ಸೂತ್ರಧಾರಿ ಯೇಗಪ್ಪ ಮರೆಯಲ್ಲೇ ನಗುತ್ತಿದ್ದಾನೆ. ಅವನ ಬೆಂಬಲಕ್ಕೆ ಒಂದೆಡೆ ಶಾಸಕ ಸಿದ್ದು ಸವದಿ, ಇನ್ನೊಂದೆಡೆ ಮಂತ್ರಿ ಮುರುಗೇಶ್ ನಿರಾಣಿ ನಿಂತಿದ್ದಾರೆ. ಬಾಗಲಕೋಟೆ ಬಿಜೆಪಿಗಳು ಇನ್ನೊಮ್ಮೆ ನೆತ್ತರ ರಾಡಿ ನೋಡಲು ತಹತಹಿಸುತ್ತಿದ್ದಾರೆ. ಜನ ಇವರಿಗೆ ಪಾಠ ಕಲಿಸಲು ಕಾಯುತ್ತಿದ್ದಾರೆ. ●

ವನು ಮಂತ್ರಿಗೆ ಅಳಿಯ ಶಾಸಕನಿಗೆ ತಮ್ಮ

ಯೇಗಪ್ಪ-ಬಾಗಲಕೋಟೆಯ ನಟೋರಿಯಸ್ ಹೆಸರು. ರಕ್ತದಾಹಿ ಬಡ್ಡಿ ವ್ಯಾಪಾರಿ, ಶುದ್ಧ ನರರಾಕ್ಷಸ
ತರ ಪಾಲಿಗೆ ಜೀವಕಂಟಕ. ಪಂಪ್‌ಸೆಟ್ ವ್ಯಾಪಾರದ ಹೆಸರಿನಲ್ಲಿ ಈತ ಮಾಡುತ್ತಿರುವುದು ಹಗಲುದರೋಡೆ.
ಕೋಟಗಟ್ಟಲೇ ಬೆಲೆ ಬಾಳುವ ಯೇಗಪ್ಪನನ್ನು ಸಾಕಿ ಸಲುಹಿ ಬೆಳೆಸಿದ್ದು ನಿರಾಣಿ ಮತ್ತು ಸವದಿ ಕುಟುಂಬ.
ಕಡೆ ಮಂತ್ರಿ ಮುರುಗೇಶ ನಿರಾಣಿಯ ಆಶೀರ್ವಾದ ಇದೇ ಎಂದು ಹೇಳಿಕೊಳ್ಳುವ ಯೇಗಪ್ಪ ಇನ್ನೊಂದು
ತಾನು ತೇರದಾಳದ ಶಾಸಕ ಸಿದ್ದು ಸವದಿಗೂ ಸಹೋದರ ಸಂಬಂಧಿ ಎಂದು ಚಾಲ್ತಿಗೆ ಬರುತ್ತಾನೆ. ಒಟ್ಟಿನಲ್ಲಿ
ಬ್ಬರ ನೆರಳಿನಲ್ಲಿಯೇ ಬೆಳೆದಿರುವ ಈ ರಾಕ್ಷಸ ಯೇಗಪ್ಪ ನಡೆಸಿರುವ ಹಲ್ಲೆ, ಹತ್ಯೆ ದರೋಡೆ, ಸುಲಿಗೆ
ದಲ್ಲಿ ಪ್ರತಿ ಬಾರಿಯೂ ಈ ನಿರಾಣಿ ಸವದಿಗಳು ಇವನನ್ನು ರಕ್ಷಿಸಿದ್ದಾರೆ. ಈ ಬಾರಿ ಹಾಗೆ ಆಗಬಾರದು.
ಯೇಗಪ್ಪ ಜೈಲು ಕಾಣಬೇಕು. ಆ ಗುರುತರ ಜವಾಬ್ದಾರಿ ದಕ್ಷ ಎಸ್ಪಿ ಅಭಿಷೇಕ್ ಗೋಯಲ್‌ರವರ ಮೇಲೆ

ಮಂಗಳೂರತ್ತ ಭಟ್ಟ ಪೇಪರ್ ದೋಸೆ ಮಾರಿದನಂತಲ್ಲಾ!



ಕರ್ನಾಟಕದ ಕಡಲ ತೀರದಲ್ಲಿ ಈವರೆಗೆ ಕಂಡರಿಯದ ವಿಮಾನ ದುರಂತವೊಂದು ಸಂಭವಿಸಿ, ಕರ್ನಾಟಕದ ಜನತೆ ಬೆಂಕಿ ರಾವು ತಗುಲಿದಂತೆ ಬೆಚ್ಚಿ ಕುಳಿತಿರುವಾಗ, ಭಟ್ಟನ ಪತ್ರಿಕೆ ಬಿಸಿ ದೋಸೆಯಂತೆ ಖರ್ಚಾಯಿತೆಂದು ಕುಣಿದಾಡಿದ್ದಾನಂತಲ್ಲ, ಅಮಾಯಕ ಜನ ಬೆಂಕಿಯಲ್ಲಿ ಬೆಂದುಹೋದ ಸುದ್ದಿಯನ್ನು ಓದಲೆಂದು ಬಿಸಿಬಿಸಿ ದೋಸೆಯಂತೆ ಪತ್ರಿಕೆ ಖರೀದಿಯಾಯ್ತು ಎಂದು ಕುಣಿದಾಡುವ ಸದರಿ ಭಟ್ಟನ ಪೂರ್ವೇತಿಹಾಸ ಕೆದಕಿದರೆ, ಒಳ್ಳೆಯ ದೋಸೆ ವ್ಯಾಪಾರಿಯಾಗಿದ್ದನೆಂದೂ ಅಥವಾ ದೋಸೆ ಪ್ರಿಯನೆಂದೂ, ಅದರಲ್ಲೂ ಮಸಾಲೆ ದೋಸೆಯೆಂದರೆ ಅದರ ರುಚಿಗೆ ಏನಾದರೂ ಮಾಡಲು ಹೇಸದವನಾಗಿದ್ದನೆಂದೂ ದುರಂತ ನೋಡಿ ಬೆಚ್ಚಿದವರ ವ್ಯಾಖ್ಯಾನವಾಗಿದೆಯಲ್ಲಾ, ನಮ್ಮ ಶಿವಸುಂದರ್ ಹೇಳುವಂತೆ, ನರಹತ್ಯೆ ಗುಂಪಿನ ಪುರೋಹಿತನಾದ ಈ ಭಟ್ಟ, 158 ಜನ ದಾರುಣವಾಗಿ ಸತ್ತ ಕೂಡಲೆ ಸಂಭ್ರಮಪಡುತ್ತ, ಪತ್ರಿಕೆ ಪ್ರಿಂಟಿಸಿ ಮಾರಿ 'ವಾಟ್ ಎ ಹಿಸ್ಟರಿ' ಎಂದು ಕೂಗಿಕೊಂಡಿದ್ದನ್ನು ನೋಡಿದ ಕನ್ನಡದ ಮಾನವಂತ ಪತ್ರಿಕಾಕರ್ತರು ಬೆಚ್ಚಿ ಬಿದ್ದಿದ್ದಾರಂತಲ್ಲಾ, ಥೂತ್ತೇರಿ!

* * * * * *

ಭಟ್ಟ ಕೊಚ್ಚಿಕೊಂಡ ಭರಾಟೆ ನೋಡಿದರೆ, ಈತನ ಕ್ಷಿಪ್ರ ಕಾರ್ಯಾಚರಣೆಯಿಂದ ವಿಮಾನ ದುರಂತ ತಪ್ಪಿಹೋಗಿದೆ, ಬೆಂಕಿಗಾಹುತಿಯಾಗಲಿದ್ದ ಪ್ರಯಾಣಿಕರು ಕೂದಲೆಳೆಯಲ್ಲಿ ಬಚಾವಾಗಿದ್ದಾರೆ, ಈತನ ಸಿಬ್ಬಂದಿ ಸ್ಥಳದಲ್ಲಿ ಇಲ್ಲದೇಯಿದ್ದರೆ ಇನ್ನೂ ಘೋರ ದುರಂತಗಳು ಸಂಭವಿಸುತ್ತಿದ್ದವು, ಕರ್ನಾಟಕದ ಕಡಲ ತೀರವೇ ಹಾಳಾಗಿ ಹೋಗುತ್ತಿತ್ತು ಎನ್ನುವಂತಿದೆಯಲ್ಲಾ, ನಿಜಕ್ಕೂ ಹೊಟ್ಟೇಪಾಡಿನ ಪತ್ರಕರ್ತರು ಸತ್ತವರ ಸುದ್ದಿಗಾಗಿ ಪರದಾಡುತ್ತ, ಭಟ್ಟನ ವಿಕೃತ ತೆವಲನ್ನು ತಣಿಸಿ ದಣಿದದ್ದು ಮಾತ್ರ ಮನಕರಗುವಂತಿದೆ. ಆದರೆ ದುರಂತವನ್ನೇ ಕಾಯುವ, ದುರಂತವನ್ನೇ ನೋಡುವ, ದುರಂತದ ಸುದ್ದಿ ಮಾರಿ 'ವಾಟ್ ಎ ಹಿಸ್ಟರಿ' ಎನ್ನುವ ಭಟ್ಟ ಕನ್ನಡ ಪತ್ರಿಕಾ ರಂಗದ ಹಿಸ್ಟರಿ ಕಾಣದಂತಹ ವಿಕೃತನೆಂದು ಕನ್ನಡದ ನಿರ್ಲಿಪ್ತ ಓದುಗರ ವ್ಯಾಖ್ಯಾನವಾಗಿದೆಯಲ್ಲಾ, ಥೂತ್ತೇರಿ!

* * * * * *

ನೂರ ಐವತ್ತೆಂಟು ಜನರನ್ನು ಸಜೀವವಾಗಿ ದಹಿಸಿದ ದೇವರು, ಉಳಿದು ಬದುಕಿದವರ ಭಾಗಕ್ಕೆ ದೊಡ್ಡವನಾಗಿದ್ದಾನಂತಲ್ಲಾ, ಅಪಘಾತದಿಂದ ಬಚಾವಾದವರನ್ನು ಆಡಿಕೊಳ್ಳಬಾರದು, ಆದರೂ 19 ಮಕ್ಕಳನ್ನು ದಹಿಸಿದ ದೇವರು ಅದು ಹೇಗೆ ದೊಡ್ಡವನಾದಾನು. ಸದರೀ ಘಟನೆಗೂ ಅವನಿಗೂ ಏನಾದರೂ ಸಂಬಂಧವಿದೆಯೇ ಆತ ಇರುವುದೇ ಆಗಿದ್ದರೇ ಇಡೀ ವಿಮಾನವನ್ನು ಕಾಪಾಡಬಹುದಿತ್ತಲ್ಲವೇ? ಇಂತಹ ಯಾವ ತರ್ಕವನ್ನು ಮಾಡದೆ "ದೇವರು ದೊಡ್ಡವನು. ಅದಕ್ಕಾಗಿಯೇ ನನ್ನನ್ನು ಬದುಕಿಸಿದ. ಇನ್ನುಳಿದ ಆಯುಸ್ಸನ್ನು ಅವನ ಪೂಜೆ ಅಥವಾ ನಮಾಜಿನಲ್ಲೇ ಕಳೆಯುತ್ತೇವೆ" ಎನ್ನುವವರ ಅತಾರ್ಕಿಕ ಅಭಿಪ್ರಾಯವನ್ನು ಮರಳು ಎನ್ನುವುದೊ ಅಥವಾ ಭಟ್ಟನ ವ್ಯಾಖ್ಯಾನದಂತೆ ದುರ್ವಿಧಿ ಎನ್ನವುದೊ ತಿಳಿಯುತ್ತಿಲ್ಲವಲ್ಲಾ, ಥೂತ್ತೇರಿ!

* * * * * *

ಥೂತ್ತೇರಿ
• ಯಾಹೂ

ಅತ್ತ ಆಕಾಶದಿಂದ ಇಳಿಯುವಾಗ ವಿಮಾನ ಪತನಗೊಂಡ ಅನಾಹುತ ಕನ್ನಡಿಗರ ಮನಸ್ಸಿನಲ್ಲಿ ಆರದ ಗಾಯ ಮಾಡಿರುವಾಗಲೇ, ಇತ್ತ ಬೆಂಗಳೂರು ಬಳ್ಳಾರಿ ನಡುವೆ ಸದಾ ಆಕಾಶದಲ್ಲೇ ಹಾರುವ ಗಾಲಿ ರೆಡ್ಡಿಗಳ ಗಾಂಚಾಲಿ ಅತಿಯಾಗಿ, ಮುಖ್ಯಮಂತ್ರಿ ಪಟ್ಟದ ಕನಸಿನವರೆಗೂ ಹೋಗಿದೆಯಂತಲ್ಲಾ, ಈ ರೆಡ್ಡಿಗಳ ಕನಸಿಗೆ ಸ್ಫೂರ್ತಿಯೆಂದರೆ ಕುಮಾರಸ್ವಾಮಿ!! ಹಿಂದೆ ರೆಡ್ಡಿಗಳಿಂದ ಹಣ ಪಡೆದು ಶಾಸಕರನ್ನು ಟಗರಿನಂತೆ ಖರೀದಿ ಮಾಡಿ, ಅವರನ್ನೆಲ್ಲಾ ತೆಗೆದುಕೊಂಡು ಹೋಗಿ ರೆಸಾರ್ಟಿನಲ್ಲಿ ತುಂಬಿ, ಹೊಟ್ಟೆತುಂಬಾ ತಿನ್ನಿಸಿ, ಕುಡಿಸಿ ಕರೆತಂದು ಮುಖ್ಯಮಂತ್ರಿಯಾಗಿದ್ದೇ ಕಾರಣವಾಗಿದೆಯಂತಲ್ಲಾ, ಗಾಲಿ ರೆಡ್ಡಿಗಳ ಗಾಂಚಾಲಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ಎಡೂರಪ್ಪ ದಿಕ್ಕುತೋಚದಂತಾಗಿ ಮತ್ತೆ ಮಠಮಾನ್ಯಗಳಲ್ಲಿ ಅಡಗಿ ಕುಳಿತಿರುವ ಅನಧಿಕೃತ ಶಾಸಕರ ಬೆಂಬಲ ಕೇಳುತ್ತ ಮತ್ತೊಮ್ಮೆ ಹಾಸ್ಯಾಸ್ಪದ ರಾಜಕಾರಣ ಶುರು ಮಾಡಲಿದ್ದಾರಂತಲ್ಲಾ, ಥೂತ್ತೇರಿ!!

* * * * * *

ಇದ್ದಕ್ಕಿದ್ದಂತೆ ಮಂತ್ರಿ, ಮುಖ್ಯಮಂತ್ರಿ ಎನ್ನುವವರ ಮುಖ ಮೂತಿ ನೋಡದೆ ಒದೆಯಿರಿ ಎಂದಿರುವ ಕುಮಾರಣ್ಣನನ್ನು ಮಾತನಾಡಿಸಬೇಕು ಅನ್ನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: "ನೂರು ಜನ್ಮಕು ನೂರಾರು ಜನ್ಮಕು...."

"ಹಲೋ."

"ಹಲೋ, ನಮಸ್ಕಾರ ಸಾರ್ ನಾನು ಯಾಹೂ."

"ಏನೇಳಿ ಯಾಹೂ ಅವ್ರೆ. ಭಾಳ ದಿನಾಯ್ತು ಫೋನ್ ಮಾಡಿ."

"ಹೌದು ಸಾರ್. ಬಿಬಿಎಂಪಿ ಚುನಾವಣೆ ಫಲಿತಾಂಶದ ನಂತರ ಫೋನ್ ಮಾಡಕ್ಕೆ ಬೇಜಾರಾಯ್ತು ಸಾರ್."

"ನಮಿಗೇ ಬೇಜಾರಾಗಲಿಲ್ಲ, ನೀವ್ಯಾಕೆ ಬೇಜಾರು ಮಾಡಿಕತ್ತಿರಿ."

"ಅಂತೂ ಒಳ್ಳೆ ಮಾತೇಳಿದ್ದಿರಿ ಸಾರ್. ನಿಜಕ್ಕೂ ಆವರು ಪದಿಸಿಗಳಿಕ್ಕೇ ಯೋಗ್ಯವಾದ ಜನ."


"ಇನ್ನೇನ್ರಿ ಮತ್ತೆ, ಹೊಟ್ಟೆಗೆ ಅನ್ನ ತಿಂತರೊ ಇಲ್ಲವೊ ಅನ್ನೊ ಅನುಮಾನ ನನಿಗೆ. ಪಾಪ ಸಂತ್ರಸ್ತರು ಇನ್ನು ಬಿಸಿಲಲ್ಲೇ ಅವ್ರೆ ಕಂಡ್ರಿ. ಅವ್ರಿಗೆ ಏನು ಒಂದು ವ್ಯವಸ್ಥೆ ಮಾಡಕೊಡಬೇಕು ಅನ್ನೊ ಒಂದು ತೀರ್ಮಾನ ತಗೊಂಡು, ಅದರಂತೆ ಕಾರ್ಯಕ್ರಮವನ್ನು ರೂಪಿಸತಕ್ಕಂತ ಆಲೋಚನೆ, ಒಂದು ಕಾರ್ಯ ಅಥವಾ ಒಂದು ತಿಳಿವಳಿಕೆ ಈ ಸರ್ಕಾರದಲ್ಲಿ ಇರತಕ್ಕಂತ ಜವಾಬ್ದಾರಿ ಸ್ಥಾನದಲ್ಲಿ ಇರೋ ಅಂತ ಏನು ಮಂತ್ರಿಗಳಿರಬವುದು, ಅಥವ ಶಾಸಕರು ಇರಬವುದು, ಅಥವ ಇನ್ನಾರೇ ವ್ಯಕ್ತಿಗಳಿರಬವುದು, ಸಂಬಂಧಪಟ್ಟ ಎಲ್ಲರೂ ಒಂದು ತೀರ್ಮಾನ ತಗಳತಕ್ಕಂತ ಕಾಳಜಿ ಇವ್ರಿಗೆ ಯಾಕೆ ಬರಲಿಲ್ಲ ಅನ್ನೊ ಒಂದು ಆಲೋಚನೆ ನಮ್ಮಲ್ಲಿ ಬಂದಿದ್ರಿಂದ ಹಾಗೇ ಹೇಳಬೇಕಾದ ಒಂದು ಪರಿಸ್ಥಿತಿ ನಿರ್ಮಾಣ ಆಯ್ತು."

"ನಿಮ್ಮ ಮಾತನ ಕೇಳಿ ಮತದಾರ ಅಂಗೆ ಮಾಡಿದ್ರೆ, ಪೊಲೀಸ್‌ನೋರು ತಗಂಬೋಗಿ ಚನ್ನಾಗಿ ಬಡ್ಡಿ ಹಾಕಬಾರದ ಸೆಕ್ಷನ್‌ಗಳನ್ನೆಲ್ಲ ಹಾಕಿ, ಜೀವಮಾನ ಪೂರ್ತಿ ಕೋರ್ಟಿಗೆ ಅಲಿಯಂಗೆ ಕೇಸಾಕ್ತರಲ್ಲ ಸಾರ್?"


"ನಾವು ಬಂದಾಗ ಆ ಕೇಸುಗಳನ್ನು ವಾಪಸ್ ತಗೋಳ್ತಿನಿ."

"ಥೂತ್ತೇರಿ!!!" ●

ಮೇಯರ್ ಸುತ್ತ ಮನೆಹಾಳರು


ಎಸ್.ಕೆ. ನಟರಾಜ್

ಹಿಂದಿದ್ದ ಮೇಯರ್‌ಗಳನ್ನು ಬುಟ್ಟಿಗೆ ಹಾಕಿಕೊಂಡು ಅಧಿಕಾರಿಗಳನ್ನು ಸುಲಿದವರು, ಲೋಕಾಯುಕ್ತಕ್ಕೆ ರೆಡ್‌ಹ್ಯಾಂಡ್ ಸಿಕ್ಕಿಬಿದ್ದು ಲಾಕಪ್ಪು ಕಂಡವರು, ರೋಲ್‌ಕಾಲ್ ನಿಪುಣರು, ವಂಚಕರು, ಬೋಗಸ್ ಬಿಲ್ ಖದೀಮರು; ಇತ್ಯಾದಿಗಳನ್ನೆಲ್ಲ ಹುಡುಹುಡುಕಿ ತಂದು ತಮ್ಮ ಆಪ್ತ ಸಹಾಯಕರನ್ನಾಗಿ ನೇಮಿಸಿಕೊಂಡ ಎಸ್.ಕೆ. ನಟರಾಜ್ ಉದ್ದೇಶ ಬೆಂಗಳೂರಿನ ಅಭಿವೃದ್ಧಿಯಾ ಅಥವಾ ಮುಂಡಾಮೋಚುವುದಾ ಎಂಬುದೇ ಗೊತ್ತಾಗುತ್ತಿಲ್ಲ. ಮೇಯರ್ ನಟರಾಜ್‌ಗೇನೋ ವೀಕ್‌ನೆಸ್ಸು ನಿಜ; ಅವರ ಗಾಡ್‌ಫಾದರ್ ಅಶೋಕ್‌ಗಾದರೂ ಬುದ್ಧಿ ಬೇಡವೆ? ಮೇಯರ್ ಸುತ್ತ ಇಂಥ ಪಾಖಂಡಿಗಳೇ ಠಳಾಯಿಸುತ್ತಿದ್ದರೆ ಬೆಂಗಳೂರು ಉದ್ಧಾರವಾಗಬೇಕೆಂದರೆ ಎಲ್ಲಿಂದ?


ಅಶೋಕ್


ಹೊಸ ಮೇಯರ್ ಎಸ್.ಕೆ. ನಟರಾಜ್ ಬೆಂಗಳೂರಿನ ಕೊಳೆ ತೊಳೆಯುವ ಮಾತು ಹಾಳಾಗಲಿ, ಕನಿಷ್ಠ ತಮ್ಮ ಕಾಲಬುಡದಲ್ಲಾದರೂ ಗಬ್ಬುನಾತ ಬರದ ಹಾಗೆ ಶುಚಿಯಾಗಿಟ್ಟುಕೊಳ್ಳಬೇಕಲ್ಲವೆ?

ಮೇಯರ್ ಗದ್ದುಗೆಯೇರಿ ತಿಂಗಳು ತುಂಬುವ ಮೊದಲೇ ಪಾಲಿಕೆ ಕಾಂಪೌಂಡಿನ ಕಸದರಾಶಿಯಿಂದಲೇ ಹೀನಾತಿಹೀನ ಬ್ಯಾಕ್ಟೀರಿಯಾಗಳನ್ನೆಲ್ಲ ಆಯ್ದು ತಂದು ತಮ್ಮ ಛೇಂಬರಿನಲ್ಲಿಟ್ಟು ಪೋಷಿಸಲಾಂಭಿಸಿದ್ದಾರೆ ಮೇಯರ್ ನಟರಾಜ್!

ಹಿಂದಿದ್ದ ಮೇಯರ್‌ಗಳನ್ನು ಬುಟ್ಟಿಗೆ ಹಾಕಿಕೊಂಡು ಅಧಿಕಾರಿಗಳನ್ನು ಸುಲಿದವರು, ಲೋಕಾಯುಕ್ತಕ್ಕೆ ರೆಡ್‌ಹ್ಯಾಂಡ್ ಸಿಕ್ಕಿಬಿದ್ದು ಲಾಕಪ್ಪು ಕಂಡವರು, ರೋಲ್‌ಕಾಲ್ ನಿಪುಣರು, ವಂಚಕರು, ಬೋಗಸ್ ಬಿಲ್ ಖದೀಮರು; ಇತ್ಯಾದಿಗಳನ್ನೆಲ್ಲ ಹುಡುಹುಡುಕಿ ತಂದು ತಮ್ಮ ಆಪ್ತ ಸಹಾಯಕರನ್ನಾಗಿ ನೇಮಿಸಿಕೊಂಡ ಎಸ್.ಕೆ. ನಟರಾಜ್ ಉದ್ದೇಶ ಬೆಂಗಳೂರಿನ ಅಭಿವೃದ್ಧಿಯಾ ಅಥವಾ ಮುಂಡಾಮೋಚುವುದಾ ಎಂಬುದೇ ಗೊತ್ತಾಗುತ್ತಿಲ್ಲ.

ಸಕಲಕಲಾ ಪ್ರವೀಣ ರಾಜಣ್ಣ


ಹುಟ್ಟಾ ಫೋರ್ಜರಿ ಪ್ರವೀಣ ಶಣ್ಮುಗಮ್ ಎಂಬಾತನನ್ನು ಕರೆತಂದು ತಮ್ಮ ಪಿಎ ಮಾಡಿಕೊಂಡಿದ್ದು, ಗುಂಡಪ್ಪ ಎಂಬ ನಿವೃತ್ತ ಎತ್ತುವಳಿ ತಜ್ಞನನ್ನು ಕಾನೂನುಬಾಹಿರವಾಗಿ ತಮ್ಮ ಮೇಯರ್ ಛೇಂಬರಿನಲ್ಲಿ ಪ್ರತಿಷ್ಠಾಪಿಸಿಕೊಂಡದ್ದು, ಲಿಂಗಣ್ಣನೆಂಬ ವಸೂಲಿವೀರನನ್ನು ಮತ್ತೊಬ್ಬ ಆಪ್ತ ಸಹಾಯಕನನ್ನಾಗಿ ನೇಮಿಸಿಕೊಂಡಿದ್ದು, ಸಕಲವಲ್ಲಭ ರಾಜಣ್ಣನನ್ನು ಪಿಎಸ್ ಗಾದಿಗೆ ತಂದು ಕೂರಿಸಿದ್ದು ಮತ್ತು ಜೀವನಪರ್ಯಂತ ಬ್ಲ್ಯಾಕ್‌ಮೇಲ್ ವಸೂಲಿಯನ್ನೇ ಕಾಯಕ ಮಾಡಿಕೊಂಡ ಲಿಂಗಾರಾಜು ಎಂಬ ಪಾಖಂಡಿಯನ್ನು ತಮ್ಮ ಮಾಧ್ಯಮ ಸಲಹೆಗಾರನನ್ನಾಗಿ ಮಾಡಿ ನಗೆಪಾಟಲಿಗೀಡಾದದ್ದು ಮೇಯರ್ ನಟರಾಜ್ ಸಾಹೇಬರ ಉದ್ದೇಶ ಮತ್ತು ಸ್ಪಷ್ಟ ನಿದರ್ಶನಗಳಷ್ಟೆ.


ಕೇಡಿ ಲಿಂಗಪ್ಪ

ಇವರ್‍ಯಾರಿಗೂ ಪಾಲಿಕೆ ವಲಯದಲ್ಲಿ ಒಳ್ಳೆ ಇತಿಹಾಸವಾಗಲಿ, ಹಿನ್ನೆಲೆಯಾಗಲಿ ಇಲ್ಲ. ಪಿ.ಎ. ರಾಜಣ್ಣ ಈ ಹಿಂದೆ ಮೇಯರಾಗಿದ್ದ ಪಿ.ಎಂ. ನಾಗರಾಜ್ ಪರಮಾಪ್ತನಾಗಿದ್ದು ಶಿಕ್ಷಾಪಟ್ಟೆ ಎತ್ತುವಳಿಗೆ ಕೈ-ಬಾಯಿ ಕೆಡಿಸಿಕೊಂಡಿದ್ದ. ಚಂದ್ರಶೇಖರ್ ಮತ್ತು ನಾರಾಯಣಸ್ವಾಮಿ ಮೇಯರ್ ಆಗಿದ್ದಾಗಲೂ ರಾಜಣ್ಣನೇ ಪಾರುಪತ್ತೆ ಮಾಡುತ್ತಿದ್ದ. ಯಾವ ಇಲಾಖೆಯ ಯಾವ ಅಧಿಕಾರಿಯನ್ನು ಚಿವುಟಿದರೆ ದುಡ್ಡು ಎಲ್ಲಿಂದ ಉದುರುತ್ತದೆಂಬುದರಲ್ಲಿ ರಾಜಣ್ಣ ಪಳಗಿದ ವ್ಯಕ್ತಿ. ಮೇಲುನೋಟಕ್ಕೆ ಮಹಾನ್ ಗಂಭೀರ ಆಸಾಮಿಯಂತೆ ಪೋಜು ಕೊಡುತ್ತಾನೆ, ತತ್ವಜ್ಞಾನಿಯಂತೆ ಉಪದೇಶ ಹೇಳುತ್ತಾನೆ. ಹೀಗೆ ಸತ್ಯಹರಿಶ್ಚಂದ್ರನಂತೆ ಪೋಜು ಕೊಟ್ಟರಷ್ಟೇ ದೊಡ್ಡ ದೊಡ್ಡ ಡೀಲು ಮಾಡಲು ಸಾಧ್ಯ ಎಂಬುದು ರಾಜಣ್ಣನ ತಲೆಗಾರಿಕೆ.

ಗಂಡಾಂತರದ ಗುಂಡಪ್ಪ

ಆದರೆ ರಾಜಣ್ಣ ಅಪಾಯಕಾರಿಯಲ್ಲ, ಗುಂಡಪ್ಪನಂತೆ ಕ್ರೂರಿಯಲ್ಲ. ಹಿಂದೆ ಲಕ್ಕಣ್ಣ, ಹುಚ್ಚಪ್ಪ, ಪ್ರೇಮಾಕಾರಿಯಪ್ಪ ಮೇಯರ್ ಆಗಿದ್ದಾಗ ಅವರ 'ಅಜ್ಞಾನ'ದ ಲಾಭ ಪಡೆದೇ ಪಾಲಿಕೆಗೆ ಕನ್ನವಿಟ್ಟವನು ಗುಂಡಪ್ಪ. ಗುಂಡಪ್ಪ ಎಂದರೆ 'ಗುಡಿಸಿ ಗುಂಡಾಂತರಪ್ಪ' ಎಂಬ ಗೇಲಿ ಮಾತು ಇಡೀ ಪಾಲಿಕೆ ಕಾಂಪೌಂಡಿನಲ್ಲಿ ದಿನಕ್ಕೊಮ್ಮೆ ಕೇಳಿ ಬರುತ್ತದೆ. ವರ್ಗಾವರ್ಗಿ ದಂಧೆಯಲ್ಲಿ ಈತ ಎಕ್ಸ್‌ಪರ್ಟ್. ಯಾವ ಎ.ಇ.ಯನ್ನು ಯಾವ ಜಾಗಕ್ಕೆ ತಂದರೆ ಎಷ್ಟು ಮೊತ್ತದ ಮಂತ್ಲಿ ಗಿಟ್ಟುತ್ತದೆ? ಯಾವ ಜೆ.ಇ.ಗೆ ಏನು ಫಿಟ್ಟಿಂಗ್ ಇಟ್ಟರೆ ಎಲ್ಲಿ ರೊಕ್ಕ ಹುಟ್ಟುತ್ತದೆ? ಆಯಾ ವರ್ಕ್ ಇನ್ಸ್‌ಪೆಕ್ಟರ್, ಬಿಲ್ ಕಲೆಕ್ಟರ್, ಹೆಲ್ತ್ ಇನ್ಸ್‌ಪೆಕ್ಟರ್‌ಗಳಿಂದ ಹೇಗೆ ಮಂತ್ಲಿ ಸುಲಿಯಬೇಕು? ಇತ್ಯಾದಿ ವಸೂಲಿ ವಿಷಯಗಳಲ್ಲಿ ಪಿಎಚ್‌ಡಿ ಮಾಡುವಷ್ಟು ಪ್ರಾವಿಣ್ಯ ಈತನಿಗಿದೆ. ಒಬ್ಬ ಪಾಲಿಕೆ ಕಮಿಷನರ್‌ಗೆ ಏನೆಲ್ಲಾ ಅಧಿಕಾರವಿದೆಯೋ ಅದೆಲ್ಲವನ್ನೂ ಮೇಯರ್ ಛೇಂಬರಿನಲ್ಲಿ ಕೂತೇ ಓವರ್‌ಟೇಕ್ ಮಾಡಬಲ್ಲ ಖತರ್‌ನಾಕ್ ಗುಂಡಪ್ಪ ಸದ್ಯ ಪಾಲಿಕೆ ನೌಕರನಲ್ಲ. ಆತ ನಿವೃತನಾಗಿ ವರ್ಷಗಳೇ ಕಳೆದಿವೆ.


ಗುಡಿಸಿ ಗುಂಡಪ್ಪ

ಈತನಿಗಿಂತಲೂ ಸಭ್ಯರು ದಕ್ಷರು ಪಾಲಿಕೆಯಲ್ಲಿದ್ದರೂ ರಿಟೈರಾಗಿ ಮಠ ಸೇರಿಕೊಂಡಿದ್ದ ಗುಂಡಪ್ಪನನ್ನು ಮತ್ತೆ ಕರೆತಂದು ವಿಶೇಷವಾದ ಛೇಂಬರ್ ಕೊಟ್ಟು ಕೂರಿಸುವಂಥ ದಾರಿದ್ರ್ಯವಾದರೂ ಏನಿತ್ತು? ವಸೂಲಿ, ಎತ್ತುವಳಿಯ ಈತನ ಪ್ರಖಾಂಡ ಪಾಂಡಿತ್ಯವನ್ನು ಬಿಟ್ಟರೆ ಮೇಯರ್‌ಗಾಗಲಿ ಪಾಲಿಕೆ ಗಾಗಲಿ ಇನ್ನೇನಾದರೂ ಪ್ರಯೋಜನವುಂಟೆ?

ಈ ಗುಂಡಪ್ಪ ಮತ್ತು ರಾಜಣ್ಣರನ್ನು ಒಂದು ತಕ್ಕಡಿಯಲ್ಲಿಟ್ಟರೆ ಅವರ ಸಮಕ್ಕೆ ತೂಗುವವನು ಪಿಎ ಶಣ್ಮುಗಮ್!

ಕಪಟ ಮಾಂತ್ರಿಕ ಷಣ್ಮುಗಂ!

ಎಲ್ಲೆಲ್ಲಿ ಪಾಲಿಕೆ ಆಸ್ತಿಯಿದೆ, ಅದಕ್ಕೆ ಹೇಗೆ ನಕಲಿ ದಾಖಲು ಸೃಷ್ಟಿಸಬೇಕು, ಹೇಗೆಲ್ಲಾ ನುಂಗಿ ನೀರು ಕುಡಿಯಬೇಕೆಂಬುದು ಶಣ್ಮುಗಂಗೆ ಕರತಲಾಮಲಕ. ಮಮ್ತಾಜ್ ಬೇಗಮ್ ಬೆಂಗಳೂರಿಗೆ ಮೇಯರ್ ಆಗಿದ್ದಾಗ ಆಕೆಗೆ ಪಿಎಸ್ ಆಗಿದ್ದು ಹಫ್ತಾ ವಸೂಲಿ ಮಾಡಿಕೊಡುತ್ತಿದ್ದ. ಪಾರ್ಕ್‌ಗೆಂದು ಮೀಸಲಿಟ್ಟಿದ್ದ ಹನುಮಂತನಗರದ ಪಾಲಿಕೆ ಜಮೀನಿಗೆ ವಕ್ಕರಿಸಿ ಅಲ್ಲಿ ಗಣೇಶನ ಪ್ರತಿಮೆ ಉದ್ಭವವಾಯಿತೆಂದು ಕತೆ ಕಟ್ಟಿ ರಾತ್ರೋರಾತ್ರಿ ದೇವಸ್ಥಾನ ಎಬ್ಬಿಸಿಬಿಟ್ಟ. ಇವತ್ತು ಅದೇ ದೇವಸ್ಥಾನಕ್ಕೆ ಈತ ಪೂಜಾರಿ!

ದಿನವಿಡೀ ಮೇಯರ್ ಛೇಂಬರಿನಲ್ಲಿ ಹಾವಳಿಯೆಬ್ಬಿಸಿ ಸಂಜೆಯಾಗುತ್ತಿದ್ದಂತೆ ಪೂಜಾರಿಯ ಗೆಟಪ್ಪಿನಲ್ಲಿ ಆರತಿ ತಟ್ಟೆ ಹಿಡಿಯುತ್ತಾನೆ. ತಟ್ಟೆಕಾಸು, ಕಾಣಿಕೆ ಹುಂಡಿಯನ್ನೂ ಬಿಡದೇ ದೋಚುವುದಕ್ಕೆಂದೇ ತನ್ನದೇ ಹೆಂಡತಿ, ಮಕ್ಕಳನ್ನು ಹಾಕಿಕೊಂಡು ಗಣಪತಿ ದೇವಸ್ಥಾನಕ್ಕೊಂದು ಟ್ರಸ್ಟ್ ಮಾಡಿಕೊಂಡಿದ್ದಾನೆ. ಯಾರೇ ಅಧಿಕಾರಿಗಳು, ರಾಜಕಾರಣಿಗಳು, ಸಿಕ್ಕರೂ ಹೋಮ-ಹವನ ಮಾಡ್ತೀನಿ ಎಂದು ಮುಂಡಾಯಿಸುವುದು ಈತನ ಮತ್ತೊಂದು ಹಾಬಿ. ಜೊತೆಗೆ ಪಾಳುಬಿದ್ದ ಪಾಲಿಕೆ ಆಸ್ತಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸುವುದು ಈತನ ಪಾರ್ಟ್‌ಟೈಮ್ ಕಸುಬು. ಇಂಥವನನ್ನು ಕರೆತಂದು ಮೇಯರ್ ಛೇಂಬರಿನಲ್ಲಿ ಪ್ರತಿಷ್ಠಾಪಿಸಿಕೊಂಡ ನಟರಾಜ್ ಉದ್ದೇಶವಾದರೂ ಏನಿದ್ದೀತು?

ನಾಲ್ಕನೇ ಪಿಎ ಲಿಂಗಣ್ಣ ಇವರಷ್ಟು ದೊಡ್ಡಮಟ್ಟದ ಡೀಲುಕೋರನಲ್ಲದಿರಬಹುದು. ಹಾಗಂತ ಮುಗ್ಧನಾಗಲಿ ಹುಂಬನಾಗಲಿ ಖಂಡಿತ ಅಲ್ಲ. ಈ ಹಿಂದೆ ಆರೋಗ್ಯ ಸಾಮಾಜಿಕ ನ್ಯಾಯ, ಅಪೀಲು; ಇತ್ಯಾದಿ ಸ್ಥಾಯಿ-ಸಮಿತಿಗಳಲ್ಲಿದ್ದು ಸಾಕಷ್ಟು ಗೋಲ್‌ಮಾಲ್ ಟೆಕ್ನಿಕ್ಕುಗಳನ್ನು ಕಲಿತಿದ್ದಾನೆ. ಲೋಕಾಯುಕ್ತಕ್ಕೆ ರೆಡ್ ಹ್ಯಾಂಡ್ ಸಿಕ್ಕಿಬಿದ್ದಿದ್ದ. ಇಂಥ ಪಿಎಗಳದ್ದು ಒಂಥರದ ಹಾವಳಿಯಾದರೆ ಮೀಡಿಯಾ ಸಹಾಯಕ ಲಿಂಗರಾಜನದ್ದು ಖುಲ್ಲಂ ಖುಲ್ಲಾ ರೋಲ್‌ಕಾಲ್. ಯಾವುದೋ ಕಾಲಕ್ಕೆ ವಾರ್ತಾ ಇಲಾಖೆಯಲ್ಲಿದ್ದ ದಾಸಪ್ಪ ಎಂಬಾತನ ಮಗನಾದ ಈ ಲಿಂಗರಾಜು ಸದ್ಯ 'ದೇವಾಂಗ ವಾಣಿ' ಎಂಬ ಪುಡಿ ಪತ್ರಿಕೆಯೊಂದನ್ನು ನಡೆಸುತ್ತಾನೆ. ಅದಕ್ಕೆ ಈತನೇ ಪ್ರಕಾಶಕ, ಸಂಪಾದಕ, ಮುದ್ರಕ ಮತ್ತು ಏಕಮೇವಾದ್ವಿತೀಯ ವಾಚಕ ಕೂಡ.

ರೋಲ್‌ಕಾಲ್ ಲಿಂಗರಾಜ


ಆ ಕಾಲದಿಂದಲೂ ಪಾಲಿಕೆಯ ಇಂಜಿನಿಯರ್‌ಗಳನ್ನು, ಕ್ಲರ್ಕ್‌ಗಳನ್ನು ಬ್ಲಾಕ್‌ಮೇಲ್ ಮಾಡಿಕೊಂಡೇ ಸುಲಿಗೆ ನಡೆಸುತ್ತಿದ್ದ 'ಲತ್ತೆ ಲಿಂಗರಾಜ' ಶುದ್ಧ ಆರೆಸ್ಸೆಸ್ ಚೆಡ್ಡಿ. ಪಾಲಿಕೆ ಮತ್ತು ಮೇಯರ್ ಕಾರ್ಯಕ್ರಮಗಳ ಪ್ರಚಾರಕ್ಕೆಂದೇ ಶಿವಶಂಕರಪ್ಪ ಖಂಡ್ರೆ ಎಂಬ ವಾರ್ತಾ ಇಲಾಖೆಯ ಅಧಿಕಾರಿಯಿದ್ದಾರೆ. ಅವರಿಗೆಂದೇ ವಿಶೇಷ ಆಫೀಸು, ಸಿಬ್ಬಂದಿ, ಸಂಬಳ ಎಲ್ಲವನ್ನೂ ಸರ್ಕಾರ ಒದಗಿಸಿಕೊಟ್ಟಿದೆ. ಹಾಗಿದ್ದೂ ಲಿಂಗರಾಜನಂಥ ಖದೀಮನನ್ನು ತಂದು ಮೀಡಿಯಾ ಸೆಕ್ರೆಟರಿ ಎಂಬ ಕಾನೂನುಬಾಹಿರ ಹುದ್ದೆ ಕಲ್ಪಿಸಿ ಓಡಾಟಕ್ಕೆಂದು ಪಾಲಿಕೆಯ ಕಾರು. ಅದಕ್ಕೊಬ್ಬ ಡ್ರೈವರ್ ಇತ್ಯಾದಿ ದುಂದು ವೆಚ್ಚದ ಅಗತ್ಯವಾದರೂ ಏನಿತ್ತು?

ಮೇಯರ್ ಛೇಂಬರಿಗೆ ವಕ್ಕರಿಸಿ ಇನ್ನೂ ತಿಂಗಳಾಗಿಲ್ಲ, ಆಗಲೇ ಲಿಂಗರಾಜು ಮೊದಲ ಹಂತದ ಎತ್ತುವಳಿಗೆ ಕೈಹಾಕಿದ್ದಾನೆ. ತೋಟಗಾರಿಕೆ ಇಲಾಖೆಯ ಮುಖ್ಯಸ್ಥರನ್ನು ಕಂಡು 'ನೋಡ್ರೀ, ಎಲ್ಲಾ ದಿನಪತ್ರಿಕೆಗಳ ರಿಪೋರ್ಟರ್‌ಗಳಿಗೂ ಮಂತ್ಲಿ ಕೊಡಬೇಕು. ಅದೇನ್ ಮಾಡ್ತೀರೋ, ಗೊತ್ತಿಲ್ಲ, ನಿಮ್ಮ ವತಿಯಿಂದ ಹತ್ತು ಲಕ್ಷ ಬರಲೇಬೇಕು.....!' ಎಂದು ಧಮಕಿ ಹಾಕಿದ್ದಾನೆ. ಪಾಲಿಕೆಯ ಚೀಫ್ ಇಂಜಿನಿಯರ್, ಮುಖ್ಯ ಆರೋಗ್ಯಾಧಿಕಾರಿ, ಹೆಲ್ತ್ ಇನ್ಸ್‌ಪೆಕ್ಟರ್‌ಗಳು, ರೆವಿನ್ಯೂ ಸಿಬ್ಬಂದಿಗಳೆಲ್ಲ ಲಿಂಗರಾಜನ ರೋಲ್‌ಕಾಲ್ ಹಾವಳಿ ಕಂಡೇ ಕಂಗಾಲಾಗಿ ಕಮೀಷನರ್ ಮೀನಾ ಸಾಹೇಬರಿಗೆ ದೂರು ಕೊಟ್ಟಿದ್ದಾರಂತೆ!

ಮೀನಾ ತಾನೇ ಏನು ಮಾಡಲು ಸಾಧ್ಯ? ಚಪ್ಪಲಿಯನ್ನು ಎಲ್ಲಿಟ್ಟರೆ ಚೆಂದ ಎಂಬ ಪ್ರಜ್ಞೆ ಮೇಯರ್‌ಗಿರಬೇಕು. ಕಿತ್ತು ಹೋದ ಪಾದರಕ್ಷೆಗಳನ್ನೆಲ್ಲ ತಲೆ ಮೇಲೆ ಹೊತ್ತು ಮೆರೆದಾಡಿಸಿದರೆ ಮೇಯರ್ ಸ್ಥಾನದ ಪೂಜ್ಯತೆಗೆ ಏನು ಅರ್ಥ ಬಂತು? ಇಂಥ ಖದೀಮರೆಲ್ಲ ಮೇಯರ್ ಛೇಂಬರಿನಲ್ಲಿ ವಿಜೃಂಭಿಸುತ್ತಾರೆಂದರೆ ಇನ್ನು ಜನಸಾಮಾನ್ಯರು ಅಲ್ಲಿಗೆ ಕಾಲಿಡುವುದುಂಟಾ?

ಮೇಯರ್ ನಟರಾಜ್‌ಗೇನೋ ವೀಕ್‌ನೆಸ್ಸು ನಿಜ; ಅವರ ಗಾಡ್‌ಫಾದರ್ ಅಶೋಕ್‌ಗಾದರೂ ಬುದ್ಧಿ ಬೇಡವೆ? ಮೇಯರ್ ಸುತ್ತ ಇಂಥ ಪಾಖಂಡಿಗಳೇ ಠಳಾಯಿಸುತ್ತಿದ್ದರೆ ಬೆಂಗಳೂರು ಉದ್ಧಾರವಾಗಬೇಕೆಂದರೆ ಎಲ್ಲಿಂದ?

• ರಾ. ಸೋಮನಾಥ್
ra.somanath2010@gmail.com



ಪಾಲಿಕೆ ರೌಡಿ ಕೇಡಿ ಭಾಸ್ಕರನ ಹಾವಳಿ

ವಿರಿಯಾಗೊಬ್ಬ ರೌಡಿ ಇರುವಂತೆ ಬೆಂಗಳೂರು ಕಾರ್ಪೊರೇಷನ್ನಿಗೂ ಒಬ್ಬ ರೌಡಿಯಿದ್ದಾನೆ. ಆತನ ಹೆಸರು ನಿವಾರಣೆ ಭಾಸ್ಕರ!

ಪಾಲಿಕೆ ಇಂಜಿನಿಯರ್‌ಗಳನ್ನು, ಅಧಿಕಾರಿಗಳನ್ನು ಬ್ಲಾಕ್‌ಮೇಲ್ ಮಾಡಿ ರೋಲ್‌ಕಾಲ್ ಮಾಡುವುದೇ ಈತನ ಹುಟ್ಟು ಕಸುಬು. ಈ ಹಿಂದೆ ಶಹತಾಜ್ ಖಾನಮ್ ಉಪಮೇಯರ್ ಆಗಿದ್ದಾಗ ಕೌನ್ಸಿಲ್ ಸಭೆಗೇ ನುಗ್ಗಿ ಆಕೆಯನ್ನು ಭಾಸ್ಕರ ಹಿಡಿದು ಬಡಿದಿದ್ದ. ಆನಂತರ ಕಾಮಗಾರಿ ಸ್ಥಾಯಿ ಸಮಿತಿಯ ನೌಕರ ಮುನಿರಾಜು ಎಂಬಾತನನ್ನು ಪಾಲಿಕೆ ಹೆಡ್ಡಾಫೀಸಿನಲ್ಲೇ ಅಟ್ಟಾಡಿಸಿ ಹೊಡೆದಿದ್ದ. ಭಾಸ್ಕರನ ಗೂಂಡಾ ಹಾವಳಿಯ ವಿರುದ್ಧ ಆಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಬೇಕಾಬಿಟ್ಟಿ ದೂರುಗಳು ದಾಖಲಾದವು.

ನಾರಾಯಣಸ್ವಾಮಿ ಮೇಯರ್ ಆಗಿದ್ದಾಗ ಈತನ ಹಾವಳಿ ಯಾವ ಮಟ್ಟಕ್ಕಿತ್ತೆಂದರೆ ಬಸವನಗುಡಿಯ ಪಾಲಿಕೆ ಕಚೇರಿಯಲ್ಲಿದ್ದ ಮಹಿಳಾ ನೌಕರಳೊಬ್ಬಳನ್ನು ಭಾಸ್ಕರ ಪ್ರತಿನಿತ್ಯ ಪೀಡಿಸುತ್ತಿದ್ದ. ತಾನು ಮೇಯರ್ ರೈಟ್‌ಹ್ಯಾಂಡ್ ಎಂದು ಭಾಸ್ಕರ ಶುರು ಹಚ್ಚಿಕೊಂಡ ಲೈಂಗಿಕ ಕಿರುಕುಳದ ವಿರುದ್ಧ ಆ ಗುಮಾಸ್ತೆ ಆತ್ಮಹತ್ಯೆಗೆ ಯತ್ನಿಸಿದ್ದಳು. ಇದರಿಂದ ರೊಚ್ಚಿಗೆದ್ದ ಪಾಲಿಕೆ ನೌಕರರೆಲ್ಲ ಭಾಸ್ಕರನ ಹಾವಳಿಯ ವಿರುದ್ಧ ಕಮೀಷನರ್ ಕಚೇರಿಯೆದುರೇ ಪ್ರತಿಭಟನೆ ಹಮ್ಮಿಕೊಂಡರು. ಭಾಸ್ಕರನನ್ನು ರೌಡಿ ಪಟ್ಟಿಗೆ ಸೇರಿಸುವಂತೆ ಪೊಲೀಸ್ ಕಮೀಷನರ್‌ಗೂ ದೂರು ಕೊಟ್ಟರು. ಬಹುಶಃ ಆಲಸೂರು ಗೇಟ್ ಪೊಲೀಸರು ಕೊಂಚ ಶ್ರದ್ಧೆ ವಹಿಸಿದ್ದರೂ ಈತನನ್ನು ಯಾವತ್ತೋ ರೌಡಿ ಷೀಟಿಗೆ ಸೇರಿಸಿ ಗಡಿಪಾರು ಮಾಡಬಹುದಿತ್ತು. ಆವತ್ತು ಮೇಯರ್ ಸೋಗಲಾಡಿತನದಿಂದಾಗಿ ಹೇಗೋ ಭಾಸ್ಕರ ಬಚಾವಾದ.

ಇವತ್ತು ಇದೇ ಭಾಸ್ಕರ ಮತ್ತೆ ನಟರಾಜ್ ಛೇಂಬರಿಗೆ ಕಾಲಿಟ್ಟಿದ್ದಾನೆ. ದೊಡ್ಡದೊಡ್ಡ ಅಪಾರ್ಟ್‌ಮೆಂಟ್‌ಗಳ ಬಿಲ್ಡರುಗಳನ್ನು ಬ್ಲಾಕ್‌ಮೇಲ್ ಮಾಡುವುದು, ಪಾಲಿಕೆ ಆಸ್ತಿಗೆ ನಕಲಿ ದಾಖಲೆ ಸೃಷ್ಟಿಸುವುದು, ಖದೀಮ ಬಿಲ್ಡರ್‌ಗಳ ಅಕ್ರಮ ಕಟ್ಟಡಗಳಿಗೆ ಪ್ಲಾನ್ ಮಂಜೂರು ಮಾಡಿಸುವುದು, ಕಳ್ಳ ಕಾಮಗಾರಿಗಳಿಗೆ ನಕಲಿ ಬಿಲ್ ಸೃಷ್ಟಿಸಿ ದೋಚುವುದು ಈತನ ದಂಧೆ. ಪಾಲಿಕೆ ಅಧಿಕಾರಿಗಳನ್ನು ಬ್ಲಾಕ್‌ಮೇಲ್ ಮಾಡಲೆಂದೇ ಸಾವಿರದೈನೂರಕ್ಕೂ ಅಧಿಕ ಮಾಹಿತಿ ಹಕ್ಕು ಅರ್ಜಿಗಳನ್ನು ಹಾಕಿ ಪೀಡಿಸಿದ್ದಾನೆ. ಇದರರ್ಥ ಮಾಹಿತಿ ಹಕ್ಕು ಕಾಯ್ದೆ ಬಳಸಿ ತನಗೆ ಯಾರು ರೋಲ್‌ಕಾಲ್ ಕೊಡುತ್ತಾರೋ ಅಂಥವರ ವಿರುದ್ಧದ ಅರ್ಜಿ ವಾಪಸ್ಸು ಪಡೆಯುತ್ತಾನೆ.

ಈ ರೀತಿ ಪ್ಲಾನು, ಸೈಟ್ಟು, ಕಳ್ಳಬಿಲ್ಲು, ಸೈಟು, ಗೋಲ್‌ಮಾಲ್ ಮಾಡಿಯೇ ಭಾಸ್ಕರ ಇವತ್ತು ಮೂವತ್ತು ಕೋಟಿಯ ಒಡೆಯ!

ಇಂಥ ಕೇಡಿಯನ್ನು ಯಾರೇ ಪಾಲಿಕೆ ಅಧಿಕಾರಿಯೂ ಮಾತನಾಡಿಸಕೂಡದೆಂದೂ, ಈತನ ಬೆದರಿಕೆಯ ವಿರುದ್ಧ ಅಲಸೂರು ಗೇಟ್ ಪೊಲೀಸ್ ಠಾಣೆಗೆ ದೂರು ಕೊಡಬೇಕೆಂದು; ಹೊಸ ಕಮೀಷನರ್ ಭರತ್‌ಲಾಲ್ ಮೀನಾ ಅವರೇ ಸುತ್ತೋಲೆ ಹೊರಡಿಸಿದ್ದಾರೆ. ಹೀಗಿದ್ದೂ ಮೇಯರ್ ನಟರಾಜ್ ಇಂಥವನಿಗೆ ಮಣೆ ಹಾಕುತ್ತಾರೆಂದರೆ ಏನೆನ್ನಬೇಕು?

ಚಿದಂಬರಂ ಅವರಿಗೆ ಒಂದು ಪತ್ರ



ಪ್ರೀತಿಯ ಶ್ರೀ ಚಿದಂಬರಂ ಅವರಿಗೆ,

ನಕ್ಸಲರ ಹೇಯ ಹಿಂಸಾಚಾರವನ್ನು ನಾಗರಿಕ ಸಮಾಜ ಖಂಡಿಸುವುದಿಲ್ಲ ಎಂದು ಎನ್‌ಡಿಟಿವಿ ಚಾನೆಲ್‌ಗೆ ದಿದ ಸಂದರ್ಶನದಲ್ಲಿ ತಾವು ಪದೇಪದೇ ಕೆಣಕಿದ್ದಕ್ಕೆ ಈ ತದ ಪ್ರತಿಕ್ರಿಯೆ. ಮಾವೋವಾದಿಗಳ ವಿರುದ್ಧ ಇನ್ನಷ್ಟು ನ್ಯಬಲ ಮತ್ತು ವಾಯುಬಲವನ್ನು ಬಳಸಲು ಸಚಿವ ಪುಟದಿಂದ ಒಪ್ಪಿಗೆ ಪಡೆಯುವುದಕ್ಕೆಂದೇ ಆ ಸಂದರ್ಶನ ನ್ನು ಆಯೋಜಿಸಿದಂತಿತ್ತು. ತಮ್ಮನ್ನು 'ಘಾಸಿಗೊಂಡಿರುವ ತಾತ್ಮ' ಎನ್ನುತ್ತಲೆ ಬೆಂಬಲಿಸಿದ ಅರುಣ್ ಜೈಟ್ಲಿ ಅವರ ಾಚಿಕ ಉದ್ದೇಶವೂ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿನ ಧಣಿಗಳನ್ನು ಸಂತೈಸುವುದೇ ಆಗಿತ್ತು.

ತಾವು ಅಮಾಯಕ ಆದಿವಾಸಿಗಳ ವಿರುದ್ಧ ತಾಳಿರುವ ನಿಲುವಿನೊಂದಿಗೆ ನಾನು ನಾಗರಿಕ ಸಮಾಜದ ಸದಸ್ಯನಾಗಿ ನನ್ನ ಭಿನ್ನಮತವನ್ನು ವ್ಯಕ್ತಪಡಿಸಿದರೆ ು ಅನಾಗರಿಕ ಎಂದು ನೀವು ಪರಿಗಣಿಸುವುದಿಲ್ಲವೆಂದು ವಿಸುತ್ತೇನೆ. ಹಾಗೆಯೇ ಇವತ್ತು ನಕ್ಸಲ್‌ವಾದ ಇಷ್ಟರಮಟ್ಟಿಗೆ ಯುವಲ್ಲಿ ತಮ್ಮ ಅಪಾರ ಕೊಡುಗೆಯೂ ಇದೆ ಎಂಬ ವಿನಮ್ರ ಆರೋಪದಿಂದ ತಾವು ಹೆಚ್ಚು ಶಾಕ್ ುವುದಿಲ್ಲ ಎಂದೂ ಭಾವಿಸಿದ್ದೇನೆ. ಈ ಆರೋಪಕ್ಕೆ ಣ ತಾವು ಆರ್ಥಿಕ ಮಂತ್ರಿಯಾದ ನಂತರ ಕೈಗೊಂಡ ನ ಚಟುವಟಿಕೆಗಳು ಮತ್ತು ಯೋಜನೆಗಳು:

ಕಳೆದ ಹತ್ತು ವರ್ಷಗಳಲ್ಲಿ ನಕ್ಸಲ್‌ವಾದವು ನೂರ್ಮಡಿ ದದ್ದು ನಿಜವಲ್ಲವೇ? ತಾವು ಕೂಡ ನಿಮ್ಮ ಎನ್‌ಡಿಟಿವಿ ರ್ಶನದಲ್ಲಿ ಇದನ್ನೇ ಹೇಳಿದ್ದೀರಿ.

ಕಳೆದ ಹತ್ತು ವರ್ಷಗಳಲ್ಲಿ ಕಬ್ಬಿಣ ಅದಿರು ಗಣಿಗಾರಿಕೆ ಲ್ಲಿನ ಲಾಭವು ಪ್ರತಿ ಟನ್ನಿಗೆ 50 ರೂಪಾಯಿಗಳಿಂದ 00 ರೂಪಾಯಿಗಳಿಗೆ ಏರಿದ್ದಕ್ಕೆ ತಾಳೆಯಾಗುವಂತೆ ೇ ಅವಧಿಯಲ್ಲಿ ನಕ್ಸಲ್‌ವಾದದ ಜನಪ್ರಿಯತೆ ಕೂಡಾ ತು ಎಂಬುದು ನಿಜವಲ್ಲವೇ?

ನಕ್ಸಲ್‌ವಾದೀ ಪ್ರಭಾವ ಇರುವ ಪ್ರದೇಶಗಳ ನಕ್ಷೆಯೂ ತ್ತು ಭಾರತದ ಖನಿಜ ಸಂಪತ್ತಿನ ನಕ್ಷೆಯೂ ಒಂದೇ ರುವುದು ನಿಜವಲ್ಲವೆ?

ಈ ಖನಿಜ ಸಂಪತ್ತು ಭಾರತದ ಗಳಿಗೆ ಸೇರಿದ್ದರೂ, ಪರಸ್ಪರ ಾರಕ್ಕೆ ಅನೈತಿಕ ಬಂಡವಾಳ ಂ ವ್ಯವಸ್ಥೆಯಡಿ ಅವುಗಳನ್ನು ಧಣಿಗಳಿಗೆ ಮತ್ತು ಕಾರ್ಪೊ ್ ಕಂಪನಿಗಳಿಗೆ ನೀಡಲಾಗಿದೆ. ಣ್ ಜೇಟ್ಲಿ ನಿಮ್ಮ ನಿಷ್ಠಾವಂತ ಬಲಿಗರಾಗಿರುವುದಕ್ಕೆ ಕಾರಣ ಪಿ ಅಧಿಕಾರದಲ್ಲಿರುವ ನಾಲ್ಕು ್ಯ ಸರ್ಕಾರಗಳೂ ಇದೇ ಗಣಿ ಫಿಯಾದ ಹಣವನ್ನೇ ಅವ ಬಿಸಿರುವುದು.



ನೀವು ನಾಲ್ಕೂವರೆ ವರ್ಷಗಳ ಕಾಲ ಆರ್ಥಿಕ ಮಂತ್ರಿ ದ್ದಾಗ ಕಾರ್ಪೊರೇಟ್ ಕಂಪನಿಗಳ ಅಧಿಕೃತ ಮತ್ತು ಧಿಕೃತ ಗಣಿಗಾರಿಕೆ ಹೆಚ್ಚಾಗಿ ಕಬ್ಬಿಣ ಅದಿರಿನ ಗಣಿಗಾರಿಕೆ ಲಕವೇ ಎರಡು ಲಕ್ಷ ಕೋಟಿ ರೂಪಾಯಿಗಳಿಗಿಂತಲೂ ್ಚು ಲಾಭ ಕಂಡಿದ್ದು ನಿಜವಲ್ಲವೆ? ಈ ಲಾಭವನ್ನು ೆ ಹಂಚಿಕೊಳ್ಳಲಾಯಿತು?

ನೀವು ಆರ್ಥಿಕ ಮಂತ್ರಿಯಾಗಿದ್ದಾಗ ಕಬ್ಬಿಣ ಅದಿರಿನ ಲಿನ ರಾಯಧನವನ್ನು ಏರಿಸದೇ ಅದನ್ನು ಅಸಂಬದ್ಧವಾದ 7- ರೂ. 27 (ಅದಿರಿನ ಗುಣಮಟ್ಟವನ್ನು ಆಧರಿಸಿ)ಗೆ ುತವಾಗಿಟ್ಟಿದ್ದು ನಿಜವಲ್ಲವೇ? ಅಂತರರಾಷ್ಟ್ರೀಯ ್ಟೆದಲ್ಲಿ ಅದಿರಿನ ಬೆಲೆ ಗಗನ ಮುಟ್ಟಿದಾಗಲೂ ುಧನವನ್ನು ಹೆಚ್ಚಿಸದಿದ್ದದ್ದು ನಿಜವಲ್ಲವೇ?

ಜನತೆಯೇ ಖನಿಜ ಸಂಪತ್ತಿನ ಮಾಲೀಕರು ಎಂಬುದು ನಿಜವಲ್ಲವೇ? ಹಾಗಿರುವಾಗ ಗಣಿ ಲಾಭದಲ್ಲಿ ಶೇ. 0.5 ಅನ್ನು ಮಾತ್ರ ರಾಯಧನವಾಗಿ ಪಡೆದಿದ್ದು ನ್ಯಾಯಯುತವೇ? ಹಾಗಿದ್ದಲ್ಲಿ ನೀವು ಒಂದು ಕೋಟಿ ಬೆಲೆಬಾಳುವ ನಿಮ್ಮ ಆಸ್ತಿಯನ್ನು ಕೇವಲ 50,000 ರೂಪಾಯಿಗಳಿಗೆ ಮಾರುತ್ತೀರಾ?

ನಮ್ಮ ಸಂವಿಧಾನದ ಪ್ರಕಾರ ಈ ದೇಶದ ನೈಸರ್ಗಿಕ ಸಂಪತ್ತನ್ನು ಸರ್ಕಾರವು ಜನರ ಅಭಿವೃದ್ಧಿಗಾಗಿ ವ್ಯಯಿಸಬೇಕು. ಹಾಗಿರುವಾಗ ತಾವು ನಮ್ಮ ಸಂವಿಧಾನಕ್ಕೆ ಬದ್ಧರಾಗಿ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದರೂ ಈ ಕರ್ತವ್ಯವನ್ನು ಪಾಲಿಸಿದರೇ?

ಪೊಲೀಸರ ಮತ್ತು ನೀತಿರೂಪಕರ ನೆರವಿನೊಂದಿಗೆ ಗಣಿ ಮಾಫಿಯಾಗಳು ಎತ್ತಂಗಡಿ ಮಾಡಿದ ಬಡ ಜನರ ಉದ್ಧಾರಕ್ಕೆ ಗಣಿಗಾರಿಕೆಯಿಂದ ಬಂದ ಲಾಭದಲ್ಲಿ ಕೇವಲ 25% ಅನ್ನಾದರೂ ಉಪಯೋಗಿಸಿದ್ದರೆ, ನಕ್ಸಲ್ ಸಮಸ್ಯೆ ಇರುತ್ತಿತ್ತೇ?

ನೈಸರ್ಗಿಕ ಸಂಪತ್ತನ್ನು ಹೊಂದಿರುವ, ಅಭಿವೃದ್ಧಿಗೊಂಡಿರುವ ಆಸ್ಟ್ರೇಲಿಯಾದಂತಹ ದೇಶಗಳೂ ಸಹ ಗಣಿಗಾರಿಕೆಯಿಂದ ಬಂದ ಲಾಭಪ್ರಾಪ್ತಿಯ ಮೇಲೆ 40% ತೆರಿಗೆ ಹಾಕಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ? ಭಾರತದಂತಹ ಬಡದೇಶ ಇಂತಹ ತೆರಿಗೆಯನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿದೆಯೇ?

ತಾವು ವಕೀಲ ವೃತ್ತಿಯಲ್ಲಿ ಎಷ್ಟು ಬಾರಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ಪರವಾಗಿ ವಾದಿಸಿದ್ದೀರೆಂದೂ, ಎಷ್ಟು ಬಾರಿ ಕಾರ್ಪೊರೇಟ್ ಕಂಪನಿಗಳ ಹಿತಾಸಕ್ತಿ ಪರವಾಗಿ ವಾದಿಸಿದ್ದೀರೆಂದೂ ಬಹಿರಂಗಪಡಿಸುತ್ತೀರಾ? ಈ ಪ್ರಶ್ನೆ ಮುಖ್ಯ ಯಾಕೆಂದರೆ ಕಾರ್ಪೊರೇಟ್ ಕಂಪನಿಗಳ ಪರವಾಗಿ ತಮ್ಮ ಕಾಳಜಿ ಈ ದೇಶದ ದುಡಿವ ವರ್ಗಗಳ ವಿರುದ್ಧವಾಗಿದೆ.

ಇದೆಲ್ಲದರಿಂದ, ಹಣಕಾಸು ಮಂತ್ರಿಯಾಗಿಯೂ, ಗೃಹಮಂತ್ರಿಯಾಗಿಯೂ ತಾವು ಗಣಿ ಮಾಫಿಯಾಗಳ ದುರಾಸೆಗಳಿಗೆ ತಕ್ಕನಾಗಿ ಲಾಭಕೋರ ಕಾರ್ಪೊರೇಟ್ ಕಂಪನಿಗಳ ಪರವಾಗಿಯೇ ವರ್ತಿಸಿದ್ದೀರಿಯೇ ವಿನಃ ಬಡ ಮತ್ತು ಆದಿವಾಸಿಗಳ ಪರವಾಗಲ್ಲ ಎಂದು ನಾಗರಿಕ ಸಮಾಜ ನಿರ್ಣಯಿಸಿದರೆ, ಅದರಲ್ಲಿ ತಪ್ಪೇನು? ಅದರಲ್ಲೂ ವೇದಾಂತ ಕಂಪನಿಯ ನಿರ್ದೇಶಕರಾಗಿದ್ದ ನಿಮಗೆ ಇದು ಇನ್ನೂ ಚೆನ್ನಾಗಿ ಗೊತ್ತಿರಬೇಕಿತ್ತು!

ಎನ್‌ಡಿಟಿವಿ ಸಂದರ್ಶನದಲ್ಲಿ ತಾವು ನಕ್ಸಲ್ ಚಳವಳಿಯನ್ನು ದಮನ ಮಾಡಲು ಎರಡು ರೀತಿಯ ಮಾರ್ಗಗಳ ಬಗ್ಗೆ ಮಾತನಾಡಿದ್ದೀರಿ. ಆದರೆ ಈ 'ದ್ವಿಮುಖ-ಮಾರ್ಗ'ದಲ್ಲಿ ಅಭಿವೃದ್ಧಿಯ ಮಾರ್ಗ ಅಸ್ತಿತ್ವದಲ್ಲೇ ಇಲ್ಲ. ಗಣಿಗಾರಿಕೆಯಿಂದ ಪಡೆದ ರಾಯಧನವು ಆರೋಗ್ಯ ಪರಿಸರ, ನೀರು, ರಸ್ತೆಗಳ ಮೇಲಾಗಿರುವ ಹಾನಿಯನ್ನು ಸರಿಪಡಿಸಲೂ ಸಾಕಾಗುವುದಿಲ್ಲ, ಇನ್ನು ರಕ್ಷಣಾ ಪಡೆಗಳ ವೆಚ್ಚವನ್ನು ಆ ಹಣದಿಂದ ಭರಿಸುವುದು ದೂರದ ಮಾತಾಯಿತು.

ರಾಜಕೀಯ ಪಕ್ಷಗಳು ಗಣಿ ಕಂಪನಿಗಳಿಂದ ಲಂಚ ಪಡೆದು ನಮ್ಮ ನೈಸರ್ಗಿಕ ಸಂಪತ್ತನ್ನು ಅವುಗಳಿಗೆ ನೀಡುತ್ತಿರುವ ನೇರ ಪರಿಣಾಮದಿಂದಲೇ ರಕ್ಷಣಾ ಪಡೆಗಳ ಅಮಾಯಕ ಸದಸ್ಯರ ಮತ್ತು ಆದಿವಾಸಿಗಳ ಹತ್ಯೆಯಾಗುತ್ತಿದೆ ಎಂಬುದು ನಿಜವಲ್ಲವೆ?



ಲಾಭಕೋರ ಗಣಿ ಕಂಪನಿಗಳಿಂದಾಗಿಯೇ ಇವತ್ತು ಎರಡೂ ಕಡೆ ಅಮಾಯಕರ ರಕ್ತ ಚೆಲ್ಲಿದ್ದರೂ ಅದು ನಿಮಗೆ ಗೌಣವಾಗಿ ಕಂಡು, ಅದಕ್ಕಿಂತ ತಾವು ಹಣಕಾಸು ಮಂತ್ರಿಯಾಗಿ ಐದು ವರ್ಷಗಳ ಕಾಲ ಪೂರೈಸದೇ ಇದ್ದದ್ದರ ಬಗ್ಗೆ ಹೆಚ್ಚು ವ್ಯಥೆ ಪಟ್ಟಿದ್ದನ್ನು (ಅದೇ ಸಂದರ್ಶನದಲ್ಲಿ) ನೋಡಿ ನಿಜವಾಗಲೂ ನನಗೆ ಶಾಕ್ ಆಯಿತು.

ಗಣಿ ಮಾಫಿಯಾಗಳು ನೀಡಿದ ಹಣದಿಂದಲೇ ಚುನಾವಣೆಗಳಲ್ಲಿ ಗೆದ್ದು ಬಂದಿರುವ ರಾಜ್ಯ ಸರ್ಕಾರಗಳು ಇವತ್ತು ಅದೇ ಗಣಿಗಳ ರಕ್ಷಣೆ ಮತ್ತು ಲಾಭಕ್ಕೆ ವಾಯುಪಡೆ ಬೇಕೆನ್ನುತ್ತಿರುವುದು ಅಚ್ಚರಿಯ ಸಂಗತಿ ಏನಲ್ಲ.

ಕಳೆದ ಚುನಾವಣೆಗಳಲ್ಲಿ ಚಿಕ್ಕ ಅಂತರದಿಂದ ಗೆದ್ದು ಬಂದ ನಿಮಗೆ ಚುನಾವಣಾ ಪ್ರಕ್ರಿಯೆಯಲ್ಲಿ ಹಣ ಎಷ್ಟು ಮುಖ್ಯವಾಗಿದೆ ಎಂಬುದು ಚೆನ್ನಾಗಿ ಗೊತ್ತಿರಬೇಕು.

ಇಲ್ಲಿ ಅಪಾಯದಲ್ಲಿರುವುದು ಪ್ರಭುತ್ವದ ವಿಶ್ವಾಸಾರ್ಹತೆ: ಗಣಿ ಮಾಫಿಯಾಗಳ ಅನುಕೂಲಕ್ಕಾಗಿ ಪ್ರಭುತ್ವ ತನ್ನ ಬಲವನ್ನು ಪ್ರಯೋಗಿಸುತ್ತಿದೆ. ಗಣಿ ಮಾಫಿಯಾದ ಲಾಭದಲ್ಲೇ ಪ್ರಭುತ್ವದ ಹಿತಾಸಕ್ತಿಯೂ ಅಡಗಿದೆ. ಇದಕ್ಕೆ ಗಣಿ ಕಂಪನಿಗಳೊಂದಿಗೆ ರಾಜಕೀಯ ಪಕ್ಷಗಳಿಗೆ ಇರುವ ಅನೈತಿಕ ಬಂಡವಾಳಶಾಹಿ ಸಂಬಂಧವೇ ಕಾರಣವಾಗಿದೆ.

ಪ್ರಭುತ್ವ ತನ್ನ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳಬೇಕಿದ್ದರೆ ಕೂಡಲೇ ಜನರ ಸ್ವತ್ತಾಗಿರುವ ಗಣಿಗಳನ್ನು ಸ್ವಾಧೀನಪಡಿಸಿಕೊಂಡು ಗಣಿಗಾರಿಕೆಯಿಂದ ಬಂದ ಲಾಭದಲ್ಲಿ ಕನಿಷ್ಠ ಶೇ. 25 ಅನ್ನು ಸ್ಥಳೀಯ ಜನರ ಅಭಿವೃದ್ಧಿಗೆ ವ್ಯಯಿಸಲಾಗುವುದು ಎಂದು ಪ್ರಮಾಣ ಮಾಡಬೇಕಿದೆ. ಇಂತಹ ಪರಿಹಾರವನ್ನೇ ನಮ್ಮ ಸಂವಿಧಾನವೂ ಅನುಮೋದಿಸಿರುವುದು. ಹೀಗೆ ವಿಶ್ವಾಸಾರ್ಹತೆಯನ್ನು ಮರುಪಡೆದ ನಂತರವೇ ಯಾವುದೇ ಕ್ರಮ ಕೈಗೊಳ್ಳುವುದಕ್ಕೆ ಪ್ರಭುತ್ವಕ್ಕೆ ನೈತಿಕ ಹಕ್ಕಿರುತ್ತದೆ. ಆದರೆ ವಾಸ್ತವವಾಗಿ, ಜನರ ಸಂಪತ್ತನ್ನು ಜನರ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ತೊಡಗಿಸುವುದೇ ಮಾವೋವಾದಿಗಳ ಸಿದ್ಧಾಂತಕ್ಕೆ ಸೂಕ್ತವಾದ ಪ್ರತಿರೋಧವೂ ಆಗಿರುವುದರಿಂದ ಇತರ ಯಾವ ಕ್ರಮಗಳೂ ಅಗತ್ಯವಾಗುವುದಿಲ್ಲ.

ಒಳ್ಳೆಯ ಮನುಷ್ಯರಾಗಿದ್ದ ನಿಮಗೆ ಏನಾಯಿತು ಚಿದಂಬರಂ ಅವರೆ? ಫೇರ್‌ಗ್ರೋತ್ ಹಗರಣದಲ್ಲಿ ನೀವು ತಪ್ಪಿತಸ್ಥರಾಗಿರದಿದ್ದರೂ ನಿಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದವರು ನೀವು.

ಬದುಕು ಎಂಬುದು ಹಣಕ್ಕಾಗಿ ನ್ಯಾಯಾಲಯದ ಮುಂದೆ ವಾದಿಸುವುದಲ್ಲ. ಬದುಕು ಎಂಬುದು ಸರಿಯಾದುದ್ದರ ಪರವಾಗಿ ವಾದಿಸುವುದು. ನಮ್ಮನ್ನೆಲ್ಲ ನೀವು "ಬುದ್ಧಿವಂತರು ಮತ್ತು ಕುಟಿಲ ಬುದ್ಧಿಯವರು" (ಅದೇ ಸಂದರ್ಶನದಲ್ಲಿ) ಎಂದು ತಪ್ಪಾಗಿ ಆರೋಪಿಸಿದ್ದೀರಿ. ನಮಗೆ ನಿಮ್ಮಂತೆ ವಾದ ಮಂಡಿಸುವುದು ಬರುವುದಿಲ್ಲ. 'ಆಹಾರಕ್ಕಾಗಿ ತೈಲ' ಹಗರಣದಲ್ಲಿ ರಿಲಯನ್ಸ್ ಕಂಪನಿಯ ಪಾತ್ರ ಕುರಿತು ಪಾಥಕ್ ಸಮಿತಿ ತನಿಖೆಗೆ ಒಳಪಡಿಸದಂತೆ ತಾವು ಸಂಸತ್ತಿನಲ್ಲಿ ಮಂಡಿಸಿದ ವಾದವು ನಿಜವಾಗಲೂ 'ಅದ್ಭುತ'ವಾಗಿತ್ತು. ನಿಮ್ಮ ಆ ವಾದ ಮಂಡನೆಯಲ್ಲಿ ನೀವು 'ಬುದ್ಧಿವಂತ'ರಾಗಿದ್ದಿರೋ ಅಥವಾ 'ಕುಟಿಲ' ಬುದ್ಧಿಯವರಾಗಿದ್ದಿರೋ? (ಇದನ್ನು ನಿರ್ಧರಿಸಲು ನಾನು ಬರೆದಿರುವ 'ರಿಲಯನ್ಸ್ ದಿ ರಿಯಲ್ ನಟ್ವರ್' ಪುಸ್ತಕವನ್ನು ಓದಿ).

ದಯವಿಟ್ಟು ತಮ್ಮ ತಪ್ಪು ಒಪ್ಪುಗಳಿಗೆ ನಾಗರಿಕ ಸಮಾಜವನ್ನು ಹೊಣೆಗಾರರನ್ನಾಗಿ ಮಾಡಬೇಡಿ. ನಮಗೆ ಯಾವುದೇ ಪಟ್ಟಭದ್ರ ಹಿತಾಸಕ್ತಿಗಳಿಲ್ಲ. ಜನರ ಸ್ವತ್ತು ಜನರಿಗೆ ಸೇರಿದ್ದು ಮತ್ತು ಕಾರ್ಪೊರೇಟ್ ಕಂಪನಿಗಳ ಲಾಭಕೋರತನಕ್ಕೆ ಅಮಾಯಕ ಸೈನಿಕರಾಗಲಿ, ಆದಿವಾಸಿಗಳಾಗಲಿ ಬಲಿಯಾಗಬಾರದೆಂಬುದಷ್ಟೇ ನಮ್ಮ ಕಾಳಜಿ. ಪೊಲೀಸರ ದೌರ್ಜನ್ಯಗಳ ವಿರುದ್ಧ ನ್ಯಾಯಾಲಯಗಳ ಮುಂದೆ ದಾವೆಗಳನ್ನು ಹೂಡಿ ರಾಜ್ಯ ಸರ್ಕಾರಗಳ ಕೈಕಾಲುಗಳನ್ನು ಕಟ್ಟಿಹಾಕುವಷ್ಟು ಶಕ್ತಿಶಾಲಿಗಳು ನಾವಲ್ಲ. ಇಂತಹ ಪರಿಸ್ಥಿತಿಯಲ್ಲಿ ಮಾನವ ಹಕ್ಕುಗಳ ಪರವಾಗಿ ಹೋರಾಡುತ್ತಿರುವವರು ತಮ್ಮ ಜೀವನ ಮತ್ತು ಸ್ವಾತಂತ್ರ್ಯದ ಹಂಗನ್ನೂ ತೊರೆದು ಕೆಲಸ ಮಾಡುತ್ತಿದ್ದಾರೆ. ಅಂತವರನ್ನು ದಾರಿ ತಪ್ಪಿದ "ರಮ್ಯ ಕಲ್ಪನಾ ವಿಲಾಸಿಗಳು" ಎಂದು ಜರಿಯುವ ಬದಲಾಗಿ ಗೌರವಿಸಬೇಕು.

ಒಂದು ಖಾಸಗಿ ವಿಚಾರ: ಪಾಸ್ಕೊ ಮತ್ತು ಆರ್ಸೆಲ್ಲಾರ್ ಮಿಟ್ಟಲ್ ಕಂಪನಿಗಳಿಗೆ ಪ್ರಭುತ್ವವು ಕೊಡಲಿರುವ ಮೂರು ಲಕ್ಷ ಕೋಟಿ ಕಬ್ಬಿನ ಅದಿರಿನ ವಿರುದ್ಧ ನಾನು ಹೂಡಬೇಕೆಂದಿರುವ ಸಾರ್ವಜನಿಕ ಹಿತಾಸಕ್ತಿ ಪರವಾಗಿ ಹೈಕೋರ್ಟಿನಲ್ಲಿ ವಾದಿಸಲು ತಾವು ತಮ್ಮ ಹುದ್ದೆಗೆ ರಾಜೀನಾಮೆ ನೀಡುವಿರಾ? (ಮಿನರ್ವ ಮಿಲ್ ಕೇಸಿನಲ್ಲಿ ಫಾಲ್ಕಿವಾಲಾ ಅವರು ವಾದಿಸಿದ್ದಂತೆ?) ಈ ಕೇಸಿನಲ್ಲಿ ಸೋಲುವುದು ಕಷ್ಟ, ಏಕೆಂದರೆ ಇಲ್ಲಿ ಕಾನೂನು, ಸತ್ಯಾಂಶ ಮತ್ತು ನೀವು- ಮೂರೂ ಒಂದೇ ಕಡೆ ಇರುತ್ತವೆ.

ನೀವು ಈ ನನ್ನ ಮನವಿಗೆ ಒಪ್ಪಿದರೆ ಇದು ನೀವು ಹಣಕಾಸು ಮಂತ್ರಿಯಾಗಿ ಪೂರ್ಣಗೊಳಿಸದೇ ಹೋದ ಆ ಆರು ತಿಂಗಳಿಗಿಂತ ಈ ಅವಧಿ ಅತ್ಯಂತ ಮಹತ್ವದ್ದಾಗಿರುತ್ತದೆ.

ನಿಮಗೆ ಆಸಕ್ತಿ ಇದ್ದರೆ ತಿಳಿಸಿ, ನಾನು ನನ್ನ ಅರ್ಜಿಯ ಪ್ರತಿಯನ್ನು ನಿಮಗೆ ಕಳುಹಿಸುತ್ತೇನೆ.


ಬಹಳ ಕಾಲದಿಂದ ನೀವು ನಾಗರಿಕ ಸಮಾಜದ ಮೇಲೆ ಆರೋಪಗಳನ್ನು ಹೊರಿಸುತ್ತಿದ್ದೀರಾ. ನಮಗೂ ನಿಮ್ಮಿಂದ ಉತ್ತರಗಳು ಬೇಕಿವೆ. ನಿಮ್ಮ ಪ್ರತಿಕ್ರಿಯೆಯ ನಿರೀಕ್ಷೆಯಲ್ಲಿ

ಇಂತಿ

ಎ.ಕೆ. ಅಗರ್‌ವಾಲ್

ಇ/13/2, ವಿಜಯಕಿರಣ ಅಪಾರ್ಟ್‌ಮೆಂಟ್ಸ್
32, ವಿಕ್ಟೋರಿಯಾ ರಸ್ತೆ, ಬೆಂಗಳೂರು

ಅನಾಥ ಮಕ್ಕಳಿಗೆಂದು ಯಾರೋ ಸಹೃದಯಿಗಳು ದಾನ ನೀಡಿದ್ದ ಭೂಮಿಯನ್ನು ಕದ್ದು ಅಲ್ಲಿ ತನ್ನ ದಂಧೆ ಶುರು ಮಾಡಿರುವ ರಾಘವೇಶ ಸ್ವಾಮಿಯ ವರ್ತನೆ ಅಸಹ್ಯವಾಗಿದೆ. ಇದೊಂದು ಕ್ರಿಮಿನಲ್ ಕೃತ್ಯ. ತನ್ನ ರಾಜಕೀಯ ಪ್ರಭಾವ, ಜಾತಿ ಬಲ, ಹಣಬಲ ತೋರಿಸಿ ನೂರಾರು ಅನಾಥ ಮಕ್ಕಳಿಗೆ ಆಶ್ರಯತಾಣವಾಗಿದ್ದ ಜಾಗವನ್ನು ಮೋಸದಿಂದ ಕಬಳಿಸಿರುವ ರಾಘವೇಶನಿಗೆ ಹವ್ಯಕ ಸಮುದಾಯದವರೇ ಛೀಮಾರಿ ಹಾಕಬೇಕು.



ಕೌಬಾಯ್ ಕಳ್ಳ ಅನಾಥಾಶ್ರಮ ನುಂಗಿದ

ಕರ್ನಾಟಕದ ನಟೋರಿಯಸ್ ಧರ್ಮಗುರು ರಾಘವೇಶ್ವರ ಭಾರತಿ ಸ್ವಾಮಿ ಲೇಟೆಸ್ಟ್ ಹಗರಣವೊಂದರಲ್ಲಿ ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದಿದ್ದಾನೆ.

ಮಂಗಳೂರಿನ ಆರ್ಯ ಸಮಾಜಕ್ಕೆ ಸೇರಿದ್ದ ಮೂರೂವರೆ ಎಕರೆ ಭೂಮಿ ನುಂಗಿ ಹಾಕಿರುವ ಹಸಿಹಸಿ ಭೂಗಳ್ಳತನದ ಪ್ರಕರಣ ಇದು. ಇವತ್ತಿನ ಮಾರ್ಕೆಟ್ ರೇಟಿನಲ್ಲಿ ಮೂವತ್ತು ಕೋಟಿ ರೂಪಾಯಿ ಬೆಲೆ ಬಾಳುವ ಈ ಭೂಮಿಯನ್ನು ರಾಘವೇಶ್ವರ ಭಾರತಿ ಸ್ವಾಮಿ ಕಬಳಿಸಿರುವ ವೃತ್ತಾಂತ ಕೇಳಿದರೆ ಲ್ಯಾಂಡ್ ಮಾಫಿಯಾಗಳೆಲ್ಲಾ ಈ ಸ್ವಾಮಿಯ ಹತ್ತಿರವೇ ಚೋರವಿದ್ಯೆ ಕಲಿಯಬೇಕೇನೊ ಎನಿಸುವಂತಿದೆ. ಹೀಗೆ ಪರರ ಸ್ವತ್ತನ್ನು ಕದ್ದು ಅಲ್ಲಿ ಭಾರತಿ ಕಾಲೇಜು ಸ್ಥಾಪಿಸಿ ಹೊಸ ಕಟ್ಟಡಗಳನ್ನು ಕಟ್ಟಿಸಿದ್ದಾನೆ ರಾಘವೇಶ.

ಶ್ರದ್ಧಾನಂದ ಆಶ್ರಮದ ಹಿನ್ನೆಲೆ

ಮಂಗಳೂರಿನ ವಿವೇಕಾನಂದ ರಸ್ತೆಯಲ್ಲಿರುವ ಪದವು ಏರಿಯಾದ ಸರ್ವೆ ನಂಬರ್ 49/1A ನಲ್ಲಿ ಒಟ್ಟು 3.16 ಎಕರೆ ಜಮೀನು ಶ್ರದ್ಧಾನಂದ ಆಶ್ರಮಕ್ಕೆ ಸೇರಿದ್ದ ಜಾಗವಾಗಿತ್ತು. ಅದನ್ನು 1966 ರ ಜೂನ್ 2 ರಂದು ಬಸ್ತಿಕಾರ್ ಫ್ಯಾಮಿಲಿಯ ಶ್ರೀಧರ್ ಶೆಣೈ ಎಂಬುವರಿಂದ ಖರೀದಿಸಲಾಗಿತ್ತು. ಈ ಭೂಮಿ ಖರೀದಿಯ ಹಿನ್ನೆಲೆಯೇ ಈಗ ರಾಘವೇಶ್ವರ ಸ್ವಾಮಿಯ ಕಳ್ಳತನವನ್ನು ಬಯಲಿಗೆ ತಂದಿದೆ. ಈ ಶ್ರದ್ಧಾನಂದ ಆಶ್ರಮವು ಮಂಗಳೂರಿನ ಆರ್ಯ ಸಮಾಜದ ಒಂದು ಅಂಗ ಸಂಸ್ಥೆ ಹಾಗೂ ಅಧೀನ ಸಂಸ್ಥೆಯೂ ಹೌದು. ಸ್ವಾಮಿ ದಯಾನಂದ ಸರಸ್ವತಿ ಸ್ಥಾಪಿಸಿದ್ದ ಆರ್ಯ ಸಮಾಜವು 19ನೇ ಶತಮಾನದಲ್ಲಿ ಇಂಡಿಯಾದ ಹಲವೆಡೆ ಹೊಸ ಸಂಚಲನ ಮೂಡಿಸಿತ್ತು. ಅದರ ಪ್ರೇರಣೆಯಿಂದ 1939 ರಲ್ಲಿ ಮಂಗಳೂರಿನಲ್ಲೂ ಆರ್ಯ ಸಮಾಜದ ಅಸ್ತಿತ್ವಕ್ಕೆ ಬಂದಿತ್ತು. ಕುಮ್ಮಾಲ್ ರಂಗರಾವ್, ರಾಮಕೃಷ್ಣ ಕಾರಂತ, ಡಾ. ಶಿವರಾಮ ಕಾರಂತ, ಕಮಲಭಾಯಿ ಚಟ್ಟೋಪಾಧ್ಯಾಯ, ಕಾರ್ನಾಡ್ ಸದಾಶಿವರಾವ್ ಮುಂತಾದವರು ಮಂಗಳೂರಿನಲ್ಲಿ ಆರ್ಯ ಸಮಾಜದ ಚಟುವಟಿಕೆ ನಡೆಸುತ್ತಿದ್ದರು. ಆ ನಂತರ 1966 ರಲ್ಲಿ ಅನಾಥ ಮಕ್ಕಳಿಗೂ ಒಂದು ಆಶ್ರಯ ತೆರೆಯುವ ಉದ್ದೇಶದಿಂದ ಪದವು ಹತ್ತಿರದ ಸನ್ಯಾಸಿಗುಡ್ಡದ ಈ 3.16 ಎಕರೆ ಭೂಮಿ ಖರೀದಿಯಾಯಿತು. ದಿವಂಗತ ವಿ. ಸಂಜೀವ ಕುದ್ವರವರು 25 ಸಾವಿರ, ರಾಮಕೃಷ್ಣ ವಲ್ಲ ಎಂಬುವರು 15 ಸಾವಿರ, ವನಮಾಲ್‌ದಾಸ್ 10 ಸಾವಿರ ರೂಪಾಯಿ ದೇಣಿಗೆ ನೀಡಿ ಬಸ್ತಿಕಾರ್ ಶ್ರೀಧರ್ ಶೆಣೈರವರಿಂದ ಭೂಮಿ ಖರೀದಿಸಿ ಶ್ರದ್ಧಾನಂದ ಆಶ್ರಮಕ್ಕೆ ದಾನವಾಗಿ ನೀಡಿದ್ದರು. ಅದರಲ್ಲೂ ಸಂಜೀವ ಕುದ್ವರವರು ಆ ಅನಾಥಶ್ರಮದಲ್ಲಿ 10 ವರ್ಷ ಮೇಲ್ಪಟ್ಟ ಬಾಲಿಕೆಯರಿಗಾಗಿ ಆಶ್ರಮ ಮಾಡಿದರೆ ಹಾಗೂ ಒಂದು ಕಿಂಡರ್ ಗಾರ್ಟನ್ ತೆರೆದರೆ ಇನ್ನೂ 75 ಸಾವಿರ ರೂ. ದಾನ ನೀಡುವುದಾಗಿ ಮಾತು ನೀಡಿದ್ದರು. ಅಲ್ಲಿಂದಾಚೆಗೆ ಶ್ರದ್ಧಾನಂದ ಆಶ್ರಮದ ಮೇಲ್ವಿಚಾರಣೆಯಲ್ಲಿ ಅನಾಥ ಶ್ರಮದ ಕೆಲಸ ಕಾರ್ಯಗಳು ಸುಗಮವಾಗಿಯೇ ಸಾಗುತ್ತಿದ್ದವು. ಶ್ರದ್ಧಾನಂದ ಆಶ್ರಮದ ಮಾತೃ ಸಂಸ್ಥೆಯಾಗಿದ್ದ ಆರ್ಯ ಸಮಾಜವೂ ತನ್ನ ಆಶಯ ಹಾಗೂ ನಿಯಮಾನುಸಾರ ಚಟುವಟಿಕೆ ನಡೆಸಿಕೊಂಡು ಹೋಗುತ್ತಿತ್ತು. ಹೀಗೆ ಎಲ್ಲವೂ ಸುಗಮವಾಗಿ ಸಾಗುತ್ತಿದ್ದಾಗ ರಾಘವೇಶ್ವರ ಭಾರತಿ ಎಂಬ ಖಳನಾಯಕನ ರಂಗಪ್ರವೇಶವಾಯಿತು.

ಅಕ್ರಮ ಡೀಲ್-ಗೋಲ್‌ಮಾಲ್

ರಾಮಚಂದ್ರಾಪುರ ಮಠದ ಅಧಿನಾಯಕ ರಾಘವೇಶ್ವರ ಭಾರತಿ ಸ್ವಾಮಿಯ ಭೂತಚೇಷ್ಟೆಗಳು ಒಂದೆರಡಲ್ಲ. ಇವನು ಗೋಕರ್ಣದ ದೇವಸ್ಥಾನ ನುಂಗಿ ಹಾಕಿದ್ದು, ರಾಮಚಂದ್ರಾಪುರ ಮಠದಲ್ಲಿ ಓದುತ್ತಿದ್ದ ಕೆಲ ಹವ್ಯಕ ಬಾಲೆಯರ ಮಾನಹರಣ ಮಾಡಲು ಯತ್ನಿಸಿದ ತನ್ನ ಬಾಮಮೈದುನ ಶರ್ಮನಿಗೆ ರಕ್ಷಣೆ ನೀಡಿದ್ದೆಲ್ಲಾ ರಾಜ್ಯದ ಜನತೆಗೆ ತಿಳಿದಿದೆ. ಇಷ್ಟು ಸಾಲದೆಂಬಂತೆ ಅಜ್ಜಂಪುರದ ಅಮೃತಮಹಲ್ ಕಾವಲ್‌ನ ಸಾವಿರಾರು ಎಕರೆ ಜಮೀನು ಕದಿಯಲು ಯತ್ನಿಸಿ ವಿಫಲನಾಗಿದ್ದ ಈ ಸ್ವಾಮಿ.

ಆದರೆ ಶ್ರದ್ಧಾನಂದ ಆಶ್ರಮದ ಭೂಗಳ್ಳತನ ಇದೆಲ್ಲಕ್ಕೂ ಹಿಂದಿನದು. ಈಗ ಬಯಲಿಗೆ ಬರುತ್ತಿದೆ ಅಷ್ಟೆ. ವಿನಾಯಿತೆಂದರೆ ತನ್ನ ರಾಮಚಂದ್ರಾಪುರ ಮಠದ ವ್ಯಾಪ್ತಿ, ಪ್ರಭಾವಗಳನ್ನು ಅರ್ಜೆಂಟಾಗಿ ವಿಸ್ತರಿಸಲು ಪ್ಲಾನ್ ಮಾಡುತ್ತಿದ್ದ ರಾಘವೇಶ ಮಂಗಳೂರು ನಗರದ ಹೃದಯ ಭಾಗದಲ್ಲಿದ್ದ ಶ್ರದ್ಧಾನಂದ ಆಶ್ರಮದ ಅನಾಥಾಲಯದ ಮೇಲೆ ತನ್ನ ಕಾಕದೃಷ್ಟಿ ಹಾಕಿದ. ಆಗ 2003 ರಲ್ಲಿ ಶ್ರದ್ಧಾನಂದ ಆಶ್ರಮವು ಎನ್.ಜಿ. ಮೋಹನ ಹಾಗೂ ವಿನಯಾ ಡಿ. ನಾಯ್ಕ ಎಂಬುವರ ಮೇಲ್ವಿಚಾರಣೆಯಲ್ಲಿತ್ತು. ಇವರಿಬ್ಬರೊಂದಿಗೆ ಅಕ್ರಮವಾಗಿ ಒಂದು ಡೀಲು ಕುದುರಿಸಿದ ರಾಘವೇಶ ಸ್ವಾಮಿ ತನ್ನ ಸಂಪೂರ್ಣ ಒಡೆತನದ ಧರ್ಮಚಕ್ರ ಎಂಬ ಹೆಸರಿನ ಒಂದು ಟ್ರಸ್ಟ್ ರಚಿಸಿ ವಿನಯಾಳೊಂದಿಗೆ ನೇರವಾಗಿ ಭೂಮಿ ಹಸ್ತಾಂತರದ ಒಂದು ಲೀಸ್ ಅಗ್ರಿಮೆಂಟ್ ಮಾಡಿಕೊಂಡುಬಿಟ್ಟ. 16.6.2003 ರಲ್ಲಿ ಆದ ಈ ಲೀಸ್ ಅಗ್ರಿಮೆಂಟ್‌ನಲ್ಲಿ ವಿನಯಾ ಡಿ. ನಾಯ್ಕ ಎಂಬ ಆಶ್ರಮದ ಯಕಶ್ಚಿತ್ ನೌಕರಿಗೆ ಜಮೀನು ತನ್ನಪ್ಪನ ಆಸ್ತಿಯೆಂಬಂತೆ 99 ವರ್ಷಗಳ ಲೀಸ್‌ಗೆ ರಾಘವೇಶನಿಗೆ ಬರೆದುಕೊಟ್ಟುಬಿಟ್ಟಳು. ಮಂಗಳೂರಿನ ಆರ್ಯ ಸಮಾಜದ ಅಧ್ಯಕ್ಷರು ಸೇರಿದಂತೆ ಇನ್ನು ಅನೇಕರು ಶ್ರದ್ಧಾನಂದ ಆಶ್ರಮದ ಟ್ರಸ್ಟಿಗಳಾಗಿದ್ದರೂ ಅವರ ಅಭಿಪ್ರಾಯವನ್ನು ರಾಘವೇಶನೂ ಕೇಳಲಿಲ್ಲ, ಇತ್ತ ವಿನಯಳೂ ಕೇರ್ ಮಾಡಲಿಲ್ಲ. ಈ ಗೋಲ್‌ಮಾಲ್ ಡೀಲ್‌ನಲ್ಲಿ ರಾಘವೇಶನು ವಿನಯಾಗಳಿಗೆ 20 ಲಕ್ಷ ರೂಪಾಯಿ ಕೊಡುವುದಾಗಿ ನಂಬಿಸಿ ಕೊನೆಗೆ ಜುಜುಬಿ 5 ಲಕ್ಷ ರೂ.ಗಳನ್ನು ಮೊದಲ ಕಂತಾಗಿ ಕೊಟ್ಟು ಅಲ್ಲೂ ವಂಚಿಸಿದ್ದ.

ಹೀಗೆ 30ಕೋಟಿ ರೂಪಾಯಿ ಬೆಲೆಯ 3.16 ಎಕರೆ ಜಮೀನು ರಾಘವೇಶನ ಆಸ್ತಿದಾಹಕ್ಕೆ ಬಲಿಯಾಯಿತು. ಆದರೆ ರಾಘವೇಶನಿಗೆ ಲೀಸ್ ಅಗ್ರಿಮೆಂಟ್ ಮಾಡಿಕೊಂಡಷ್ಟು ಸಲೀಸಾಗಿ ಉಳಿದ ಕೆಲಸಗಳು ಆಗಲಿಲ್ಲ. ವಿನಯಾ ಹಾಗೂ ರಾಘವೇಶನ ಧರ್ಮಚಕ್ರ ಟ್ರಸ್ಟಿನ ನಡುವೆ ಆಗಿದ್ದ ಭೂಪರಭಾರೆಯ 99 ವರ್ಷಗಳ ಗುತ್ತಿಗೆ ಒಪ್ಪಂದವನ್ನು ಮಂಗಳೂರಿನ ಸಬ್ ರಿಜಿಸ್ಟರ್ ಒಪ್ಪಲಿಲ್ಲ. ಏಕೆಂದರೆ 1966 ರಲ್ಲಿ ಶ್ರದ್ಧಾನಂದ ಆಶ್ರಮಕ್ಕೆ ಈ ಜಮೀನು ಖರೀದಿಸಿ ದಾನವಾಗಿ ನೀಡಿದ್ದ ದಾನಿಗಳ ಷರತ್ತು ಅದಕ್ಕೆ ಅಡ್ಡಿಯಾಗಿತ್ತು. ಆಶ್ರಮದ ಈ ಜಾಗವನ್ನು ಅನಾಥಾಲಯ ಹೊರತುಪಡಿಸಿ ಇನ್ನಿತರ ಬೇರೆ ಯಾವುದೇ ಉದ್ದೇಶಕ್ಕೆ ಬಳಸದಂತೆ ಅಥವಾ ಪರಭಾರೆ ಮಾಡದಂತೆ ದಾನಿಗಳು ಸ್ಪಷ್ಟವಾಗಿ ಷರತ್ತು ಹಾಕಿದ್ದರು. ಶ್ರದ್ಧಾನಂದ ಆಶ್ರಮದ ಟ್ರಸ್ಟಿನ ಬೈಲಾದಲ್ಲೂ ಈ ವಿಚಾರ ನಮೂದಾಗಿತ್ತು. ಹಾಗಾಗಿ ಸಬ್ ರಿಜಿಸ್ಟರ್ ಈ ಲೀಸ್ ಒಪ್ಪಂದಕ್ಕೆ ಮಾನ್ಯತೆ ನೀಡದೆ ತಿರಸ್ಕರಿಸಿ ರಿಜಿಸ್ಟ್ರೇಷನ್ ಪೆಂಡಿಂಗ್ ಇರಿಸಿದ್ದರು. ಅಲ್ಲಿ ಮುಖಭಂಗ ಅನುಭವಿಸಿದ ಈ ವಂಚಕ ಭೂಗಳ್ಳರು ಮಂಗಳೂರು ತಹಶೀಲ್ದಾರನಿಗೆ ಲಂಚ ತಿನ್ನಿಸಿ ಲೀಸ್ ಅಗ್ರಿಮೆಂಟಿಗೆ ಸಮ್ಮತಿ ಗಿಟ್ಟಿಸಿಕೊಂಡಿದ್ದರು.


ಈ ಮಧ್ಯೆ ಆರ್ಯ ಸಮಾಜದವರಿಗೆ ರಾಘವೇಶನ ಭೂಕಬಳಿಕೆ ವಿಚಾರ ಗೊತ್ತಾಗಿತ್ತು. ಸಮಾಜದ ಅಧ್ಯಕ್ಷರಾಗಿದ್ದ ನಾಗೇಶ್ ಅತ್ತಾವರ ಮಂಗಳೂರು ಉಪವಿಭಾಗಾಧಿಕಾರಿ ಪ್ರಭಾಕರ ಶರ್ಮರಿಗೆ ದೂರು ಕೊಟ್ಟರು. ಸಂಖ್ಯೆ LNACR 41/2003-04 ರಲ್ಲಿ ವಿಚಾರಣೆ ನಡೆಸಿದ ಎಸಿ ಕೋರ್ಟ್ ದಿನಾಂಕ 5.7.2004 ರಲ್ಲಿ ಅಂತಿಮ ತೀರ್ಪು ನೀಡಿ ಇಡೀ ಭೂಮಿ ಪರಭಾರೆಯನ್ನು ಆದರ ಲೀಸ್ ಒಪ್ಪಂದದೊಂದಿಗೆ ರದ್ದು ಮಾಡಿದ್ದರು. ಅಲ್ಲಿಗೆ ರಾಘವೇಶನ ಧರ್ಮಚಕ್ರ ಟ್ರಸ್ಟ್ ಹಾಗೂ ವಂಚಕಿ ವಿನಯಾ ಡಿ. ನಾಯ್ಕಳಿಗೆ ಸೋಲಾದಂತಾದರೂ ಈ ಭಂಡರು ಸುಮ್ಮನಾಗದೆ ಮತ್ತೆ ಕೋರ್ಟಿಗೆ ಹೋಗಿ ಎಸಿ ಆದೇಶಕ್ಕೆ ತಡೆಯಾಜ್ಞೆ ತಂದರು. ಈ ನಡುವೆ 2003 ರಲ್ಲೇ ರಾಘವೇಶ್ವರ ಸ್ವಾಮಿ ಅನಾಥಾಶ್ರಮದ ಜಾಗದಲ್ಲಿ ಭಾರತಿ ಕಾಲೇಜೆಂಬ ಬೋರ್ಡು ನೇತು ಹಾಕಿದ್ದ. ಒಂದರ ಹಿಂದೆ ಇನ್ನೊಂದರಂತೆ ಹೊಸ ಕಟ್ಟಡಗಳನ್ನು ಕಟ್ಟಿಸಲು ಶುರು ಮಾಡಿಬಿಟ್ಟ. ಇವನ ಈ ಭೂಗಳ್ಳತನಕ್ಕೆ ಹಾಗೂ ಅಕ್ರಮ ದಂಧೆಗೆ ಕರಾವಳಿಯ ಕೋಮುವಾದಿ ನಾಯಕರಾದ ನಾಗರಾಜ ಶೆಟ್ಟಿ, ಸಂಸದ ನಳಿನಿ ಕುಮಾರ್ ಕಟೀಲ್ ಹಾಗೂ ಈಗಿನ ಗೃಹ ಸಚಿವ ವಿ.ಎಸ್. ಆಚಾರ್ಯರ ಪೂರ್ಣ ಬೆಂಬಲ ಬೇರೆ ಸಿಕ್ಕಿತ್ತು.





ವಿದ್ಯಾದಾನದ ಮುಖವಾಡ


30 ಕೋಟಿ ರೂಪಾಯಿ ಬೆಲೆಯ ಕಂಡವರ ಜಮೀನಿಗೆ ಹೀಗೆ ಬೇಲಿ ಸುತ್ತಿದ ರಾಘವೇಶ ಸ್ವಾಮಿ ತೀರಾ ಇತ್ತೀಚೆಗೆ ಏಪ್ರಿಲ್ 4, 2010 ರಂದು ಭಾರತಿ ಕಾಲೇಜಿನ ಹೊಸ ಕಟ್ಟಡ ಉದ್ಘಾಟನೆ ಮಾಡಿದ್ದಾನೆ. ಶುರುವಾದಾಗ 11 ವಿದ್ಯಾರ್ಥಿಗಳಿದ್ದ ಈ ಭೂಕಳ್ಳರ ಕಾಲೇಜಿನಲ್ಲೀಗ ಇನ್ನೂರು ವಿದ್ಯಾರ್ಥಿಗಳಿದ್ದಾರೆ. ಈಗಿನ ಬಿಜೆಪಿ ಸರ್ಕಾರದ ಮಂತ್ರಿಗಳು ಎಂಥ ನಿರ್ಲಜ್ಜರೆಂದರೆ ಅಕ್ರಮ ಲೀಸು, ಕದ್ದ ಜಮೀನು, ಅನಾಥರಿಗೆ ವಂಚನೆ, ಹಗಲು ದರೋಡೆ ಎಂದೆಲ್ಲಾ ಗೊತ್ತಿದ್ದರೂ ಈಗಲೂ ರಾಘವೇಶನಿಗೆ ಅವರ ಬೆಂಬಲ. ಏಪ್ರಿಲ್ 4 ರಂದು ನಡೆದ ಹೊಸ ಕಟ್ಟಡದ ಉದ್ಘಾಟನೆಯಲ್ಲಿ ಗೃಹ ಸಚಿವ ಆಚಾರ್ಯ ಭಾಗವಹಿಸಿದ್ದಾರೆ. ಶ್ರದ್ಧಾನಂದ ಆಶ್ರಮದ ಭೂವಿವಾದ ಈಗಲೂ ಡಿಸಿ



ಸುಕುಮಾರ ಶೆಟ್ಟಿ



ಆರ್ಯ ಸಮಾಜದ ಲೋಕಾನಂದ



...ಶ್ರಮ ಭೂಕಬಳಿಕೆ ಬಗ್ಗೆ ಡಿಸಿ ಪತ್ರ

30 ಕೋಟಿ ರೂ. ಆಸ್ತಿ! ತಿಂಗಳಿಗೆ ಒಂದು ಸಾವಿರ ಬಾಡಿಗೆ!!

ನೆಂತೂರಿನ ಶ್ರದ್ಧಾನಂದ ಸೇವಾಶ್ರಮದ ಅಧ್ಯಕ್ಷನಾಗಿದ್ದ ಎನ್.ಜಿ. ಮೋಹನ್ ಹಾಗೂ ಕಾರ್ಯದರ್ಶಿ ವಿನಯಾ ಡಿ. ನಾಯ್ಕ ಎಂಬುವಳು ...ಘವೇಶ್ವರ ಭಾರತೀಯ ಧರ್ಮಚಕ್ರ ಟ್ರಸ್ಟಿನೊಂದಿಗೆ, ರಾತ್ರೋರಾತ್ರಿ ಮಾಡಿಕೊಂಡಿರುವ ಭೂಮಿ ಲೀಸ್ ಒಪ್ಪಂದವನ್ನು ಒಮ್ಮೆ ಓದಿ ನೋಡಿದರೆ ...ಸರೆಲ್ಲರ ಕಿರಾತಕ ಬುದ್ಧಿ ಏನೆಂದು ಅರ್ಥವಾಗಿಬಿಡುತ್ತದೆ. ಮಂಗಳೂರು ಸಬ್ ರಿಜಿಸ್ಟ್ರಾರ್ ಕಚೇರಿಯ ದಾಖಲೆ ಸಂಖ್ಯೆ 413-411 ವಾಲ್ಯೂಂ 88 ...ರ್ಟ್ II ದಿನಾಂಕ 5.7.2003 ನ್ನೂ ಓದಿ ನೋಡಿದರೆ ಹಗಲು ದರೋಡೆ ಅಂದರೆ ಏನೆಂದು ಗೊತ್ತಾಗುತ್ತದೆ.

ಈ ಮೋಹನ್ ಹಾಗೂ ವಿನಯಾ ವಂಚಕ ಜೋಡಿಯು "ನಾವು ಶ್ರದ್ಧಾನಂದ ಸೇವಾಶ್ರಮದ ಮುಖ್ಯಸ್ಥರಾಗಿದ್ದು ಅನಾಥಾಲಯ ನಡೆಸಲು ಶಕ್ತಿ ...ದ ಕಾರಣ ಅನಾಥರಕ್ಷಕರಾಗಿರುವ ರಾಘವೇಶ್ವರ ಭಾರತಿ ಸ್ವಾಮಿಯ ಧರ್ಮಚಕ್ರ ಟ್ರಸ್ಟಿಗೆ ಇಡೀ ಆಸ್ತಿ ಕಟ್ಟಡಗಳನ್ನು 99 ವರ್ಷ ಲೀಸ್‌ಗೆ ...ಚ್ಛೆಯಿಂದ ಬಿಟ್ಟುಕೊಡುತ್ತಿದ್ದೇವೆ" ಎಂದು ಬರೆದು ಕೊಟ್ಟಿದ್ದಾರೆ.

ಈ ಲೀಸ್ ಒಪ್ಪಂದದಲ್ಲಿ ಇನ್ನೂ ಹಲವು ವಂಚನೆಗಳಿವೆ.

1. ಶ್ರದ್ಧಾನಂದ ಸೇವಾಶ್ರಮವು ಆರ್ಯ ಸಮಾಜದ ಅಧೀನ ಸಂಸ್ಥೆಯಾಗಿದ್ದರೂ ರಾಘವೇಶ್ವರ ಸ್ವಾಮಿ ಅವರನ್ನು ನಿರ್ಲಕ್ಷಿಸಿ ವ್ಯವಹರಿಸಿದ್ದಾನೆ.

2. 30 ಕೋಟಿ ಬೆಲೆ ಬಾಳುವ ಆಸ್ತಿಯನ್ನು ಜುಜುಬಿ 20 ಲಕ್ಷ ರೂಪಾಯಿ ಠೇವಣಿ ಇರಿಸುವುದಾಗಿ ಹೇಳಿ ವಶಪಡಿಸಿಕೊಂಡಿದ್ದಾನೆ.

3. ಈ 20 ಲಕ್ಷ ಠೇವಣಿ ಹಣವನ್ನು ಸಹ 99 ವರ್ಷಗಳ ನಂತರ ಶ್ರದ್ಧಾನಂದ ಅನಾಥಶ್ರಮದವರು ವಾಪಸ್ ನೀಡಬೇಕೆಂದು ರಾಘವೇಶನೇ ಷರತ್ತು ...ಕಿದ್ದಾನೆ.

4. 10,500 ಚದರಡಿಯ, ಮಂಗಳೂರಿನ ಹೃದಯ ಭಾಗದಲ್ಲಿರುವ ಈ ಆಸ್ತಿಗೆ ರಾಘವೇಶನು ಕೊಡಲು ಒಪ್ಪಿರುವ ತಿಂಗಳ ಬಾಡಿಗೆ ಎಷ್ಟು ...ತ್ತೆ?

1 ಸಾವಿರ ರೂಪಾಯಿಗಳು.


5. 20 ಲಕ್ಷ ಭದ್ರತಾ ಠೇವಣಿ ಕೊಡುವುದಾಗಿ ನಂಬಿಸಿರುವ ರಾಘವೇಶ ಸ್ವಾಮಿ ಮೊದಲ ಕಂತಾಗಿ ಕೇವಲ 5 ಲಕ್ಷ ರೂ. ಮಾತ್ರ ಕೊಟ್ಟಿದ್ದಾನೆ. ...ರ್ಣಾಟಕ ಬ್ಯಾಂಕ್ ಪಿ.ಎಂ. ಹೈ ರಸ್ತೆ ಶಾಖೆ ಮಂಗಳೂರು ಚೆಕ್ ನಂ. 652299 ದಿ. 16.6.2003)

ಉಳಿದ ಹಣವನ್ನು ವರ್ಷಕ್ಕೆ 5 ಲಕ್ಷದಂತೆ ಪಾವತಿಸುವುದಾಗಿ ತೋರಿಸಿ ಅಲ್ಲೂ ವಂಚಿಸಿದ್ದಾನೆ. ಹೇಳಿದಂತೆ ಹಣ ನೀಡದೆ ಹೋದರೆ ವರ್ಷಕ್ಕೆ 6% ...ಜ್ಜಿ ತೆರಬೇಕೆಂಬ ಷರತ್ತು ಹಾಕಲಾಗಿದೆಯೇ ವಿನಃ ಲೀಸ್ ರದ್ದಾಗದಂತೆ ದಾಖಲೆ ಬರೆಸಿಕೊಳ್ಳಲಾಗಿದೆ.

6. ತಿಂಗಳ ಬಾಡಿಗೆ ಒಂದು ಸಾವಿರ ರೂಪಾಯಿಯನ್ನು ಸಹ ಸರಿಯಾಗಿ ಕೊಡದೆ ಹೋದರೆ ಆಗಲೂ ಲೀಸ್ ರದ್ದಾಗದಂತೆ ವ್ಯವಸ್ಥೆ ...ಡಿಕೊಳ್ಳಲಾಗಿದೆ. ಬಾಡಿಗೆ ಮೊತ್ತಕ್ಕೆ ವರ್ಷಕ್ಕೆ 12% ಬಡ್ಡಿ ಕೊಟ್ಟರೆ ಸಾಕೆಂದು ವಿನಯಾ ಹಾಗೂ ಮೋಹನ್ ಒಪ್ಪಿಕೊಂಡಿದ್ದಾರೆ.

-ಈ ಮೋಹನ್ ಹಾಗೂ ವಿನಯಾ ಎಂಬ ನೀಚರು ತಮ್ಮ ಸ್ವಂತ ಆಸ್ತಿಯನ್ನು ಈ ರೀತಿ ಕಂಡವರ ಪಾಲು ಮಾಡಲು ಸಿದ್ಧರಿದ್ದಾರಾ?

ಅನಾಥ ಮಕ್ಕಳ ತಲೆಯ ಮೇಲೆ ಕಲ್ಲು ಚಪ್ಪಡಿ ಎಳೆದು ರಾಘವೇಶ್ವರನ ಸಗಣಿ ತಿಂದು ಓಡಾಡುತ್ತಿರುವ ಈ ನೀಚರಿಗೆ ಕಾನೂನಿನ ಕಿಂಚಿತ್ತೂ ...ಮವಿಲ್ಲದಂತಾಗಿದೆ.




ಬರುತ್ತಿದ್ದಾರೆ ಸ್ವಾಮಿ ಅಗ್ನಿವೇಶ್!

ರಾಘವೇಶ್ವರ ಸ್ವಾಮಿಯ ಭೂಗಳ್ಳತನ ಹಾಗೂ ವಂಚನೆಯ ವಿರುದ್ಧ ಅಖಿಲ ಭಾರತ ಆರ್ಯ ಸಮಾಜದ ನಾಯಕ ಸ್ವಾಮಿ ಅಗ್ನಿವೇಶ್ ಸದ್ಯದಲ್ಲೇ ಹೋರಾಟಕ್ಕಿಳಿಯಲಿದ್ದಾರೆ.

ಫೈರ್ ಬ್ರಾಂಡ್ ಮಾತುಗಾರ ಹಾಗೂ ಹೋರಾಟಗಾರ ಸ್ವಾಮಿ ಅಗ್ನಿವೇಶ್‌ಗೆ ಶ್ರದ್ಧಾನಂದ ಆಶ್ರಮದ ಮೋಹನ್ ಹಾಗೂ ವಂಚಕಿ ವಿನಯಾಳ ಪಿತೂರಿಗಳು ತಡವಾಗಿ ಗೊತ್ತಾಗಿದೆ. ಆರ್ಯ ಸಮಾಜಕ್ಕೆ ವಿಶ್ವಾದ್ಯಂತ ಸಾವಿರಾರು ಶಾಖೆಗಳಿದ್ದು ಲಕ್ಷಾಂತರ ಅನುಯಾಯಿಗಳಿದ್ದಾರೆ. ಈಗಾಗಲೇ ರಾಘವೇಶನು ಮೋಸದಿಂದ ಆಶ್ರಮದ ಜಾಗ ಕದ್ದಿರುವ ವಿಚಾರ ಎಲ್ಲೆಡೆ ಪ್ರಚಾರವಾಗುತ್ತಿದೆ. ಕಾನೂನಿನ ದೃಷ್ಟಿಯಿಂದಲೂ ರಾಘವೇಶನಿಗೆ ಯಾವುದೇ ರಕ್ಷಣೆ ಇಲ್ಲ, RSS ನವರ ಬೆಂಬಲ ಹೊರತುಪಡಿಸಿದರೆ ರಾಘವೇಶನಿಗೆ ಸದ್ಯಕ್ಕೆ ಬೇರೇನೂ ಗತಿಯಿಲ್ಲದಂತಾಗಿದೆ.

ಸ್ವಾಮಿ ಅಗ್ನಿವೇಶ್ ಒಮ್ಮೆ ಖುದ್ದು ಮಂಗಳೂರಿಗೆ ಬಂದಿಳಿದರೆ ರಾಘವೇಶನ ಶ್ರೀಭಾರತಿ ಕಾಲೇಜಿನ ತಳಹದಿ ಕುಸಿದು ಬೀಳುವುದು ಖಚಿತ.



ಅನಾಥಾಶ್ರಮದಲ್ಲಿದ್ದ ಮಕ್ಕಳು...

...ರ್ಟ್ ಹಾಗೂ ಮಂಗಳೂರು ಸಿವಿಲ್ ...ರ್ಟ್‌ನಲ್ಲಿ ನಡೆಯುತ್ತಿದೆ. ಹೀಗಿರುವಾಗ ... ಸರ್ಕಾರದ ಪೊಲೀಸು ಮಂತ್ರಿಯೇ ...ಶ್ವನ ಜೊತೆ ವೇದಿಕೆ ಏರಿದರೆ ಏಸಿ ...-ಡಿಸಿ ಆಫೀಸಿನ ಸಿಬ್ಬಂದಿಗೆ ಯಾವ ...ಪು ಹೋಗುತ್ತದೆ. ಬಡವರ, ...ರ ಪಾಲಿನ ...ಶತಾಣವಾಗಿರುವ ಜಾಗವನ್ನು ... ಅಲ್ಲಿ ತನ್ನ ಆಸ್ತಿ ...ಂಡು, ಅದಕ್ಕೆ ವಿದ್ಯಾದಾನದ ...ವಾಡ ಹಾಕಿಕೊಂಡರೆ ಜನ ...ತ್ತಾರಾ? ನೂರಾರು ...ಮಕ್ಕಳಿಗೆ ಆಸರೆ ನೀಡಿದ್ದ ...ದ ಜಾಗ ಕಬಳಿಸಿ ಈಗ ...ೂ ಮಹಾನ್ ವಿದ್ಯಾದಾನಿಯಂತೆ ... ಕೊಡುತ್ತಿರುವ ರಾಘವೇಶ ...ಆರ್ಯ ಸಮಾಜದವರಿಗೆ ...ಳ ನೀಡಿ ಸುಮ್ಮನಾಗಿಸಲು ಹೊಸ ಕುತಂತ್ರ ...ಸಿದ್ದಾನೆ.

...ಆರ್ಯ ಸಮಾಜಕ್ಕೂ ಕಿರುಕುಳ

...ದ್ಧಾನಂದ ಆಶ್ರಮದ ಅನಾಥಾಲಯ ...ಳ್ಳಲು ಈಗ ಆರ್ಯ ಸಮಾಜದವರು ಅಧ್ಯಕ್ಷ ನಾಗೇಶ್ ಅತ್ತಾವರ ನೇತೃತ್ವದಲ್ಲಿ ಬಹಿರಂಗ ಹೋರಾಟಕ್ಕಿಳಿದಿದ್ದಾರೆ. ಆದರೆ ರಾಘವೇಶ ಸ್ವಾಮಿ ಇವರನ್ನು ಸದೆಬಡಿಯಲು ಸಾಮ, ದಾನ, ಭೇದ, ದಂಡ.... ಹೀಗೆ ಎಲ್ಲಾ ಕುತಂತ್ರಗಳನ್ನೂ ಬಳಸುತ್ತಿದ್ದಾನೆ. ಶ್ರದ್ಧಾನಂದ ಆಶ್ರಮದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಮೋಹನ್ ಹಾಗೂ ವಿನಯಾ ಡಿ. ನಾಯ್ಕರಿಗೆ ಲಂಚದ ಸಗಣಿ ತಿನ್ನಿಸಿದ್ದು ಒಂದು ಪಿತೂರಿಯಾದರೆ ಈಗ ಆರ್ಯ ಸಮಾಜದಲ್ಲೇ ಒಡಕು ತಂದಿದ್ದಾನೆ ರಾಘವೇಶ. ಆರ್ಯ ಸಮಾಜದ ಸುಕುಮಾರ ಶಾಸ್ತ್ರಿ ಎಂಬುವನು ಸಮಾಜದ ಮಾಜಿ ಅಧ್ಯಕ್ಷ ಕೃಷ್ಣ ಕಾಮತರ ನೆಂಟನಾಗಿದ್ದು ಈಗ ರಾಘವೇಶನ ವಂಚನೆಗೆ ಶಾಮೀಲಾಗಿದ್ದಾನೆ. ಆರ್ಯ ಸಮಾಜದ ಲೆಕ್ಕಪತ್ರಗಳು ಸರಿ ಇಲ್ಲವೆಂದು ಸಹಕಾರ ಸಂಘ ಇಲಾಖೆಗೆ ಸುಳ್ಳು ದೂರುಗಳನ್ನು ಕೊಟ್ಟು ಕಿರಿಕಿರಿ ಮಾಡಿದ್ದಾನೆ. ಆದರೆ ಆರ್ಯ ಸಮಾಜದವರು ನಿಯಮಾನುಸಾರ ಪ್ರತಿ ವರ್ಷ ಲೆಕ್ಕ ಪತ್ರ ಪರಿಶೋಧನೆ ಮಾಡಿಸಿ ಇಲಾಖೆಗೆ ವರದಿ ನೀಡಿ,



ವಂಚಕಿ ವಿನಯಾ



ಆರೆಸ್ಸೆಸ್ ಮುಖ್ಯಸ್ಥ ಜಯದೇವ

ಅಗತ್ಯ ಶುಲ್ಕವನ್ನು ಪಾವತಿಸಿ ರಸೀದಿ ಪಡೆದಿರುವುದರಿಂದ ತಕ್ಷಣದಲ್ಲಿ ಸಮಸ್ಯೆಯಾಗಿಲ್ಲ. ಅಸಲಿ ಸಮಸ್ಯೆ ಏನೆಂದರೆ ಆರ್ಯ ಸಮಾಜದ ದೆಹಲಿ ಕೇಂದ್ರ ಕಚೇರಿಯಲ್ಲೇ ಎರಡು ಮೂರು ಗುಂಪುಗಳಿದ್ದು ಒಳಜಗಳ ನಡೆಯುತ್ತಿದೆ. ಸ್ವಾಮಿ ಅಗ್ನಿವೇಶ್, ಮಿಠಾಯಿವಾಲಾ ಎಂಬ ಮುಂಬೈನವರದ್ದು ಎರಡು ಪ್ರಧಾನ ಗುಂಪುಗಳಿವೆ. ಜೊತೆಗೆ RSS ಕೋಮುವಾದಿಗಳ ದೇವರಸ್ನ ಆರ್ಯ ಎಂಬುವನ ಗುಂಪೂ ಒಂದಿದೆ. ಈ ಒಳಜಗಳಗಳಿಂದಾಗಿ ಮಂಗಳೂರಿನ ಆರ್ಯ ಸಮಾಜದ ಆಸ್ತಿ ಉಳಿಸಿಕೊಳ್ಳುವ ಬಗ್ಗೆ ಯಾರೂ ಗಮನಹರಿಸಿರಲಿಲ್ಲ. ಆದರೆ ಈಗ ಫೈರ್ ಬ್ರಾಂಡ್ ಸ್ವಾಮಿ ಅಗ್ನಿವೇಶ್ ರಾಘವೇಶನ ಭೂಕಬಳಿಕೆಯ ವಿರುದ್ಧ ನೇರ ಯುದ್ಧಕ್ಕಿಳಿಯಲು ತಯಾರಾಗುತ್ತಿದ್ದಾರೆ.

ಕೃಷಿ ಭೂಮಿಯಲ್ಲೇ ಕಾಲೇಜು!

ಕರ್ನಾಟಕ ಭೂ ಸುಧಾರಣ ಕಾಯ್ದೆಯ ಕಲಂ 79ಬಿ ಪ್ರಕಾರ ಭೂ ಪರಿವರ್ತನೆ ಮಾಡಿಸಿರದ ಕೃಷಿ ಭೂಮಿಯಲ್ಲಿ ಕೃಷಿಯೇತರ ಚಟುವಟಿಕೆ ನಡೆಸುವಂತಿಲ್ಲ. ಅದರಂತೆ ಪದವು ಏರಿಯಾದ ಸನ್ಯಾಸಿ ಗುಡ್ಡೆಯಲ್ಲಿದ್ದ ಶ್ರದ್ಧಾನಂದ ಆಶ್ರಮದ 3.16 ಎಕರೆ ಜಾಗ 1966 ರಲ್ಲಿ ಖರೀದಿಯಾದಾಗಿನಿಂದ ಭೂಪರಿವರ್ತನೆ ಆಗಿರಲಿಲ್ಲ. ರಾಘವೇಶನು 2003 ರಲ್ಲಿ ಅಕ್ರಮವಾಗಿ ಲೀಸ್ ಒಪ್ಪಂದ ಮಾಡಿಕೊಂಡ ಸಮಯದಲ್ಲೂ ಈ ಜಾಗ ಕೃಷಿ ಭೂಮಿಯಾಗಿಯೇ ಇತ್ತು. ಆದರೆ ರಾಘವೇಶ ಎಂತಾ ಖದೀಮನೆಂದರೆ ಲೀಸ್ ಬರೆಸಿಕೊಂಡ ಮರುದಿನವೇ ಮಂಗಳೂರು ತಹಶೀಲ್ದಾರ್‌ನಿಗೊಂದಷ್ಟು ಸಗಣಿ ತಿನ್ನಿಸಿ ಆ ಜಾಗ ಕೃಷಿ ಭೂಮಿಯೇ ಅಲ್ಲ ಎಂದು ಷರಾ ಬರೆಸಿಕೊಂಡುಬಿಟ್ಟಿದ್ದ. ಆದರೆ ಆಶ್ರಮದಲ್ಲಿ ಈಗಲೂ ಡಜನ್‌ಗಟ್ಟಲೆ ಹಣ್ಣಿನ ಮರಗಳಿವೆ. ಭೂಪರಿವರ್ತನೆಗಾಗಿ ಆರ್ಯ ಸಮಾಜದವರೇ ರೆವಿನ್ಯೂ ಅಧಿಕಾರಿಗಳಿಗೆ ಅರ್ಜಿ ನೀಡಿರುವುದಕ್ಕೂ ದಾಖಲೆಗಳಿವೆ. ಇವತ್ತಿನ ಲೇಟೆಸ್ಟ್ ಸ್ಥಿತಿಗತಿ ಏನೆಂದರೆ ರಾಘವೇಶ್ವರ ಸ್ವಾಮಿಯ ಭಾರತಿ ಕಾಲೇಜು ಕೃಷಿ ಭೂಮಿಯಲ್ಲಿ ನಡೆಯುತ್ತಿದೆ ಮತ್ತು ಇವನಿಗೆ ಈ ರಾಜ್ಯದ ಯಾವ ಕಾನೂನುಗಳೂ ಅನ್ವಯವಾಗುವುದಿಲ್ಲ.

ಹೇಗಿದೆ ಬಜೆಪಿ ಆಡಳಿತ.

ವಂಚನೆಯೇ ನಿತ್ಯಕಾಯಕ

ಕರ್ನಾಟಕದ ಮಲೆನಾಡು ಹಾಗೂ ಕರಾವಳಿ ಪ್ರಾಂತ್ಯಗಳಲ್ಲಿ ಕೃಷಿ ಮಾಡಿಕೊಂಡು ಬದುಕುತ್ತಿರುವ ಹವ್ಯಕ ಬ್ರಾಹ್ಮಣ ಸಮುದಾಯದವರು ಮೂಲತಃ ಶ್ರಮಜೀವಿಗಳು. ಘನತೆ ಹಾಗೂ ಆತ್ಮಗೌರವದಿಂದ ಬದುಕುತ್ತಿರುವ ಜನ. ಆದರೆ ದುರದೃಷ್ಟವಶಾತ್ ರಾಘವೇಶ್ವರ ಭಾರತಿ ಸ್ವಾಮಿ ಈ ಸಮುದಾಯಕ್ಕೆ ಸೇರಿರುವ ರಾಮಚಂದ್ರಾಪುರ ಮಠದ ಧರ್ಮಗುರುವಾಗಿ ಬಂದನಂತರ ಒಂದರ ಹಿಂದೆ ಇನ್ನೊಂದರಂತೆ ಹಗರಣಗಳು ಬಯಲಿಗೆ ಬರುತ್ತಿವೆ. ಆಡಳಿತಾರೂಢ ಬಜೆಪಿ ಸರ್ಕಾರವೂ ರಾಘವೇಶ ಸ್ವಾಮಿಯ ಅನ್ಯಾಯಗಳಿಗೆ ನಿರಂತರ ಬೆಂಬಲ ನೀಡುತ್ತಲೇ ಹೋಗುತ್ತಿದೆ. ತನ್ನದಲ್ಲದ ಆಸ್ತಿ, ಹಣಕ್ಕೆ ಆಸೆ ಪಡುವುದು ರಾಘವೇಶನ ಚಾಳಿಯಾಗಿ ಹೋಗಿದೆ. ವಂಚನೆಯೇ ಈತನ ನಿತ್ಯಕಾಯಕದಂತಾಗಿದೆ.




ರಾಘವೇಶನ ಚೇಲಾ ಮೋಹನ್

ಅನಾಥ ಮಕ್ಕಳಿಗೆಂದು ಯಾರೋ ಸಹೃದಯಿಗಳು ದಾನ ನೀಡಿದ್ದ ಭೂಮಿಯನ್ನು ಕದ್ದು ಅಲ್ಲಿ ತನ್ನ ದಂಧೆ ಶುರು ಮಾಡಿರುವ ರಾಘವೇಶ ಸ್ವಾಮಿಯ ವರ್ತನೆ ಅಸಹ್ಯವಾಗಿದೆ. ಇದೊಂದು ಕ್ರಿಮಿನಲ್ ಕೃತ್ಯ.

ತನ್ನ ರಾಜಕೀಯ ಪ್ರಭಾವ, ಜಾತಿ ಬಲ, ಹಣಬಲ ತೋರಿಸಿ ನೂರಾರು ಅನಾಥ ಮಕ್ಕಳಿಗೆ ಆಶ್ರಯತಾಣವಾಗಿದ್ದ ಜಾಗವನ್ನು ಮೋಸದಿಂದ ಕಬಳಿಸಿರುವ ರಾಘವೇಶನಿಗೆ ಹವ್ಯಕ ಸಮುದಾಯದವರೇ ಛೀಮಾರಿ ಹಾಕಬೇಕು.

• ಪಾರ್ವತೀಶ
bparvateesha@gmail.com




ಜೈಲು ಶಿಕ್ಷೆಗೆ ಹೆದರಿದರೇ ಶ್ರೀನಿವಾಸಮೂರ್ತಿ?

ಇತ್ತೀಚೆಗೆ ಹಿರಿಯ ಕಲಾವಿದ ಶ್ರೀನಿವಾಸಮೂರ್ತಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದು ನಿಜವಾ? ಅದು ಶ್ರೀನಿವಾಸ ಮೂರ್ತಿ ಅವರ ವಿರುದ್ಧ ಕೋರ್ಟ್ ತೀರ್ಪು ನೀಡಿದ್ದಕ್ಕಾ? ಅಥವಾ ಮಾಧ್ಯಮದವರು ಅವರನ್ನು ಕೆಟ್ಟದಾಗಿ ಬಿಂಬಿಸಿದ್ದಕ್ಕಾ? ಇಂಥ ಪ್ರಶ್ನೆಗಳೇ ಈಗ ಎಲ್ಲೆಲ್ಲೂ ಕೇಳಿಬರುತ್ತಿವೆ.

ಶ್ರೀನಿವಾಸಮೂರ್ತಿ ನಿಜಕ್ಕೂ ಆತ್ಮಹತ್ಯೆಗೆ ಪ್ರಯತ್ನಿಸಿದರೋ ಇಲ್ಲವೋ ಆದರೆ ಅವರು ಯಾವತ್ತೂ ಇಲ್ಲದಷ್ಟು ಖಿನ್ನತೆಗೆ ಒಳಗಾಗಿರುವುದಂತೂ ನಿಜ.

ಹಳೇ ಕೇಸೊಂದರ ತೀರ್ಪು ಈಗ ಹೊರಬಿದ್ದು ಶ್ರೀನಿವಾಸಮೂರ್ತಿ ಅವರಿಗೆ ಮೂರು ವರ್ಷಗಳ ಕಾಲ ಜೈಲು ಶಿಕ್ಷೆ ಎಂದು ಕೋರ್ಟ್ ತೀರ್ಪು ನೀಡಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ವಿಚಾರವನ್ನು ಪ್ರಸಾರ ಮಾಡಿದ ಕೆಲವು ಟಿವಿ ಮಾಧ್ಯಮಗಳು ಮೂರ್ತಿಯವರನ್ನು ವಂಚಕನೆಂಬಂತೆ ಬಿಂಬಿಸಿದ್ದವು. 'ಟಿವಿ ಒಂಭತ್ತು' ಅಂತೂ ಶ್ರೀನಿವಾಸಮೂರ್ತಿಯವರು ವಿಲನ್ ಎಂಬಂತೆ ಪ್ರೋಮೋಗಳನ್ನು ನೀಡಿತು. ಕೆಲ ಲೋಕಲ್ ಪತ್ರಿಕೆಗಳೂ ಇವರನ್ನು ಸರಗಳ್ಳನಿಗಿಂತಲೂ ಕೆಟ್ಟದಾಗಿ ವರ್ಣಿಸಿದವು. ಇದೆಲ್ಲದರಿಂದ ನೊಂದ ಶ್ರೀನಿವಾಸಮೂರ್ತಿ ತೀರಾ ಡಿಪ್ರೆಷನ್‌ಗೆ ಒಳಗಾಗಿದ್ದಾರೆ.





ಇದೇನು ಕೇಸು?

1987ರಲ್ಲಿ 'ಬಾಳ ನೌಕೆ' ಎಂಬ ಸಿನಿಮಾವೊಂದು ತೆರೆಗೆ ಬಂದಿತ್ತು. ಈ ಚಿತ್ರವನ್ನು ಶಾಂತಾರಾಮ್ ಮತ್ತು ಮುರಳೀಕೃಷ್ಣ ಸಹೋದರರು 'ಕೆಎನ್‌ಆರ್‌ಟಿ' ಲಾಂಛನದಲ್ಲಿ ನಿರ್ಮಿಸಿದ್ದರು. ರೂಪಾದೇವಿ ನಾಯಕಿಯಾಗಿದ್ದ ಈ ಸಿನಿಮಾದಲ್ಲಿ ಸ್ವತಃ ಶ್ರೀನಿವಾಸಮೂರ್ತಿಯವರೇ ಹೀರೋ ಆಗಿ ನಟಿಸಿದ್ದರು.

ಆ ಸಿನಿಮಾ ಚಿತ್ರೀಕರಣ ಪೂರ್ಣಗೊಂಡು ಆರೇಳು ತಿಂಗಳು ಕಳೆದರೂ ಬಿಡುಗಡೆಯ ಭಾಗ್ಯವನ್ನೇ ಪಡೆಯಲಿಲ್ಲ, ಯಾಕೆಂದರೆ ಆ ಸಿನಿಮಾಕ್ಕೆ ಫೈನಾನ್ಸ್ ಮಾಡಿದ್ದ ಮುಂಬೈನ ಮಾರ್ವಾಡಿಯೊಬ್ಬ ಕಟ್ಟಡದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡುಬಿಟ್ಟ. ಶ್ರೀನಿವಾಸಮೂರ್ತಿ ಅವರಿಗೆ ಆಗ ಹೀರೋ ಇಮೇಜ್ ಇಲ್ಲವಾದ್ದರಿಂದ ಶಾಂತಾರಾಮ್ ಮತ್ತು ಮುರಳೀಕೃಷ್ಣ ಸಹೋದರರಿಗೆ ಸಿನಿಮಾ ಬಿಡುಗಡೆ ಮಾಡಲು ಮೂರು ಕಾಸೂ ಹುಟ್ಟಲಿಲ್ಲ.

ಆಗ ಶ್ರೀನಿವಾಸಮೂರ್ತಿ ಅವರ ಬಳಿ ಬಂದ ನಿರ್ಮಾಪಕರಿಬ್ಬರೂ "ಈ ಸಿನಿಮಾಗೆ ಖರ್ಚಾಗಿರುವ ನಾಲ್ಕು ಲಕ್ಷ ರೂಪಾಯಿ ನೀಡಿ ನೀವೇ ಚಿತ್ರದ ಹಕ್ಕು ಪಡೆದುಬಿಡಿ" ಎಂದು ಗೋಳಾಡಿದರು. ಮೂರ್ತಿ ಅವರಿಗೂ ತಾನೇ ಹೀರೋ ಆಗಿರುವ ಸಿನಿಮಾವನ್ನು ಯಾಕೆ ಹಾಳು ಮಾಡಬೇಕು ಎನಿಸಿತು. ತಕ್ಷಣ ತನ್ನ ಸ್ನೇಹಿತ ಜಫ್ರುಲ್ಲಾ ಜೊತೆ ಸೇರಿ ಈ ಸಿನಿಮಾವನ್ನು ಖರೀದಿಸುವ ಮನಸು ಮಾಡಿದರು. ನಾಲ್ಕು ಲಕ್ಷ ರೂಪಾಯಿಗೆ ಆ ಸಿನಿಮಾವನ್ನು ಕೊಂಡುಕೊಳ್ಳುವ ಒಪ್ಪಂದ ಮಾಡಿಕೊಂಡ ಮೂರ್ತಿಯವರು ಎರಡೂವರೆ ಲಕ್ಷದಷ್ಟು ಮುಂಗಡ ಹಣವನ್ನು ನೀಡಿ ಅದನ್ನು ಬಿಡುಗಡೆ ಕೂಡ ಮಾಡಿದರು. ಸಿನಿಮಾ ತೀರಾ ಹಿಟ್ ಅಗಲಿಲ್ಲವಾದರೂ ಸಾಧಾರಣ ಯಶಸ್ಸು ಕಂಡಿತ್ತು.

ಈ ನಡುವೆ ಮೂರ್ತಿ ಸಂಪಂಗಿ ರಾಮನಗರದಿಂದ ಕತ್ರಿಗುಪ್ಪೆಗೆ ಮನೆ ಬದಲಾಯಿಸುವ ಸಂದರ್ಭದಲ್ಲಿ ಆ ಸಿನಿಮಾ ಖರೀದಿಯ ಒರಿಜಿನಲ್ ಅಗ್ರಿಮೆಂಟ್ ಪ್ರತಿಗಳನ್ನು ಕಳೆದುಕೊಂಡರು. ಅದರ ಜೆರಾಕ್ಸ್ ಪ್ರತಿ ಶ್ರೀನಿವಾಸಮೂರ್ತಿ ಬಳಿ ಇತ್ತಾದರೂ ಅದೀಗ ನ್ಯಾಯಾಲಯದ ಕಣ್ಣಲ್ಲಿ 'ಫೋರ್ಜರಿ' ಯಾಗಿದೆ. ಡಾಕ್ಯುಮೆಂಟುಗಳನ್ನು ಜೋಪಾನ ಮಾಡಿಕೊಳ್ಳದ ಸಣ್ಣ ಅಚಾತುರ್ಯವೇ ಈಗ ಇಷ್ಟು ದೊಡ್ಡದಾಗಿ ಬೆಳೆದು ಜೈಲು ಶಿಕ್ಷೆಯ ಮಟ್ಟಕ್ಕೆ ಬಂದು ನಿಂತಿದೆ.

ಈ ಕೇಸಿಗೆ ಸಂಬಂಧಪಟ್ಟಂತೆ 2007ರ ಜುಲೈ 6ರಂದು ಶ್ರೀನಿವಾಸಮೂರ್ತಿ ದೋಷಿ ಎಂದು ಆರನೇ ಎಸಿಎಂಎಂ ನ್ಯಾಯಾಲಯ ಮೂರು ವರ್ಷಗಳ ಶಿಕ್ಷೆ ವಿಧಿಸಿ ತೀರ್ಪು ನೀಡಿತ್ತು. ಆದರೆ ಮೂರ್ತಿ ಈ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದರು. ಆದರೆ ಸೆಷನ್ಸ್ ನ್ಯಾಯಾಲಯ ಕೂಡಾ ಈಗ ಶ್ರೀನಿವಾಸ ಮೂರ್ತಿಯವರನ್ನೇ 'ದೋಷಿ'ಯನ್ನಾಗಿಸಿದೆ.

ಹೀಗಾಗಿ ಶ್ರೀನಿವಾಸಮೂರ್ತಿ ಸೆಷನ್ಸ್ ನ್ಯಾಯಾಲಯದ ತೀರ್ಪನ್ನೂ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರುವುದೊಂದೇ ಅವರ ಮುಂದಿರುವ ದಾರಿ.





ಜಗ್ಗೇಶ್ ಸೋದರರ ಮಧ್ಯಸ್ಥಿಕೆ

ಜಗ್ಗೇಶ್ ತನ್ನೆಲ್ಲಾ ಚೇಷ್ಟೆಗಳ, ಯಡವಟ್ಟುಗಳ ಮಧ್ಯೆಯೂ ಮಾನವೀಯ ವಿಚಾರಗಳಲ್ಲಿ ಕೆಲವೊಮ್ಮೆ ಗಮನ ಸೆಳೆದುಬಿಡುತ್ತಾರೆ. ಕೆಲ ತಿಂಗಳ ಹಿಂದೆ ಹಿರಿಯ ನಟ ಆರ್.ಎನ್. ಸುದರ್ಶನ್ ಮತ್ತು ಶೈಲಶ್ರೀ ದಂಪತಿಗಳು ಆರ್ಥಿಕ ಸಂಕಷ್ಟದಲ್ಲಿ ಸಿಲುಕಿದ್ದಾರೆ ಎಂದು ತಿಳಿದ ಜಗ್ಗೇಶ್ ಚೆನ್ನೈನಲ್ಲಿ ನೆಲೆಸಿದ್ದ ಆ ದಂಪತಿಗಳನ್ನು ಬೆಂಗಳೂರಿಗೆ ಕರೆಸಿಕೊಂಡು, ತಮ್ಮ ಮನೆ ಎದುರಿಗೇ ಬಾಡಿಗೆ ಮನೆ ಹಿಡಿದು ಅದಕ್ಕೆ ಅಡ್ವಾನ್ಸ್ ಹಣವನ್ನೂ ನೀಡಿ ನೆರವಾಗಿದ್ದರು. ಈಗ ಶ್ರೀನಿವಾಸಮೂರ್ತಿ ವಿಚಾರದಲ್ಲೂ ಜಗ್ಗೇಶ್ ಮತ್ತು ಕೋಮಲ್ ಸೋದರರು ಮಧ್ಯಸ್ಥಿಕೆ ವಹಿಸಲು ಮುಂದಾಗಿದ್ದಾರೆ.

ಕೋರ್ಟ್ ತೀರ್ಪು ಹೊರಬಂದ ಮೇಲೆ ಮೂರ್ತಿ ಅವರು ಖಿನ್ನತೆಗೆ ಒಳಗಾಗಿದ್ದಾರೆ ಎಂಬ ವಿಚಾರ ತಿಳಿಯುತ್ತಿದ್ದಂತೇ ಅವರಿಗೆ ಧೈರ್ಯ ತುಂಬಿದ್ದಾರೆ. ದಿನಕ್ಕೆರಡು ಬಾರಿ ಫೋನು ಮಾಡಿ ಅವರ ಕ್ಷೇಮ ವಿಚಾರಿಸುತ್ತಿದ್ದಾರೆ. ಮಾತ್ರವಲ್ಲ, ಮುರಳೀ ಕೃಷ್ಣರೊಂದಿಗೆ ರಾಜಿ ಮಾಡಿಸಿ, ಈ ವಿವಾದವನ್ನು ಇತ್ಯರ್ಥಗೊಳಿಸುವ ಎಲ್ಲ ಪ್ರಯತ್ನಗಳನ್ನೂ ನಡೆಸುತ್ತಿದ್ದಾರೆ.

ನಾಲಿಗೆ ಸ್ವಲ್ಪ ಉದ್ದ ಅಷ್ಟೇ

ಹಾಗೆ ನೋಡಿದರೆ, ಶ್ರೀನಿವಾಸಮೂರ್ತಿ ಮೊದಲಿನಿಂದಲೂ ನೇರ ಮತ್ತು ನಿಷ್ಠುರತೆಗೇ ಹೆಸರಾದವರು. ಚಿತ್ರರಂಗದ ಯಾವ ದೊಡ್ಡ ಹೀರೋನೇ ಆಗಲಿ ಅ... ವಿರುದ್ಧ ಗುಡುಗಿ ಕೆಲವೊಮ್ಮೆ ವಿವಾದ ಸೃಷ್ಟಿಸಿಕೊಳ... ನೇರವಂತಿಕೆ ಮೂರ್ತಿಗಳದ್ದು.

1982ರಲ್ಲಿ ತೆರೆಕಂಡ 'ಕವಿರತ್ನ ಕಾಳಿದಾಸ' ಚಿತ್ರ... ಭೋಜರಾಜನ ಪಾತ್ರದಲ್ಲಿ ಕಾಣಿಸಿಕೊಂ... ಶ್ರೀನಿವಾಸಮೂರ್ತಿ ರಾಜ್ ಅವರಿಗೇ ಪೈಪೋ... ನೀಡುವಂತೆ ಅಭಿನಯಿಸಿದ್ದರು. ಅಂ... ಶ್ರೀನಿವಾಸಮೂರ್ತಿಯವರ ನಟನೆಯನ್ನು ವ... ಪತ್ರಿಕೆಯವರು ಕೂಡಾ ಸಿಕ್ಕಾಪಟ್ಟೆ ಹೊಗಳಿದ್ದ... ಶ್ರೀನಿವಾಸಮೂರ್ತಿ ಎಲ್ಲಿ ಡಾ. ರಾಜ್‌ರನ್ನೇ ಓವರ್ ಟೇ... ಮಾಡಿಬಿಡುತ್ತಾರೋ ಎಂಬ ಕಾರಣಕ್ಕೇ ಚಿತ್ರರಂಗದ... ಇವರನ್ನು ಸೈಡ್‌ಲೈನ್ ಮಾಡಲಾಯಿತು. "ಎಲ್ಲಿ ನಾ... ಹೆಸರು ಮಾಡಿಬಿಡುತ್ತೇನೋ ಎಂದು ರಾಜ್ ಅವರ... ಸುತ್ತುವರೆದಿದ್ದ ಭಟ್ಟಂಗಿಗಳು ನನಗೆ ಅವರೊಟ್ಟಿಗೆ ನಟಿಸ... ಅವಕಾಶವನ್ನೇ ನೀಡಲಿಲ್ಲ" ಎಂದು ಶ್ರೀನಿವಾಸಮೂ... ಎಷ್ಟೋ ಬಾರಿ ಬಹಿರಂಗವಾಗೇ ಹೇಳಿಕೊಂಡಿದ್ದಾರೆ.

ಇನ್ನು ರವಿಚಂದ್ರನ್‌ರಂಥ ಹೀರೋ ವಿರುದ್ಧ... ಮೂರ್ತಿ ಸಮರ ಸಾರಿದ್ದರು. ಎರ... ವರ್ಷಗಳ ಹಿಂದೆ ಶ್ರೀನಿವಾಸಮೂರ್ತಿ ಅ... ಮಗ ನವೀನ್‌ಕೃಷ್ಣನ 'ಧಿಮಾ... ಆರಂಭವಾಯಿತಲ್ಲಾ? ಆ ಸಂದರ್ಭದಲ್ಲಿ ಚಿ... ಮುಹೂರ್ತಕ್ಕೆ ರವಿಚಂದ್ರನ್‌ರನ್ನು ಆಹ್ವಾನಿ... ಸ್ವತಃ ನವೀನ್‌ಕೃಷ್ಣನೇ ರವಿ ಮನೆಗೆ ಹೋಗಿ... ಆಗ ರವಿಚಂದ್ರನ್ "ಏನಯ್ಯಾ ಇಷ್ಟು ... ನಿಮ್ಮಪ್ಪನದ್ದಾಯಿತು. ಈಗ ನಿನ್ನ 'ಧಿಮಾ... ಶುರುನಾ?" ಎಂದುಬಿಟ್ಟಿದ್ದರು. ಈ ವಿ... ಮೂರ್ತಿಗಳ ಕಿವಿಗೆ ಬಿದ್ದು ಅದನ್ನು ದೊ... ರಂಪ ಮಾಡಿದ್ದರು. ಚಾನೆಲ್‌ವೊಂದ... ಸಂದರ್ಶನ ಕೊಟ್ಟು ರವಿಚಂದ್ರನ್ ವಿ... ಢಮಾಢಮ್ ಎಂದು ಬಾಂಬ್ ಹಾಕಿದ್ದ... ಆ ಪಾಟ ಮುಂಗೋಪ ಮೂರ್ತಿಗಳ...

ಯಾವ ರವಿಯ ವಿರುದ್ಧ ಮೂ... ಕಿಡಿಕಾರಿದ್ದರೋ ಅದೇ ರವಿಚಂದ್ರನ್ ... ಮೂರ್ತಿಗಳ ಪರವಾದ ಸಾಂತ್ವನ... ಮಾತನಾಡಿದ್ದಾರೆ. ಮೊನ್ನೆ ದಿನ 'ವಿನಾ... ಗೆಳೆಯರ ಬಳಗ' ಚಿತ್ರದ ಮುಹೂರ್ತ... ಬಂದಿದ್ದ ರವಿಚಂದ್ರನ್ ಆ ಚಿತ್ರದಲ್ಲಿ ನಾಯಕನ... ನಟಿಸುತ್ತಿರುವ ನವೀನ್‌ನನ್ನು ಹತ್ತಿರಕ್ಕೆ ಕರೆದು "ನಿಮ್ಮಪ್ಪ... ಏನೂ ತಲೆ ಕೆಡಿಸಿಕೊಳ್ಳಬೇಡ ಅಂಥ ಹೇಳು. ಅವ... ಏನೂ ಆಗಲ್ಲ. ನನ್ನ 'ಯುದ್ಧಕಾಂಡ' ಚಿತ್ರದಲ್ಲಿ ಅವ... ಜೈಲಿನಿಂದ ಬಿಡುಗಡೆ ಆಗೋದೇ ಇಲ್ಲ, ಆದರೆ ರಿಯ... ಲೈಫ್‌ನಲ್ಲಿ ಹಾಗೆ ಆಗೋದು ಬೇಡ. ನಿಮ್ಮಪ್ಪನ ಸಮ... ಬೇಗ ಬಗೆಹರಿಯಲಿ" ಎಂದು ಆಶಿಸಿದರು.

ಶ್ರೀನಿವಾಸಮೂರ್ತಿ ಒಬ್ಬ ಅದ್ಭುತ ನಟ ಎಂಬುದ... ಎರಡು ಮಾತಿಲ್ಲ. ಇವತ್ತಿಗೂ ಕೂಡಾ ಈಶ್ವರನ ಪಾತ್ರ... ಡಾ. ರಾಜ್‌ರನ್ನು ಬಿಟ್ಟರೆ, ಶ್ರೀನಿವಾಸಮೂರ್ತಿ ಅವ... ಮಾತ್ರ ಕಲ್ಪಿಸಿಕೊಳ್ಳಲು ಸಾಧ್ಯ. ಕಿರುತೆರೆಯಲ್ಲಿ 'ಅಣ್ಣ ಬಸ... ಎಂಬ ಧಾರಾವಾಹಿಯನ್ನು ತಾವೇ ನಿರ್ದೇಶಿಸಿ ಬಸವ...

ಇಂಡಿಯನ್ ರೀಡರ್‌ಶಿಪ್ ಸರ್ವೆ

ಪ್ರಜಾವಾಣಿ Up ವಿಜಯ ಕರ್ನಾಟಕ Down

ಕರ್ನಾಟಕದ ದಿನಪತ್ರಿಕಾ ಪ್ರಪಂಚದ ಏರಿಳಿತಗಳ ಒಂದು ಪ್ರೊಗ್ರೆಸ್ ರಿಪೋರ್ಟ್ ಇದು.

ಮೊನ್ನೆ ಮೇ ತಿಂಗಳ ಮೊದಲ ವಾರದಲ್ಲಿ ಇಂಡಿಯನ್ ರೀಡರ್‌ಶಿಪ್‌ನ 2010 ರ ಸಾಲಿನ ಮೊದಲ ತ್ರೈಮಾಸಿಕ ವರದಿ (quarter-1) ಪ್ರಕಟಗೊಂಡಿದೆ. ಈ ತರದ ಸರ್ವೆ-ಸಮೀಕ್ಷಾ ವರದಿಗಳು ಜನಸಾಮಾನ್ಯರಿಗೆ ಸುಲಭ ಲಭ್ಯವಲ್ಲ. ಇದೇನಿದ್ದರೂ ಸದಸ್ಯ ಪತ್ರಿಕಾ ಸಂಸ್ಥೆಗಳಿಗೆ, ಜಾಹೀರಾತುದಾರರಿಗೆ, ಕಾರ್ಪೊರೇಟ್ ಕಂಪನಿಗಳಿಗೆ, ಜಾಹೀರಾತು ಏಜನ್ಸಿಗಳಿಗಷ್ಟೇ ಸಿಗಬಲ್ಲ ಮಾಹಿತಿ. ಅದಿರಲಿ ಬಿಡಿ. ಈಗ 2010 ರ ಮೊದಲ ಮೂರು ತಿಂಗಳಲ್ಲಿ ಕರ್ನಾಟಕದ ಪ್ರಮುಖ ದಿನಪತ್ರಿಕೆಗಳು ಎಷ್ಟು ಹೊಸ ಓದುಗರನ್ನು ಗಳಿಸಿಕೊಂಡಿವೆ. ಅದೆಷ್ಟು ಓದುಗರನ್ನು ಕಳೆದುಕೊಂಡಿವೆ ಎಂಬ ಮಾಹಿತಿಗಳು ನಿಜಕ್ಕೂ ಇಂಟರೆಸ್ಟಿಂಗ್ ಆಗಿವೆ.

ಸಾರಾಂಶದಲ್ಲಿ ಹೇಳಬೇಕೆಂದರೆ ಪ್ರಜಾವಾಣಿ ಬಹಳಷ್ಟು ಪಡೆದುಕೊಂಡಿದ್ದರೆ ಇನ್ನೊಂದು ಪ್ರಮುಖ ಡೈಲಿ ವಿಜಯ ಕರ್ನಾಟಕ ಕೆಲವಷ್ಟನ್ನು ಕಳೆದುಕೊಂಡಿದೆ. ಈ ಮದಗಜಗಳ ಕಾದಾಟದ ಮಧ್ಯೆ ಕನ್ನಡ ಪ್ರಭ ಸ್ವಲ್ಪ ಪ್ರಸಾರ ಹೆಚ್ಚಿಸಿಕೊಂಡಿದೆ.

ಇಲ್ಲಿ ಹೇಳಲಾಗುವ ಅಂಕಿಅಂಶಗಳು ಆಯಾ ಪತ್ರಿಕೆಗಳು ಪ್ರಸಾರ ಸಂಖ್ಯೆಯದ್ದಲ್ಲ, ಬದಲಾಗಿ ಪತ್ರಿಕೆಯ ಒಂದು ಪ್ರತಿಯನ್ನು ಎಷ್ಟು ಮಂದಿ (ಕುಟುಂಬದ ಸದಸ್ಯರು, ಕಚೇರಿ ನೌಕರರು, ಇತ್ಯಾದಿ) ಓದುತ್ತಾರೆ ಎಂಬುದನ್ನು ಆಧರಿಸಿ ಈ `Readership survey' ನಡೆಯುತ್ತದೆ.

ಆ ಲೆಕ್ಕದಲ್ಲಿ ಈಗಲೂ ಕರ್ನಾಟಕದ ನಂಬರ್ ಒನ್ ದಿನಪತ್ರಿಕೆ ಎಂದರೆ ವಿಜಯ ಕರ್ನಾಟಕವೆ. ಅದರ ಒಟ್ಟು ಓದುಗ ಸಮೂಹ 78.94 ಲಕ್ಷದಷ್ಟಿದೆ. (ನೆನಪಿಡಿ ಇದು ಪ್ರಸಾರ ಸಂಖ್ಯೆಯಲ್ಲ, ಬದಲಾಗಿ ಓದುಗರ ಸಂಖ್ಯೆ). ಆದರೆ ಕಳೆದ 3 ತಿಂಗಳಿಂದೀಚೆಗೆ ವಿಜಯ ಕರ್ನಾಟಕ ರಾಜ್ಯಾದ್ಯಂತ ಒಟ್ಟಾರೆ 3.30 ಲಕ್ಷ ಓದುಗರನ್ನು ದೂರ ಮಾಡಿಕೊಂಡಿದೆ. ಕಳೆದ 6 ತಿಂಗಳಿಂದ ಹೀಗೆ ವಿಜಯ ಕರ್ನಾಟಕವನ್ನು ಓದಲು ನಿಲ್ಲಿಸಿರುವ ಓದುಗರ ಸಂಖ್ಯೆ 8 ಲಕ್ಷದಷ್ಟಿದೆ ಎಂದು ಈ ಸಮೀಕ್ಷೆ ಹೇಳಿದೆ. ಬೆಂಗಳೂರು ನಗರದ ಸಮೀಕ್ಷೆಯ ಪ್ರಕಾರ ಈಗಲೂ ವಿಜಯ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ನಗರದಲ್ಲಿ ವಿಕ ಓದುಗ ಸಮೂಹ 12.43 ಲಕ್ಷದಷ್ಟಿದ್ದು ಕಳೆದ 6 ತಿಂಗಳಲ್ಲಿ 2 ಲಕ್ಷ ಜನ ವಿಕ ಓದುವುದನ್ನು ನಿಲ್ಲಿಸಿದ್ದಾರಂತೆ.

ಇದರ ನೇರ ಲಾಭವಾಗಿರುವುದು ಪ್ರಜಾವಾಣಿಗೆ ಹಾಗೂ ಸ್ವಲ್ಪ ಮಟ್ಟಿಗೆ ಕನ್ನಡ ಪ್ರಭಾಗೆ.

ರಾಜ್ಯದ 2 ನೇ ಅತ್ಯಧಿಕ ಪ್ರಸಾರವಿರುವ ಪ್ರಜಾವಾಣಿಗೆ 57.73 ಲಕ್ಷ ಓದುಗ ಸಮೂಹವಿದೆ. 2009 ರಲ್ಲಿ ಪ್ರಜಾವಾಣಿ 1.41 ಲಕ್ಷ ಓದುಗರನ್ನು ಕಳೆದುಕೊಂಡಿತ್ತು, ಆದರೆ 2010 ರ ಮೊದಲ ಸುತ್ತಿನ ಸಮೀಕ್ಷೆಯಲ್ಲಿ 3.26 ಲಕ್ಷ ಓದುಗರು ಪ್ರಜಾವಾಣಿ ಬಳಗ ಸೇರಿದ್ದಾರೆ. ಬೆಂಗಳೂರು ನಗರದಲ್ಲೂ ಸಹ ಪ್ರಜಾವಾಣಿ ಹೊಸ ಓದುಗರನ್ನು ಗಳಿಸಿದೆ. ಈಗ ಬೆಂಗಳೂರಿನಲ್ಲಿ ಅದಕ್ಕೆ 9.75 ಲಕ್ಷ ಓದುಗರಿದ್ದಾರೆ. ಕಳೆದ ವರ್ಷ 1.35 ಲಕ್ಷ ಓದುಗ... ಕಳೆದುಕೊಂಡಿದ್ದ ಪ್ರಜಾವಾಣಿ 2010 ರಲ್ಲಿ 88 ಸಾವಿರ ಓದುಗರ ವಿಶ್ವಾಸ... ಮರಳಿ ಪಡೆದಿದೆ.

ಉಳಿದಂತೆ ಸಂಯುಕ್ತ ಕರ್ನಾಟಕ, ಕನ್ನಡ ಪ್ರಭ, ಸಂಜೆವಾಣಿ, ಉದಯವಾಣಿ... ಅಂಕಿಅಂಶಗಳೂ ಆಸಕ್ತಿದಾಯಕವಾಗಿದೆ.

ರಾಜ್ಯದ ಮೂರನೆ ಅತ್ಯಧಿಕ ಪ್ರಸಾರದ ಸಂಯುಕ್ತ ಕರ್ನಾಟಕಕ್ಕೆ ಒ... 23.54 ಲಕ್ಷ ಓದುಗರಿದ್ದಾರೆ. ಆದರೆ ಇತ್ತೀಚೆಗೆ 3.17 ಲಕ್ಷ ಜನ ಸಂಯು... ಕರ್ನಾಟಕ ಓದುತ್ತಿಲ್ಲ. ಬೆಂಗಳೂರಿನಲ್ಲಂತೂ ಸಂಯುಕ್ತ ಕರ್ನಾಟಕ ಲೆಕ್ಕಕ್ಕೇ ...

ನಾಲ್ಕನೇ ಸ್ಥಾನದಲ್ಲಿರುವ ಕನ್ನಡ ಪ್ರಭಕ್ಕೆ 20.74 ಲಕ್ಷ ಓದುಗರಿದ್ದಾರೆ ... ಈ ಸಮೀಕ್ಷೆ ಹೇಳಿದೆ. 2009 ರಲ್ಲಿ 71 ಸಾವಿರ ಓದುಗರನ್ನು ಕಳೆದುಕೊಂ... ಕನ್ನಡ ಪ್ರಭ 2010 ನೇ ಸಾಲಿನ ಮೊದಲ ಮೂರು ತಿಂಗಳಲ್ಲಿ 35 ಸ...

ಸರ್ವೆ ಆಚೆಗಿನ ಸಂಗತಿಗಳು


ಕರ್ನಾಟಕದ ಪ್ರಭಾವಿ ದಿನಪತ್ರಿಕೆಗಳೆಂದರೆ ಪ್ರಜಾವಾಣಿ ಹಾಗೂ ವಿಜಯ ಕರ್ನಾಟಕಗಳೆಂಬುದು ನಿಜ ಹೌ... ಆದರೆ ಈ ಪತ್ರಿಕೆಗಳ ಪರಂಪರೆ, ಹಿನ್ನೆಲೆ ಹಾಗೂ ಸೈದ್ಧಾಂತಿಕ ಅಥವಾ ಸಮುದಾಯಿಕ ಒಲವು-ನಿಲುವುಗ... ಸಂಪೂರ್ಣ ಬೇರೆ-ಬೇರೆಯಾಗಿದೆ. ಈ ಪತ್ರಿಕೆಗಳ ಓದುಗ ಸಮೂಹ ಯಾರೆಂಬುದನ್ನು ನಿರ್ಧರಿಸುವ ಅಂಶಗ... ಇವೇನೆ. ಪ್ರಜಾವಾಣಿ ಮೊದಲಿನಿಂದಲೂ ಒಂದು ಘನ ಗಾಂಭೀರ್ಯದ ನಿಲುವು ಹಾಗು ಭಾಷಾ ಬಳಕೆಯ ಪ... ಯಾಗಿ ಸಾಗಿ ಬಂದಿದೆ. ಆದರೆ ವಿಜಯ ಕರ್ನಾಟಕದ ರಂಗ ಪ್ರವೇಶದ ನಂತರ ಅದರ marketing strateg... ವೇಗ, ಭಾಷೆ, ವಿತರಣಾ ಜಾಲದೆದುರು ಪ್ರಜಾವಾಣಿ ಕೆಲಕಾಲ ಧೃತಿಗೆಟ್ಟಂತೆ ಕಾಣುತ್ತಿತ್ತು, ಆದರೆ ಓದುಗ ಮಾತ್ರ ಪ್ರ... ವಾಣಿಯಿಂದ ದೂರವಾಗಿರಲಿಲ್ಲ, ಕೆಲವು ಸಂದರ್ಭ, ಸನ್ನಿವೇಶ ಹೊರತುಪಡಿಸಿ ಪ್ರಜಾವಾಣಿ ಎಂದೂ ತನ್ನ ನೈಜ ವ್ಯಕ್ತಿತ್ವ, integrity ಯನ್ನು ಕಳೆ... ಕೊಳ್ಳಲಿಲ್ಲ, ಪ್ರಜಾವಾಣಿಯ ವಾಚಕರ ವಾಣಿ ಇವತ್ತಿಗೂ ಒಂದು ಅದ್ಭುತ. ಅದರ ಸಂಪಾದಕೀಯಕ್ಕೆ ಸಮನಾದ ಇನ್ನೊಂದು ಬರಹ ರಾಜ್ಯದ ಬೇ... ಯಾವುದೇ ದಿನಪತ್ರಿಕೆಗಳಲ್ಲೂ ಕಾಣಸಿಗುವುದಿಲ್ಲ, ವಿಜಯ ಕರ್ನಾಟಕದ ಸಿನಿಮಾ ವಿಮರ್ಶೆ ಜಾಳುಜಾಳು ಸುಳ್ಳುಗಳಿಂದ ತುಂಬಿದ್ದರೆ ಪ್ರಜಾವಾಣಿ... ಸಿನಿಮಾ ವಿಮರ್ಶೆಗಳೇ ಒಂದು ಸೃಜನಶೀಲ ಕಿರು ಲೇಖನಗಳಂತೆ ಇರುತ್ತವೆ. ಆದರೆ ಸಾಹಿತ್ಯದ ಪುಟಗಳ ವಿಚಾರಕ್ಕೆ ಬಂದರೆ ಪ್ರಜಾವಾಣಿಗಿಂತ ವಿಜ... ಕರ್ನಾಟಕ ಮತ್ತು ಕನ್ನಡ ಪ್ರಭಗಳು ಲವಲವಿಕೆಯ ಭಾಷೆ, ವಿನ್ಯಾಸ ಹಾಗೂ ಹೊಸ ಲಯ ಪಡೆದುಕೊಂಡಿವೆ. ಇನ್ನು ರಾಜ್ಯದ ದಿನನಿತ್ಯದ ವಿದ್ಯಮಾನವಾಗಿರ... ಹಿಂದೂ ಕೋಮುವಾದದ ವಿಚಾರಕ್ಕೆ ಬಂದರೆ ವಿಜಯ ಕರ್ನಾಟಕ ಏಕದಂ RSS ಪಾಂಪ್ಲೆಟ್. ಕನ್ನಡ ಪ್ರಭ ಸಹ ಸೆಕ್ಯೂಲರ್ ಆಶಯಗಳ ಪರ ಒಲವಿರ... ತರಹ ಭಾಸವಾಗುವುದಿಲ್ಲ, ಆತುರಗೆಟ್ಟು ಅದ್ಯಾರೋ 'ಬುರ್ಖಾ' ವಿಚಾರ ಬರೆದು ಜನರ ಸಾವಿಗೆ ಕಾರಣವಾಗುವುದು ಕನ್ನಡಪ್ರಭದಲ್ಲಿ ಮಾತ್ರ ಸಾಧ...

ಮತ್ತೊಂದೆಡೆ ಪ್ರಜಾವಾಣಿಗೆ ಸೆಕ್ಯುಲರ್ ಪರಂಪರೆ ಇದೆಯಾದರೂ ಈಗಿನ ಸುದ್ದಿ ಮುಖ್ಯಸ್ಥ ಪದ್ಮರಾಜರಿಗೆ ಅದೇ ಒಂಥರಾ ಅಲರ್ಜಿ. ಅದೇ... ಏನೋ ಪದ್ಮರಾಜ ದಂಡಾವತಿ 'ಕೋಮು ಸೌಹಾರ್ದ ವೇದಿಕೆಯ, ಚಟುವಟಿಕೆ ಹಾಗೂ ಸುದ್ದಿಗಳಿಗೆ ಹೆಚ್ಚು ಮಹತ್ವ ನೀಡಕೂಡದೆಂದು' ಇತ್ತೀಚೆಗೆ ಎ... ಜಿಲ್ಲಾ ಬ್ಯುರೋಗಳಿಗೆ ಸುತ್ತೋಲೆ ಕಳಿಸಿದ್ದಾರಂತೆ. ಹಾರ್ಡ್‌ಕೋರ್ ಕೋಮುವಾದಿ ಎನಿಸಿಕೊಂಡಿರುವ ಸಂಯುಕ್ತ ಕರ್ನಾಟಕ, ಉದಯವಾಣಿಗಳೂ ಇ... ನಿಲುವು ತಳೆದಿಲ್ಲ, Infact ವಿಜಯ ಕರ್ನಾಟಕ, ಕನ್ನಡ ಪ್ರಭಗಳೂ 'ಸೆಕ್ಯುಲರ್‌ವಾದಿಗಳ ಸುದ್ದಿ ಪ್ರಕಟಿಸದಂತೆ 'ತನ್ನ ಸಿಬ್ಬಂದಿಗೆ ಆದೇಶ ನೀಡಿಲ್ಲ, ಆ... ಪ್ರಜಾವಾಣಿಯ ಒಬ್ಬ ಪದ್ಮರಾಜರು ಮಾತ್ರ ಇಂತಹ ಸುಗ್ರೀವಾಜ್ಞೆ ಹೊರಡಿಸಿದ್ದಾರೆ ಎಂದರೆ ಯಾರಾದರು ನಂಬುತ್ತಾರಾ? ಆದರೆ ಇದು ಸತ್ಯ!

ನಲ್ಲಿ ಅದ್ವಿತೀಯವಾಗಿ ನಟಿಸಿದ್ದವರು ಶ್ರೀನಿವಾಸ ...ರ್ತಿ. ಇಂಥ ಮೂರ್ತಿಗಳು ಕಾರಣವಲ್ಲದ ಕಾರಣಗಳಿಗೆ ... ಸಣ್ಣ ವಿಚಾರಗಳನ್ನೂ ಕೆಲವೊಮ್ಮೆ ಹಿಗ್ಗಿಸುತ್ತಾರೆ. ...ಗಿ "ಮೂರ್ತಿಗಳಿಗೆ ನಾಲಿಗೆ ಸ್ವಲ್ಪ ಉದ್ದ" ಎನ್ನುವುದು ... ಅವರ ಮನೆಯವರೂ ತಿಳಿದಿರುವ ಸತ್ಯವಾಗಿದೆ.

ನಷ್ಟವಾಗಿದ್ದು ನಿಜ

...ಶ್ರೀನಿವಾಸಮೂರ್ತಿಯಂತೆಯೇ ಅವರ ಮಗ ...ನ್‌ಕೃಷ್ಣ ಸಹ ಪ್ರತಿಭಾವಂತ ಕಲಾವಿದ. 'ಶ್ರೀರಸ್ತು ...ಮಸ್ತು' ಚಿತ್ರದಲ್ಲಿ ಈ ತಂದೆ ಮಗ ಅಣ್ಣ-ತಮ್ಮಂದಿರಾಗಿ ... ಎಲ್ಲರ ಗಮನ ಸೆಳೆದಿದ್ದರು. ಹಲವಾರು ಚಿತ್ರಗಳಲ್ಲಿ ...ನೇ ನಾಯಕನಟನಾಗಿ ಕಾಣಿಸಿರುವ ನವೀನ್‌ಕೃಷ್ಣನನ್ನು ...ರ್ಣ ಪ್ರಮಾಣದ ನಾಯಕನಾಗಿಸುವ ಉದ್ದೇಶದಿಂದ ...ವಾಸಮೂರ್ತಿ ಮತ್ತು ಅವರ ಪತ್ನಿ ಪುಷ್ಪಾ ಸೇರಿ ...ಕು' ಚಿತ್ರವನ್ನು ನಿರ್ಮಿಸಿದರು. ಈ ಸಿನಿಮಾದ ...ಒಳ್ಳೆ ಪ್ರತಿಕ್ರಿಯೆ ಬಂತಾದರೂ ...ಫೀಸ್‌ನಲ್ಲಿ ಮುಗ್ಗರಿಸಿತು. ...ರ್ತಿ ದಂಪತಿಗಳಿಗೆ ಒಂದೂ ...ಕೋಟಿ ರೂಪಾಯಿ ನಷ್ಟ ...ಯಿತು.



ಪುಷ್ಪ

...ಲವೇ ವರ್ಷಗಳ ಹಿಂದಷ್ಟೇ ... ಮಗಳು ತೀರಿಕೊಂಡಳು. ...ಕಾಲದ ಹೃದಯಬೇನೆ ... ಆಕೆಯ ಜೀವವನ್ನೇ ...ಶನ ತೆಗೆದುಕೊಂಡಿತ್ತು. ...ಟ್ಟು ಮಗಳಿಗೆ ಇತ್ತೀಚೆಗಷ್ಟೇ ...ವೆ ಮಾಡಿಕೊಟ್ಟಿದ್ದಾರೆ. ... ತೀರಿಕೊಂಡಮೇಲೆ ಕತ್ರಿಗುಪ್ಪೆಯಲ್ಲಿದ್ದ ಮನೆಯ ... ಸರಿಯಿಲ್ಲ ಎಂಬ ಕಾರಣಕ್ಕೆ ಪದ್ಮನಾಭನಗರದಲ್ಲಿ ...ದು ಸಾವಿರ ರೂಪಾಯಿಯ ಬಾಡಿಗೆ ಮನೆಯಲ್ಲಿ ...ರ್ತಿ ಕುಟುಂಬ ವಾಸ್ತವ್ಯ ಹೂಡಿದೆ. ಅವರ ಪತ್ನಿ ... ಮೂರ್ತಿ ಇವತ್ತಿಗೂ ಬ್ಯೂಟಿ ಪಾರ್ಲರ್ ನಡೆಸು...

...ನಿವಾಸಮೂರ್ತಿ ಕನ್ನಡದಲ್ಲಿ ಒಳ್ಳೇ ಪೇಮೆಂಟು ...ಯುವ ಪೋಷಕ ಕಲಾವಿದ. ಮಗ ನವೀನ್‌ಕೃಷ್ಣ ...ೋ ಆಗಿ ಇನ್ನೂ ನೆಲೆನಿಂತಿಲ್ಲವಾದರೂ, ಖಾಲಿ ...ವಂತ ನಟನೂ ಅಲ್ಲ. ಹೀಗಿರುವಾಗ ...ಯವರಿಗೆ ಆರ್ಥಿಕ ಸಂಕಷ್ಟ, ಬಡತನವೆಂಬುದೇನೂ ...ಮೂರ್ತಿಗಳ ಕಾಂಟ್ರ್ಯಾಕ್ಟುಗಳೂ ಏನು ಕಡಿಮೆಯಿಲ್ಲ. ...ಮನೆಯ ಸಭೆಸಮಾರಂಭಗಳಿಗೆ ರಜನೀಕಾಂತ್‌ರಂಥ ...ೂಡ ಬಂದು ಹೋಗುತ್ತಿರುತ್ತಾರೆ.

...ದರೆ ಇಂದು ಬಹಳ ಹಿಂದೆ ಮಾಡಿದ ...ತನವೊಂದು ಮೂರ್ತಿಗಳ ಬೆನ್ನೇರಿ ಪೀಡೆಯಂತೆ ...ತ್ತದೆ. ಎಲ್ಲ ಸಮಸ್ಯೆಗಳಿಂದಲೂ ಈ ಕಲಾವಿದ ...ಾಗಲಿ, ಆತ್ಮಹತ್ಯೆಯಂಥ ಹತಾಷ ಪ್ರಯತ್ನಕ್ಕೆ ...ವಾಗದಿರಲಿ...

• ಅರುಣ್ ಕುಮಾರ್.ಜಿ
arunodayagc@gmail.com

...ರನ್ನು ಮರಳಿ ಪಡೆದು ಮುನ್ನಡೆದಿದೆ. ಈಗ ...ನೇ ಸ್ಥಾನದ ಸಂಯುಕ್ತ ಕರ್ನಾಟಕ ಮತ್ತು ... ಸ್ಥಾನದ ಕನ್ನಡ ಪ್ರಭ ನಡುವಿನ ಅಂತರ ...ಕಡಿಮೆಯಾಗಿದೆ. ಸಂಯುಕ್ತ ಕರ್ನಾಟಕವು RSSನ ...ದಂತೆ, ಪಂಚಾಂಗ, ಹಿಂದೂ ಧರ್ಮ, ...ಹಿತರ ಕೈಪಿಡಿಯಾಗಿ ಇದೇ ರೀತಿ ಮುಂದು... ಮರಣ ಹೊಂದುವ ದಿನಗಳು ದೂರವಿರಲಾರದು ...ತ್ತದೆ. ಇನ್ನುಳಿದಂತೆ ಉದಯವಾಣಿಗೆ 20.56 ...ದುಗ ಸಮೂಹವಿದ್ದರೆ, ಆರನೇ ಸ್ಥಾನದಲ್ಲಿರುವ ... ಆಫ್ ಇಂಡಿಯಾ 9.25 ಲಕ್ಷ ಓದುಗರನ್ನು ...ದೆ. ಬಹಳ ಸಂತೋಷದ ಸಂಗತಿ ಏನೆಂದರೆ 1 ...ದುಗರು ಟೈಮ್ಸ್ ಓದುವುದನ್ನೂ ನಿಲ್ಲಿಸಿ ...ವೇಕಶಾಲಿಗಳೆಂಬುದನ್ನು ಸಾಬೀತು ಮಾಡಿದ್ದಾರೆ.

...ನೇ ಸ್ಥಾನದಲ್ಲಿರುವ ಸಂಜೆವಾಣಿಗೆ 7.74 ಲಕ್ಷ ...ರಿದ್ದಾರೆ. ಅವರ ಪೈಕಿ ಬೆಂಗಳೂರಿನಲ್ಲೇ ...ದ್ದಾರೆ, ಆಶ್ಚರ್ಯ ಏನೆಂದರೆ ಡೆಕನ್ ಹೆರಾಲ್ಡ್‌ನ ... ಈ ಸಾಲಿನಲ್ಲಿ ಹೆರಾಲ್ಡ್ 66 ಸಾವಿರ ಓದುಗರನ್ನು ... ಮಾಡಿಕೊಂಡಿದೆ.

...ಗಳೂರು ಹೊರತುಪಡಿಸಿ ಕರ್ನಾಟಕದಲ್ಲೆಡೆ ... ಆಫ್ ಇಂಡಿಯಾಗಿಂತ ಜಾಸ್ತಿ ಪ್ರಸಾರವಿರುವ ...ಗೆ ಒಟ್ಟಾರೆ 7.60 ಲಕ್ಷ ಓದುಗರಿದ್ದಾರಂತೆ.

...ನ್ನೊಂದೆರಡು ಅಚ್ಚರಿಯ ಸಂಗತಿಗಳೆಂದರೆ ತರುಣ ... ಎಂಬ ಮರಾಠಿ ಪತ್ರಿಕೆ ಒಂಭತ್ತನೆಯ ಅಧಿಕ... ಪತ್ರಿಕೆ ಎನಿಸಿಕೊಂಡಿದೆ. ತಮಿಳಿನ ದಿನತಂತಿಗೆ ... ಸ್ಥಾನ. ಉಳಿದಂತೆ 'ದಿ ಹಿಂದೂ' 3.40 ಲಕ್ಷ ...ೊಂದಿಗೆ ಯಾವುದೇ ಏರಿಳಿತಗಳಿಲ್ಲದೆ ಸಾಗುತ್ತಿದೆ. ...ನ್ ಕ್ರಾನಿಕಲ್ ಹತ್ತನೇ ಸ್ಥಾನ ಗಳಿಸಿ 1.12 ...ದುಗರನ್ನು ಹೊಂದಿದೆ.

• ಪಾರ್ವತೀಶ

ಉತ್ತರ ಕನ್ನಡ ಪಂಚಾಯತಿ ಫಲಿತಾಂಶ


ನೆಲೆಯಿಲ್ಲದ ಬಿಜೆಪಿ; ಕಳೆಯಿಲ್ಲದ ಕಾಂಗ್ರೆಸ್

ಉತ್ತರ ಕನ್ನಡದ ಹಳ್ಳಿ ಹಣಾಹಣಿಯ ಅಖಾಡದಿಂದ ಎರಡು ಸ್ಪಷ್ಟ ಫಲಿತಾಂಶ ಹೊರಬಂದಿದೆ. ಒಂದು, ಜಿಲ್ಲೆಯಲ್ಲಿ ಮತಾಂಧ ಬೊಗಳೆದಾಸರೆ ತುಂಬಿರುವ ಬಿಜೆಪಿಗೆ ಬೆಲೆಯಿಲ್ಲ, ಇನ್ನೊಂದು, ಕಾಂಗ್ರೆಸ್ಸೇ ಬೆಟರ್ ಎಂಬ ಭಾವನೆ ಜನರಿಗಿದೆ ಎಂಬುದು. ಹಾಗೆ ನೋಡಿದರೆ ಬಿಜೆಪಿಗೆ ಉತ್ತರ ಕನ್ನಡದಲ್ಲಿ ನೆಲೆಯಿಲ್ಲವೆಂಬುದು ಕಳೆದ ಲೋಕಸಭೆಯ ಚುನಾವಣೆಯಲ್ಲೇ ಖಾತ್ರಿಯಾಗಿತ್ತು. ಕಾಸು ಮತ್ತು ಕೋಮು ಕಲಹ ದಾಹದ ದಗಲ್ಬಾಜಿ ಸಂಸದ ಅನಂತಕುಮಾರ್ ಹೆಗಡೆ ಯಾನೆ ಅನಂತ್ಮಾಣಿಗೆ ಪಾರ್ಲಿಮೆಂಟ್ ಚುನಾವಣೆಯಲ್ಲಿ ಕಾಂಗ್ರೆಸ್ ಎದುರಾಳಿಗಿಂತ ಕಡಿಮೆ ಮತ ಬಿದ್ದಿತ್ತು. ಆತ ಗೆದ್ದಿದ್ದೇ ಕೆನರಾ ಕ್ಷೇತ್ರದಲ್ಲಿರುವ ಬೆಳಗಾವಿಯ ಖಾನ್‌ಪುರ ಮತ್ತು ಕಿತ್ತೂರಲ್ಲಿ ಬಂದ ಹೆಚ್ಚುವರಿ ಮತದಿಂದಷ್ಟೇ!

ಜಿಲ್ಲೆಯ ಮಂದಿಗೆ ಬೂಟಾಟಿಕೆಯ ಬಿಜೆಪಿಯೆಂದರೆ ಆಗದೆಂಬುದು ತೀರಾ ಈಚೆಗಷ್ಟೇ ಸ್ಥಳೀಯ ಸಂಸ್ಥೆಯಿಂದ ವಿಧಾನಪರಿಷತ್ತಿಗಾದ ಚುನಾವಣೆಯಲ್ಲಿ ಸಾಬೀತಾಗಿತ್ತು. ಆಡಳಿತ ಪಕ್ಷವಾದ್ದರಿಂದ, ಸಂಪನ್ಮೂಲ ತುಂಬಿರುವುದರಿಂದ ಗೆಲ್ಲುವುದು ಗ್ಯಾರಂಟಿಯೆಂದು ಸಾಕ್ಷಾತ್ ಜಿಲ್ಲಾಧ್ಯಕ್ಷ ವಿನೋದ್ ಪ್ರಭು ಎಂಬ ಪಕ್ಕಾ ಚೆಡ್ಡಿ ಗಿರಾಕಿಯನ್ನೇ ಬಿಜೆಪಿ ಭೂಪರು ಕಣಕ್ಕಿಳಿಸಿದ್ದರು. ಆದರಾತನಿಗೆ ಪಕ್ಷೇತರ ಅಭ್ಯರ್ಥಿಯಷ್ಟು ಓಟು ಗಿಟ್ಟಿಸಲಾಗದೆ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದ! ಕಾಂಗ್ರೆಸ್ ಗೆದ್ದಿತ್ತು.

ಈಗಷ್ಟೇ ಮುಗಿದಿರುವ ಗ್ರಾಸ್ ರೂಟ್ ಲೆವೆಲ್ ರಾಜಕಾರಣದ ಸಮರದಲ್ಲೂ ಬಿಜೆಪಿ ಸೋತು ಮಕಾಡೆ ಬಿದ್ದುಕೊಂಡಿದೆ. ಇಬ್ಬಿಬ್ಬರು ಮಂತ್ರಿಗಳು, ಒಬ್ಬ ಹಿಂದೂ ರಾಷ್ಟ್ರ ಕಟ್ಟುವ ಕೂಗಾಟದ ಸಂಸದ, ಇನ್ನೊಬ್ಬ ಶಾಸಕನ ನಡೆ-ನುಡಿಗಳು ನಂಬಿಕೆಗೆ ಅರ್ಹವಲ್ಲವೆಂದು ಜನ ಅವರ ಬಿಜೆಪಿಯನ್ನು ತಿರಸ್ಕರಿಸಿಬಿಟ್ಟಿದೆ. ಈ ಮಂತ್ರಿ-ಸಂಸದನ ನುಂಗಾಟ, ಭಂಡಾಟದಿಂದ ಹಳ್ಳಿಗಾಡಿನ ಮಂದಿ ರೋಸತ್ತು ಹೋಗಿರುವುದಕ್ಕೆ ಈ ಪಂಚಾಯತಿ ಫಲಿತಾಂಶ ಸಂಕೇತದಂತಿದೆ!

ಈ ಪಂಚಾಯತಿ ಎಲೆಕ್ಷನ್ ಬಿಜೆಪಿ ಬಂಡವಾಳ ಬಯಲಾಗಿಸಿದೆಯಷ್ಟೇ ಅಲ್ಲ, ಅದರೊಳಗಿನ ಬಣ ಬಡಿದಾಟಕ್ಕೆ ಖತರ್‌ನಾಕ್ ಖದರೇರಿಸಿಬಿಟ್ಟಿದೆ. ಜಿಲ್ಲಾ ಬಿಜೆಪಿಯಲ್ಲಿ ನಾಲ್ಕು ನಾಲ್ಕು ಬಣವಿದೆ. ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿ, ಜಿಲ್ಲಾಮಂತ್ರಿ ಆನಂದ್ ಅಸ್ನೋಟಿಕರ್, ದೊಣ್ಣೆ ನಾಯಕನ ಗೆಟಪ್ಪಿನಲ್ಲಿ ಅಂಡಲೆಯುವ ಸಂಸದ ಅನಂತ್ಮಾಣಿ ಮತ್ತು ಮಾಜಿ ಮಂತ್ರಿ-ಹಾಲಿ ಸಾಬೂನು ಕಾರ್ಖಾನೆ ಅಧ್ಯಕ್ಷ ಶಿವಾನಂದ ನಾಯ್ಕರ ಗ್ಯಾಂಗ್‌ವಾರ್ ಬಿಟ್ಟೂಬಿಡದೆ ನಡೆಯುತ್ತಿದೆ. ಪಂಚಾಯತಿ ಎಲೆಕ್ಷನ್‌ನ ಸಂದರ್ಭದಲ್ಲಿ ಭಟ್ಕಳದ ಮಾಜಿ ಮಂತ್ರಿ ಶಿವಾನಂದ ನಾಯ್ಕರ ಮತ್ತು ಸಂಸದ ಅನಂತ್ಮಾಣಿ ಗುಂಪುಗಳ ಗುದುಮುರಿಗೆ ಜೋರಾಗಿ ನಡೆಯಿತು. ಈಗ ಈ ಸಂಘರ್ಷಕ್ಕೆ 'ರೇಪ್' ರಂಗೇರಿಬಿಟ್ಟಿದೆ!




ಸಂಸದರ ಬಳಗದ ಜಿ.ಪಂ. ಸದಸ್ಯೆ ಸುಭದ್ರಾ ದೇವಾಡಿಗ ಕಾಂಗ್ರೆಸ್ ಶಾಸಕ ಜೆ.ಡಿ.ನಾಯ್ಕರ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿದ್ದರು. ಕಳೆದ ಲೋಕಸಭೆ ಚುನಾವಣೆ ಹೊತ್ತಲ್ಲಿ ಕಾಂಗ್ರೆಸ್‌ನ ಜೆ.ಡಿ.ನಾಯ್ಕರ್ ಸ್ವಪಕ್ಷದ ಮ್ಯಾಗಿ ವಿರುದ್ಧ ಕೆಲಸ ಮಾಡಿ ಬಿಜೆಪಿ ಮಿತ್ರ ಅನಂತ್ಮಾಣಿಗೆ ಹೆಲ್ಪ್ ಮಾಡಿದ್ದ. ಅದಕ್ಕೂ ಮೊದಲು ಸ್ವಪಕ್ಷದ ವೈರಿ ಶಿವಾನಂದ ನಾಯ್ಕನ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಸೋಲಿಸಲು ಅನಂತ್ಮಾಣಿ ಕಾಂಗ್ರೆಸ್ ಗೆಳೆಯ ಜೆ.ಡಿ. ನಾಯ್ಕನಿಗೆ ಮತಹಾಕಿಸಿದ್ದ.

ಈ ಪಕ್ಷದ್ರೋಹ ಪರಂಪರೆಯ ಪಾಲಿಟಿಕ್ಸ್ ಮೊನ್ನೆಯ ಗ್ರಾ.ಪಂ. ಸಮರದಲ್ಲೂ ಮತ್ತಷ್ಟು ಬಿರುಸಾಗಿ ನಡೆಯಿತು. ಕಾಂಗ್ರೆಸ್ ಪರ ಪ್ರಚಾರ ಮಾಡುತ್ತಿದ್ದ ಸುಭದ್ರಾ ದೇವಾಡಿಗ ಬಳಗವನ್ನು ಶಿವಾನಂದ ನಾಯ್ಕನ ಟೀಮಿನ ಲೀಡರ್-ಮಾಜಿ ತಾ.ಪಂ. ಅಧ್ಯಕ್ಷ ಪರಮೇಶ್ವರ ದೇವಾಡಿಗನ ಸಹಚರರು ಅಡ್ಡಾಡಿಸಿ ಕಾಡಿದರು. ಇದರಿಂದ ಹತಾಶರಾದ ಅನಂತ್ಮಾಣಿ ಶಿಷ್ಯೆ ಸುಭದ್ರಾ ತನ್ನ ಮೇಲೆ ಪರಮೇಶ್ವರ ದೇವಾಡಿಗ 'ಅತ್ಯಾಚಾರ' ಮಾಡಿದ್ದಾನೆಂದು ದೂರು ದಾಖಲಿಸಿಬಿಟ್ಟಳು. ಸಂಸದ-ಮಂತ್ರಿಗಳ ಬ್ರಾಹ್ಮಣ ಬಣದಲ್ಲಿರುವ ದಿವೈಎಸ್ಪಿ ವೇದಮೂರ್ತಿ ಮತ್ತು ಸಿಪಿಐ ಗುರು ಮಾಥೂರ್ ಪರಮೇಶ್ವರನ ಎಳೆತಂದು ಲಾಕಪ್ಪಿಗೆ ತಳ್ಳಿದರು. ಅತ್ತ ಶಿವಾನಂದ ನಾಯ್ಕನ ಬಣದ ತಾಲ್ಲೂಕು ಬಿಜೆಪಿ ಅಧ್ಯಕ್ಷ ಕೃಷ್ಣ ನಾಯ್ಕ ಸುಭದ್ರೆಯನ್ನು ಪಕ್ಷವಿರೋಧಿ ಎಂದು ಪಾರ್ಟಿಯಿಂದ ಸಸ್ಪೆಂಡ್ ಮಾಡಿಬಿಟ್ಟರು. ಅಲ್ಲಿಗೆ ಭಟ್ಕಳದ ಬಿಜೆಪಿಯೊಳಗಿನ ಬ್ರಾಹ್ಮಣ v/s ಶೂದ್ರ ಕದನಕ್ಕೆ ಹೊಸ ಕುತೂಹಲಕರ ಆಯಾಮ ಗ್ರಾ.ಪಂ. ಎಲೆಕ್ಷನ್‌ನಿಂದ ಬಂದಂತಾಯ್ತು.


ಇದೇ ಥರ ಜಿಲ್ಲಾ ಕಾಂಗ್ರೆಸ್ ಕೊಳಕರ 'ಯೋಗ್ಯತೆ'ಯನ್ನು ಈ ಗ್ರಾ.ಪಂ ಚುನಾವಣೆ ಜಗಜ್ಜಾಹೀರು ಮಾಡಿಬಿಟ್ಟಿದೆ! ಗ್ರಾ.ಪಂ. ಚುನಾವಣೆ ಫಲಿತಾಂಶದ ನಂತರದ ಬಲಾಬಲ ತಾಳೆ ಹಾಕಿದಾಗ ಆಡಳಿತಾರೂಢ ಬಿಜೆಪಿಗಿಂತ ಕಾಂಗ್ರೆಸ್ ಕಡೆಯವರೇ ಹೆಚ್ಚು ಗೆದ್ದಿರುವುದು ಗೊತ್ತಾಗುತ್ತದೇನೋ ಖರೆ. ಜಿಲ್ಲೆಯ 207 ಗ್ರಾ.ಪಂ.ಗಳಲ್ಲಿ ಕಾಂಗ್ರೆಸ್ಸೇ ಬಿಜೆಪಿಗಿಂತ





ಹೆಚ್ಚು ಕಡೆ ಅಧಿಕಾರ ಹಿಡಿದಿದೆ. ಗೆದ್ದರೂ ಕಾಂಗ್ರೆಸ್‌ಗೆ ಕಳೆಯೇ ಬಂದಿಲ್ಲ. ಜಿಲ್ಲಾ ಕಾಂಗ್ರೆಸ್ ಎಂದರೆ ನಾವಿಕನಿಲ್ಲದ ಹಡಗಿನಂತೆ. ಕಳೆದ ಹದಿನೈದು ವರ್ಷದಿಂದ ಸಿರ್ಸಿಯ 'ಸಾಮ್ರಾಟ್' ಹೋಟೆಲ್‌ನ ಸ್ವಾಗತಕಾರ ಶಾಂತಾರಾಂ ಹೆಗಡೆ ಎಂಬ ಹೇತ್ಲಾಂಡಿ DCC ಪೀಠಕ್ಕೆ ಫೆವಿಕಾಲ್ ಹಾಕಿಕೊಂಡು ಕೂತಿದ್ದಾನೆ. ಈ ದಂಡಪಿಂಡ ಅಧ್ಯಕ್ಷನ ಯೋಗ್ಯತೆ, ಅಡ್ನಾಡಿ ಚಟಪರಗಳೇ ಇವತ್ತು ಕಾಂಗ್ರೆಸ್ ಗೆದ್ದರೂ ಸಂಭ್ರಮ ಪಡುವ ಅಥವಾ ಈ ಗೆಲುವನ್ನೇ ಬಿಜೆಪಿ ವಿರುದ್ಧ ಅಸ್ತ್ರವಾಗಿ ಬಳಸಲಾಗದ ದುರವಸ್ಥೆಗೆ ಕಾರಣ.

ಈ ಶಾಂತಾರಾಮ ಹೆಗಡೆ ಬದಲಿಗೆ ಇನ್ಯಾರೇ DCC ಅಧ್ಯಕ್ಷನಾಗಿದ್ದರೂ ಜಿಲ್ಲೆಯಲ್ಲಿ ಬಿಜೆಪಿಯನ್ನು ಭೂಗತ ಮಾಡುತ್ತಿದ್ದ. ಈ ಶಾಂತಣ್ಣನೆಂಬ ನಾಜೂಕಯ್ಯ ರಾತ್ರಿ ಬಿಜೆಪಿ ಮಂತ್ರಿ ಕಾಗೇರಿ ಜತೆ ಚಕ್ಕಂದವಾಡಿ ಬೆಳಗ್ಗೆ ಕಾಂಗ್ರೆಸ್ ಪೋಸು ಕೊಡುವ ಪಡಪೋಸಿ! ಶಿರಸಿಯ ಎಲ್ಲ ಸಂಘ-ಸಂಸ್ಥೆಗಳ ಕುರ್ಚಿಗಳೂ ತನಗೇ ಬೇಕೆಂಬ ಹಪಾಹಪಿಯಲ್ಲಿ ಈತ ಕಾಂಗ್ರೆಸ್ ಮೇಲೆ ಹಿಡಿತವನ್ನೇ ಕಳೆದುಕೊಂಡು ಬಿಟ್ಟಿದ್ದಾನೆ. ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ತನಗೆ ಟಿಕೆಟ್ ಸಿಗಲಿಲ್ಲವೆಂದು ಸಿಟ್ಟಿನಿಂದ ಅಧಿಕೃತ ಕಾಂಗ್ರೆಸ್ ಕ್ಯಾಂಡಿಡೇಟ್ ವಿರುದ್ಧವೇ ಕಿತಾಪತಿ ಮಾಡಿದ ಮಹಾನುಭಾವ






ಈ ಶಾಂತಣ್ಣ, ಈ 'ಪಕ್ಷ ನಿಷ್ಠೆ'ಗಾಗಿಯೇ ತನ್ನ ಈ ಶಿಷ್ಯೋತ್ತಮನನ್ನು ಕೆಪಿಸಿಸಿ ಅಧ್ಯಕ್ಷ ದೇಶಪಾಂಡೆ ಡಿಸಿಸಿ ಪೀಠದಲ್ಲಿ ಹಾಗೇ ಪ್ರತಿಷ್ಠಾಪಿಸಿಟ್ಟುಕೊಂಡಿದ್ದಾರೆ. ಈ ದೇಶಪಾಂಡೆ-ಶಾಂತಾರಾಮ ಹೆಗಡೆಗಳ ಧಗಾ-ದ್ರೋಹ ದಿಂದಾಗಿಯೇ ಜಿಲ್ಲಾ ಕಾಂಗ್ರೆಸ್ ಜನರ ಒಲವಿದ್ದರೂ ಉದ್ಧಾರವಾಗುತ್ತಿಲ್ಲ.

ಡಿಸಿಸಿ ಅಧ್ಯಕ್ಷ-ಆರ್.ವಿ.ದೇಶಪಾಂಡೆಗೆ ತವರು ಜಿಲ್ಲೆಯಲ್ಲೆಷ್ಟು ತೂಕವಿದೆ. ಸ್ವಕ್ಷೇತ್ರ ಹಳಿಯಾಳದಲ್ಲಿ ಎಷ್ಟು ಕಿಮ್ಮತ್ತಿದೆಯೆಂಬುದನ್ನು ಈ ಗ್ರಾ.ಪಂ.ಚುನಾವಣೆ ತೋರಿಸಿಕೊಟ್ಟಿದೆ. ಹಳಿಯಾಳದ 20 ಗ್ರಾ.ಪಂ. ಚುನಾವಣೆಗಳಲ್ಲಿ ಬರೋಬ್ಬರಿ 12 ಪಂಚಾಯತಿಗಳನ್ನು ಸ್ಥಳೀಯ ಜೆಡಿಎಸ್ ಶಾಸಕ-ದೇಶಪಾಂಡೆಯ ಮಾಜಿ ಶಿಷ್ಯ-ಸುನೀಲ್ ಹೆಗಡೆ ಬುಟ್ಟಿಗೆ ಹಾಕಿಕೊಂಡು 'ಗುರು'ವಿಗೆ ಬಲ ತೋರಿಸಿದ್ದಾರೆ. ಆದರೆ ಅದ್ಯಾಕೋ ತನ್ನ ಕ್ಷೇತ್ರದ ಜೋಯಿಡಾದಲ್ಲಿ ಸುನೀಲ್ ಎಡವಿಬಿದ್ದಿದ್ದಾನೆ. ಅಲ್ಲಿ 15ರಲ್ಲಿ ಕೇವಲ 2 ಪಂಚಾಯತಿಯಷ್ಟೇ ಜೆಡಿಎಸ್ ಪಾಲಾದರೆ 12 ಕಾಂಗ್ರೆಸ್ ಕಬಳಿಸಿದೆ. ಹಾಗಂತ ಇದೇನೂ ದೇಶಪಾಂಡೆಯ ಪ್ರಾಬಲ್ಯವಲ್ಲ; ಸುನೀಲ್ ಹಿಂಬಾಲಕರ ಮತ್ತು ರೌಡಿ ವಿಲಾಸ ನಾಯ್ಕನಂಥ ಮಂತ್ರಿ ಅಸ್ನೋಟಿಕರ್ ಹಿಂಬಾಲಕರ ದೌರ್ಬಲ್ಯ-ಕರ್ಮವಷ್ಟೇ.

ಪಕ್ಕದ ಕಾರವಾರಕ್ಕೆ ಬಂದರೆ ಅಲ್ಲಿ ಮಂತ್ರಿ ಅಸ್ನೋಟಿಕರ್ ಬಂದರು ಮಾಫಿಯಾ-ಅದಿರು ಮಾಫಿಯಾದ ಪಾಪಿ ದುಡ್ಡು-ದಾದಾಗಿರಿಯಿಂದ ಸ್ವೀಪ್ ಮಾಡಿದ್ದಾನೆ. ಇಲ್ಲಿ ಬಿಜೆಪಿ ಬಿಗ್ ಜೀರೋ; ಅಸ್ನೋಟಿಕರನೇ ರಿಯಲ್ ಆ್ಯಂಟಿ ಹೀರೋ! ಆದರೆ ಅಸ್ನೋಟಿಕರ್‌ನ 'ಖಾಸಗಿ' ಆಕರ್ಷಣೆ ಆತನ ಕ್ಷೇತ್ರದ ಅಂಕೋಲೆಯಲ್ಲಿ ಅಷ್ಟು ಕೆಲಸ ಮಾಡಿಲ್ಲ. ಬಿಜೆಪಿ ಕ್ಷೇತ್ರಾಧ್ಯಕ್ಷ ಅರುಣ್ ನಾಡಕರ್ಣಿ ಎಂಬ ಎಲೆಕ್ಷನ್ ಸ್ಟ್ರಟಜಿಸ್ಟ್‌ನ ತಂತ್ರಗಾರಿಕೆಯಿಂದ ಅಂಕೋಲೆಯಲ್ಲಿ ಕಾಂಗ್ರೆಸ್ ಖತಂ ಆಗಿದೆ.

ಕರಾವಳಿಯ ಕುಮಟಾ, ಹೊನ್ನಾವರ, ಭಟ್ಕಳ ತಾಲ್ಲೂಕು ಮತ್ತು ಘಟ್ಟದ ಮೇಲಿನ ಶಿರಸಿ-ಸಿದ್ದಾಪುರಗಳಲ್ಲಿ ಬಿಜೆಪಿಯನ್ನು ಭೂಗತ ಮಾಡಿರುವ ಕಾಂಗ್ರೆಸ್ ವಿಜೃಂಭಿಸಿದೆ! ಹೊನ್ನಾವರದಲ್ಲಿ ಅರ್ಧಭಾಗ ಕುಮಟೆಯ ಜೆಡಿಎಸ್ ಎಮ್ಮೆಲ್ಲೆ ದಿನಕರ ಶೆಟ್ಟಿಗೂ ಇನ್ನರ್ಧ ಭಟ್ಕಳದ ಕಾಂಗ್ರೆಸ್ ಶಾಸಕ ಜೆ.ಡಿ. ನಾಯ್ಕರಿಗೂ ಹಂಚಿಹೋಗಿದೆ. ದಿನಕರ ಶೆಟ್ಟಿಗ್ಯಾಕೋ ಕಾಂಗ್ರೆಸ್‌ಗೆ ಪೈಪೋಟಿ ಕೊಡಲಾಗಿಲ್ಲ. ಸ್ವಪಕ್ಷದಲ್ಲಿನ ಬಂಡಾಯದಿಂದಾಗಿ ಜೆ.ಡಿ.ನಾಯ್ಕರೂ ಮುಗ್ಗರಿಸಿದ್ದಾರೆ. ಜಿ.ಪಂ. ಸದಸ್ಯ ಗರ್ಡೀಕರ್, ಮಾಂಕಾಳು ವೈದ್ಯರು ಜೆಡಿಗೆ ಸೆಡ್ಡು ಹೊಡೆದು ಕೆಲವೆಡೆ ತಮ್ಮ ಬೆಂಬಲಿಗರನ್ನು ಗೆಲ್ಲಿಸಿ ಕೊಂಡಿದ್ದಾರೆ.

ಈ ಕರಾವಳಿಯ ಮೂರು ತಾಲ್ಲೂಕುಗಳ ಒಟ್ಟು 61 ಗ್ರಾ.ಪಂ.ಗಳಲ್ಲಿ ಕಾಂಗ್ರೆಸ್ 35 ಕಡೆ ಬಿಜೆಪಿಯನ್ನು ಮಣಿಸಿ ಹಿಡಿತ ಸಾಧಿಸಿದೆ.



ಜಿಲ್ಲೆಯ ಗ್ರಾ.ಪಂ.ಅಖಾಡದಲ್ಲಿ ದೊಡ್ಡ ಮುಖಭಂಗದ ಸೋಲಾಗಿರುವುದು ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿ ಸಾಹೇಬರಿಗೆ!! ಈತ ಗ್ರಾ.ಪಂ. ಎಲೆಕ್ಷನ್ ಅನ್ನು ಅಸೆಂಬ್ಲಿ ಚುನಾವಣೆಯಷ್ಟೇ ಸೀರಿಯಸ್ಸಾಗಿ ಪರಿಗಣಿಸಿ ಪ್ರಚಾರ ಮಾಡಿದ್ದರು. ತಿಂಗಳು ಗಟ್ಟಲೆ ಕ್ಷೇತ್ರದಲ್ಲೇ ಠಿಕಾಣಿ ಹೂಡಿ ತಂತ್ರ-ಮಂತ್ರ ಮಾಡಿದ್ದರು. ಆದರೆ ಕಾಗೇರಿಯ ಮಂಕುಬೂದಿಗೆ ಜನ ಮರುಳಾಗಿಲ್ಲ. ಆತನ ಜಾತಿ ರಾಜಕೀಯ, ಮನಿಪಾಲಿಟಿಕ್ಸ್‌ನಿಂದ ಬೇಸತ್ತ ಜನ ಸರಿಯಾದ ಪಾಠ ಕಾಗೇರಿಗೆ ಕಲಿಸಿದ್ದಾರೆ. ಶಿರಸಿ-ಸಿದ್ದಾಪುರ ಎರಡೂ ತಾಲ್ಲೂಕಲ್ಲೂ ಕಾಗೇರಿಯ ಬಿಜೆಪಿ ಕಾಂಗ್ರೆಸ್ ಎದುರು ಸೋತು ಹೈರಾಣಾಗಿದೆ.

ಶಿರಸಿ-ಸಿದ್ದಾಪುರದ ಒಟ್ಟು 48 ಪಂಚಾಯತಿಗಳಲ್ಲಿ ಕಾಂಗ್ರೆಸ್ 25 ಪಂಚಾಯತಿಗಳಲ್ಲಿ ಹಿಡಿತ ಸಾಧಿಸಿದೆ. ಬಿಜೆಪಿಗೆ ದಕ್ಕಿರುವುದು ಕೇವಲ 18 ಪಂಚಾಯತಿ ಮಾತ್ರ. ಸಿದ್ದಾಪುರದಲ್ಲಂತೂ ಕಾಗೇರಿಯ ಇಮೇಜು ಕಿತ್ತುಕೊಂಡುಹೋಗಿದೆ. 'ನಾಜೂಕಯ್ಯನ ನಾಟಕ' ಬಯಲಾಗಿದೆ. ಇಷ್ಟಾದರೂ ಕಾಗೇರಿ ತನ್ನ ಕ್ಷೇತ್ರದ 36 ಪಂಚಾಯತಿಗಳಲ್ಲಿ ಬಿಜೆಪಿ 30ರಲ್ಲಿ ಅಧಿಕಾರ ನಡೆಸಲಿದೆ ಎಂದು ಬಡಬಡಿಸುತ್ತಿದ್ದಾರೆ. ಇದರರ್ಥ ಇಷ್ಟೇ! ಅಳಿದುಳಿದಿರುವ 'ಮಾನ' ಉಳಿಸಿಕೊಳ್ಳಲು ಆತ 'ಆಪರೇಷನ್ ಕ-ಮಲಕ್ಕೆ' ನಿರ್ಲಜ್ಜ ಕಸರತ್ತು ಶುರುಹಚ್ಚಿಕೊಂಡಿದ್ದಾರೆ!! ಇದು ಬಿಜೆಪಿ ಸಂಸ್ಕೃತಿ ತಾನೇ?

ಜಿಲ್ಲಾ ಬಿಜೆಪಿ ಬಾಸ್ ಕಾಗೇರಿಯಂಥ ಕಾಗೇರಿಯೇ ಹಿಟ್ ಔಟ್ ಆಗಿರುವ ಈ ಸಂದರ್ಭದಲ್ಲಿ ಬಿಜೆಪಿ ಮರ್ಯಾದೆಯೇನಾದರೂ ಸ್ವಲ್ಪ ಉಳಿಸಿದ್ದರೆ, ಅದು ಯಲ್ಲಾಪುರದ ಶಾಸಕ ವಿ.ಎಸ್. ಪಾಟೀಲ್ ಎಂಬ ಮೊದ್ಮಣಿಯಿಂದಾಗಿ. ಸ್ವಪಕ್ಷದ ಸಂಸದ ಅನಂತ್ಮಾಣಿ ಪಾಟೀಲ್‌ಗೆ ಮಾಡಿರುವ ಅವಮಾನ, ಕೊಟ್ಟಿರುವ ಹಿಂಸೆಯಿಂದ ಕ್ಷೇತ್ರದಲ್ಲಿ ಆತನ ಬಗ್ಗೆ ಕರುಣೆಯುಂಟಾಗಿ ವರ್ಕ್ ಔಟಾಗಿದೆ!

ಬಿಜೆಪಿ ಬಗ್ಗೆ ಜನರಿಗೆ ಬೇಸರ ಬಂದಿದೆ ಎಂಬ ಸಂದೇಶ ಈ ಗ್ರಾ.ಪಂ. ಚುನಾವಣೆ ಹೊರಹಾಕಿದೆ. ಬೆನ್ನೆಲುಬಿಲ್ಲದ ಮಂತ್ರಿ ಕಾಗೇರಿಯ ಉಸ್ತುವಾರಿಕೆಯಲ್ಲಿ ಜಿಲ್ಲೆ ಸುಸ್ತಾಗಿಹೋಗಿದೆ. ಹಲವು ಸಮಸ್ಯೆಗಳ ಸುಳಿಯಲ್ಲಿ ಬಿದ್ದು ಒದ್ದಾಡುತ್ತಿರುವ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಕಾಗೇರಿ ಮಾಣಿಯಲ್ಲಿ ಒಂದು ಪ್ಲಾನ್-ಪ್ರಾಜೆಕ್ಟ್ ಇಲ್ಲ, ಇಚ್ಛಾಶಕ್ತಿಯಿಲ್ಲ. ಅತ್ತ ಮಂತ್ರಿ ಅಸ್ನೋಟಿಕರ್ ಆಟಾಟೋಪ ಜೋರಾಗಿದೆ. ಇಂಥ ಹೊತ್ತಲ್ಲಿ ಕಾಂಗ್ರೆಸ್‌ಗೊಬ್ಬ ಛಾತಿವಂತ ಕ್ಯಾಪ್ಟನ್ ಬೇಕಾಗಿದ್ದಾನೆ. ಶಾಂತರಾಮ ಹೆಗಡೆ ಎಂಬ ನಾಲಾಯಕನ ಪದಚ್ಯುತಿಗೊಳಿಸಿ ಹೊಸಬನನ್ನು ಡಿಸಿಸಿ ಅಧ್ಯಕ್ಷ ಮಾಡಬೇಕಿದೆ.


ಅದೆಲ್ಲಕ್ಕಿಂತ ಹೆಚ್ಚಾಗಿ ಜಿಲ್ಲೆಯಲ್ಲಿ ಕಾಂಗ್ರೆಸ್ ಸೆಟೆದು ನಿಲ್ಲಬೇಕೆಂದಿದ್ದರೆ ದೇಶಪಾಂಡೆ ಕಾಗೇರಿ ಜತೆಗಿನ ಕಣ್ಣಾಮುಚ್ಚಾಲೆ ಬಿಡಬೇಕು. ಕಾಂಗ್ರೆಸ್ ಲೀಡರ್‌ಗಳಿಗೆ ಬುದ್ಧಿ ಬರುವುದೆಂದು?

• ನಹುತ

ಕೊಪ್ಪಳ-ಗದಗ

ಮೇವು ಕತ್ತರಿಸುವ ಈಳಿಗೆಯಲ್ಲಿ ಆಕೆಯನ್ನು ಕತ್ತರಿಸಿ ಹಾಕಿದರು

ಅನೈತಿಕ ಸುಬಂಧ .... ಅದು ನಿಜವೇ ಇರಬಹುದು... ಆದರೆ ಆ ಕಾರಣಕ್ಕೇ ಆಕೆಯನ್ನು ಕೊಲ್ಲುವ 'ತೀರ್ಪು' ಕೊಟ್ಟವರು ಮೇಲ್ಜಾತಿಯ ಕೆಲವೇ ಕೆಲವು ಗೂಂಡಾ ಗೌಡ್ರುಗಳು...



ಅವರು ತೀರ್ಪು ಕೊಡುತ್ತಿದ್ದಂತೆ ಆ ಯುವತಿಯ ರುಂಡಕ್ಕೆ ಕೊಡಲಿ ಏಟು ಬಿತ್ತು, ಅದೇ ಹೊತ್ತಿಗೆ ಅವಳ 'ಪ್ರಿಯಕರ'ನ ರುಂಡ ಚೆಂಡಾಡಿ ಆತನ ತಂದೆ-ತಾಯಿಗಳ ಮುಂದೆ ಇಡಲಾಯಿತು. ರುಂಡಕ್ಕೆ ಕೊಡಲಿ ಏಟು ತಿಂದ ಯುವತಿಯು ಇನ್ನೂ ತನ್ನ ಜೀವ ಹಿಡಿದುಕೊಂಡು ಒದ್ದಾಡುವುದನ್ನೂ ಆ ಗೂಂಡಾಪಡೆಗೆ ಸಹಿಸಲಾಗಲಿಲ್ಲ, ಜಾನುವಾರುಗಳಿಗೆ ಹಗುರಾಗಲೆಂದು ಬಳಸುವ ಮೇವು ಕತ್ತರಿಸುವ ಕೈಯಂತ್ರದಲ್ಲಿ ಆಕೆಯ ಜೀವಂತ ದೇಹವನ್ನು ತೂರಿಸಿ, ಥೇಟು ಮೇವು ಕತ್ತರಿಸಿದಂತೆ ಛಿದ್ರ ಛಿದ್ರ ಮಾಡಿದರು ಆ ರಾಕ್ಷಸ ಗುಂಪು.... ದನ ತಿನ್ನುವ ಮೇವಿನಂತೆ ನುಚ್ಚು ನೂರಾದ ಈ ಯುವತಿಯ ಹೆಣಕ್ಕೆ ವಾರಸುದಾರರೇ ಇಲ್ಲ! ಹಾಗಂತ ಪೊಲೀಸರ ಎಫ್‌ಐಆರ್ ದಾಖಲಿಸಿ ಬಿಟ್ಟಿದೆ!

ಸತ್ಯ ಏನೆಂದರೆ, ಆ ಯುವತಿಯ ಹೆಣ (ಹೆಣವಲ್ಲ, ಬದಲಾಗಿ ಛಿದ್ರಗೊಂಡ ಶಿರಚ್ಛೇದದ ಬಂಡಲ್ಲು) ತೆಗೆದುಕೊಳ್ಳಲು ಈಕೆಯ ಪಾಲಕರಾರೂ ಬರಲೇ ಇಲ್ಲ, ಟಿವಿ ವಾಹಿನಿಗಳು ಎಂದಿನಂತೆ ತಮ್ಮ ರಕ್ತಸಿಕ್ತ ರಿಪೋರ್ಟ್ ಬರೆದು ಕೈತೊಳೆದುಕೊಂಡವು. ಅಲ್ಲಿಗೆ 'ಜನಸಮೂಹ' ನಿರ್ಧರಿಸಿತು: "ಏನ್ ಮಾಡೋದು, ಆಕಿ ಮಾಡಿದ್ ಪಾಪಕ್ಕ ಆಕಿ ಬಲಿಯಾದ್ಲು....." ಹೀಗೆ 'ಪಾಪ' ಮಾಡಿ ಬಲಿಯಾದ ಹುಡುಗಿ ಗದಗ ಜಿಲ್ಲೆಯ ರೋಣ ತಾಲೂಕಿನ ತೋಟಗಂಟಿ ಗ್ರಾಮದ ಅನ್ನಪೂರ್ಣ ಭರಮಗೌಡರ. ಇದು ಈಗ ತನಿಖಾ ಸಮಿತಿಯ ನೇತೃತ್ವ ವಹಿಸಿರುವ ಸಿಪಿಐ ವೀರಣ್ಣ ಹಳ್ಳದರಿಗೂ ಗೊತ್ತು, ಆದರೆ ಎಫ್‌ಐಆರ್‌ನಲ್ಲಿ ಮತ್ತು ಪೊಲೀಸರ ಇತರೆ ದಾಖಲೆಗಳಲ್ಲಿ ಮೃತ ಮಹಿಳೆಯ ಹೆಸರು ಇನ್ನೂ 'ತಿಳಿದು' ಬಂದೇ ಇಲ್ಲ!


ಕೊಪ್ಪಳದ ಫ್ಯೂಡಲ್ ರಾಜಕಾರಣಕ್ಕೆ, ಇಂತಹ ರಾಜಕಾರಣದ ಆರಾಧಕರಾಗಿರುವ ಪೊಲೀಸರ ದೌರ್ಜನ್ಯಕ್ಕೆ ಇದೊಂದು ಉದಾಹರಣೆ ಮಾತ್ರ......

ಕತೆಯಲ್ಲ ನಿತ್ಯ ವ್ಯಥೆ

ಗದಗ ಜಿಲ್ಲೆಯ ತೋಟಗಂಟಿಯ ಅನ್ನಪೂರ್ಣಾಳನ್ನು ಮುಂಡರಗಿ ತಾಲೂಕಿನ ಕವಲೂರ ಗ್ರಾಮದ ವಿಜಯಕುಮಾರ ಗಡ್ಡಾದ ಎಂಬಾತನಿಗೆ ಕೆಲ ವರ್ಷಗಳ ಹಿಂದೆ ಮದುವೆ ಮಾಡಿಕೊಡಲಾಗಿತ್ತು, ಆಗಿನ್ನೂ ಅನ್ನಪೂರ್ಣಾಳಿಗೆ 18 ತುಂಬಿರಲಿಲ್ಲ, 'ಮದುವೆ ಮಾಡಿ ಕೈತೊಳೆದುಕೊಳ್ಳುವ' ಸಂಪ್ರದಾಯಕ್ಕೆ ಗಂಟು ಬಿದ್ದ ಆಕೆಯ ತಂದೆ-ತಾಯಿ ಹಿಂದು-ಮುಂದು ನೋಡದೇ ವಿಜಯಕುಮಾರನೊಂದಿಗೆ ಆಕೆಯ ಮದುವೆ ಮಾಡಿದ್ದರು. ಗಂಡ ವಿಜಯಕುಮಾರ ಲಾರಿ ಚಾಲಕನಾಗಿದ್ದು, ಎಂದೋ ಒಮ್ಮೆ ಮನೆಗೆ ಬರುವವನಾಗಿದ್ದ, ಆಗ ಈ ಯುವತಿಯ ಸಂಪರ್ಕಕ್ಕೆ ಬಂದವನು ರವಿ ಸಿದ್ನೇಕೊಪ್ಪ. ಆದರೆ ಪಾಪ ಹುಡುಗಿಗೆ ಏನು ಗೊತ್ತು, ಇವನೊಬ್ಬ ಸ್ತ್ರೀ ಲಂಪಟ ಎಂದು.

ಸಮಸ್ಯೆ ಶುರುವಾಗಿದ್ದೇ ಜಾತಿಯ ಕಾರಣದಿಂದ, ಫ್ಯೂಡಲ್ ಮನಸ್ಸುಗಳಿಂದ. ಅನ್ನಪೂರ್ಣಾ ಬಲಿಷ್ಠ ರೆಡ್ಡಿ ಲಿಂಗಾಯತ ಸಮುದಾಯಕ್ಕೆ ಸೇರಿದವಳು. ಆಕೆಯ ಪತಿಯ ಕುಟುಂಬ ಕೂಡಾ ದೌರ್ಜನ್ಯವನ್ನೇ ಉಸಿರಾಗಿಸಿಕೊಂಡು ಬಂದಿರುವ ರೆಡ್ಡಿ ಕುಟುಂಬವೆ. ಅನ್ನಪೂರ್ಣಾಳ ಪ್ರಿಯಕರ ರವಿ ಉಪ್ಪಾರ ಜನಾಂಗಕ್ಕೆ ಸೇರಿದವನು. ಈ ಒಂದು ಸಂಗತಿಯೇ ಅನ್ನಪೂರ್ಣಾಳ ಗಂಡನ ಮನೆಯಲ್ಲಿ (ಗಡ್ಡಾದ ಕುಟುಂಬದಲ್ಲಿ) ಭಾರಿ ಕೋಲಾಹಲ ಉಂಟು ಮಾಡಿತು. ಗಡ್ಡಾದ ಕುಟುಂಬದ ಏಳು ಜನ ಅಣ್ಣ-ತಮ್ಮಂದಿರು ಈಗ ಬೇರೆ ಬೇರೆಯಾಗಿದ್ದರೂ ಈ ವಿಷಯದಲ್ಲಿ ಮಾತ್ರ 'ಐಕ್ಯತೆ' ಮೆರೆದರು. ಅದರ ಪರಿಣಾಮವೇ ಅನ್ನಪೂರ್ಣಾ ಮತ್ತು ಅವಳ ಲಂಪಟ ಪ್ರಿಯಕರ ರವಿ ಸಂಜೆಯ ಹೊತ್ತಿನಲ್ಲಿ ಬೀದಿಯಲ್ಲಿಯೇ ಬರ್ಬರವಾಗಿ ಕೊಲೆಗೀಡಾದರು. ಈ ಕೊಲೆಗೂ ಮುನ್ನ ರವಿಯ ತಂದೆ-ತಾಯಿಗಳು ಬಂದು ಗಡ್ಡಾದ ಕುಟುಂಬದವರ ಕೈಕಾಲು ಬಿದ್ದು ತಮ್ಮ ಮಗನನ್ನು ಕೊಲ್ಲದಿರುವಂತೆ ಬೇಡಿಕೊಂಡರು. ಜೊತೆಗೆ ಪೊಲೀಸರಿಗೂ ನಡೆಯಲಿರುವ ಕೊಲೆಗಳ ಸುದ್ದಿಯನ್ನು ಮುಟ್ಟಿಸಿದರು.......


ಪೊಲೀಸರೂ ಬಂದರು, ಜನಸಮೂಹವೂ ನೆರೆದಿತ್ತು..... ಈ ಎಲ್ಲರ ಮುಂದೆಯೇ ಗಡ್ಡಾದ ಕುಟುಂಬ ದನಗಳ ಮೇವು ಕತ್ತರಿಸುವಂತೆ ಅನ್ನಪೂರ್ಣಾಳ ದೇಹವನ್ನು ಬಹಿರಂಗವಾಗಿ ಛಿದ್ರ ಛಿದ್ರ ಮಾಡಿತು.



ಇದು ಬರೀ ಅನ್ನಪೂರ್ಣಾಳ ದುರಂತ ಕತೆಯಷ್ಟೇ ಅಲ್ಲ, ಈ ಭಾಗದಲ್ಲಿ ಅಮಾಯಕ ಹೆಣ್ಣು ಮಕ್ಕಳು ಒಂದಿಲ್ಲೊಂದು 'ಆರೋಪ'ಕ್ಕೆ ಗುರಿಯಾಗಿ ನಿತ್ಯವೂ ಸಾಯುತ್ತಿದ್ದಾರೆ. ಇದು ಶತಮಾನಗಳಿಂದ ಈ ಭಾಗದಲ್ಲಿ ನಡೆದುಕೊಂಡು ಬರುತ್ತಿರುವ ದೌರ್ಜನ್ಯವೇ ಆಗಿದೆ. ಮೇವು ಕತ್ತರಿಸುವ ಈಳಿಗೆಯಲ್ಲಿ ಅನ್ನಪೂರ್ಣ ಬಲಿಯಾಗುವ ಮುನ್ನ ನೂರೆಂಟು ಅಮಾಯಕ ಹೆಣ್ಣುಗಳು ಪುರುಷ ದೌರ್ಜನ್ಯಕ್ಕೆ ನಲುಗಿ ತಣ್ಣಗೆ ಪ್ರಾಣ ಬಿಟ್ಟಿದ್ದಾರೆ, ಇನ್ನೂ ಕೆಲವರ ಜೀವಗಳು ಬೆಂಕಿಯಲ್ಲಿ ಬೆಂದುಹೋಗಿವೆ.


ಉತ್ತರ ಭಾರತದಲ್ಲಿ 'ಕುಲಗೌರವ'ದ ಹೆಸರಲ್ಲಿ ನಡೆಯುತ್ತಿರುವ ಅಮಾನುಷ ಸ್ತ್ರೀ ಹತ್ಯೆಗಳು ಈ ಭಾಗದಲ್ಲೂ ನಡೆಯುತ್ತಿವೆ, ಆದರೆ ಸದ್ದಿಲ್ಲದೆ. ಅಂದಂತೆ, ಈಗೇನೋ ಒಂದು ತನಿಖಾ ಸಮಿತಿಯನ್ನು ರಚಿಸಲಾಗಿದೆ. ಆದರೆ ಇಲ್ಲಿಯ ಡಿ.ವೈ.ಎಸ್.ಪಿ. ವಿಜಯಕುಮಾರ ಡಂಬಳ ಪಕ್ಕಾ ಫ್ಯೂಡಲ್ ಮನೋಭಾವದ ರೆಡ್ಡಿ ಮನುಷ್ಯ. ಈಗ ಆರೋಪಿಗಳಾಗಿರುವ ಗಡ್ಡಾದ ಕುಟುಂಬದವರೂ ರೆಡ್ಡಿಗಳೇ ಆಗಿರುವುದರಿಂದ, ಇಲ್ಲಿಯ ಎಲ್ಲ ರಾಜಕೀಯ ಪಕ್ಷಗಳಲ್ಲೂ ರೆಡ್ಡಿಗಳದೇ ಕಾರುಬಾರು ಇರುವುದರಿಂದ ಈ ಕೇಸು ಹಳ್ಳ ಹಿಡಿಯುವುದರಲ್ಲಿ ಸಂಶಯವೇ ಇಲ್ಲ, ಹೀಗಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಕೊಪ್ಪಳದ ಪ್ರಜ್ಞಾವಂತರು ಮತ್ತು ನಾಡಿನ ಮಹಿಳಾ ಪರ ಹೋರಾಟಗಾರರ ಕೈಯಲ್ಲಿದೆ.

• ಪಿ.ಕೆ. ಮಲ್ಲನಗೌಡರ



ಮೈಸೂರಿನ ಟಿಟಿಎಲ್ ಟ್ರಸ್ಟ್: ಉಪ್ಪಾರರಿಗೆ ಉಪ್ಪು ನೀರು

ಮತ್ತೆ ಮೈಸೂರು ಸುದ್ದಿಗೆ ಬಂದಿದೆ. ನೆಲಗಳ್ಳರ ಗುಂಪೊಂದು ನಡೆಸಿದ ಕಬಳಿಕೆ ಹೊಸ ಹೋರಾಟಕ್ಕೆ ನಾಂದಿ ಹಾಡಿದೆ. 1943ರಲ್ಲಿ ಅಂದಿನ ಮೈಸೂರು ವಿಶ್ವಸ್ಥ ಮಂಡಳಿ (ಸಿಐಟಿಬಿ) ಉಪ್ಪಾರ ವಿದ್ಯಾರ್ಥಿ ನಿಲಯಕ್ಕಾಗಿ ಷರತ್ತಿನ ಆಧಾರದ ಮೇಲೆ ಹಣ ಪಡೆಯದೇ ಉಚಿತವಾಗಿ ನಿವೇಶನ ಕೊಟ್ಟಿದೆ. ಪೂರ್ತಿ 3 ಎಕರೆ 20 ಗುಂಟೆ. ಈ ಸ್ಥಳದಲ್ಲಿ ಒಂದು ಹಾಸ್ಟೆಲ್ ನಿರ್ಮಾಣ ಮಾಡಲಾಯಿತು. ಅದು ಉಪ್ಪಾರ ಜನಾಂಗಕ್ಕೆ ಸೇರಿದ್ದು. ಉಪ್ಪಾರ ವಿದ್ಯಾರ್ಥಿ ನಿಲಯ ಎಂದು ಕರೆಯಲಾಯಿತು. ಈ ಆಸ್ತಿಯ ಇಂದಿನ ಮೌಲ್ಯ ಬರೋಬರಿ ಮೂವತ್ತು ಕೋಟಿ. ಟಟಿಎಲ್ ಟ್ರಸ್ಟ್ ಈ ಹಾಸ್ಟೆಲ್‌ನ ಉಸ್ತುವಾರಿ ನೋಡಿಕೊಳ್ಳುತ್ತಿದೆ.




ಈ ನಿರ್ಮಾಣದ ಹಿಂದೆ ಉಪ್ಪಾರ ಜನಾಂಗದ ನಾಯಕರ ಶ್ರಮ ಮತ್ತು ಭವಿಷ್ಯದ ಕನಸು ಅಡಗಿತ್ತು, ಹಿಂದೆ ಈ ಜನಾಂಗದ ನಾಯಕರು ಮಹಾರಾಜರಲ್ಲಿ ಮನವಿ ಮಾಡಿ ಕಾಡಿಬೇಡಿ ಈ ನೆಲವನ್ನು ತಮ್ಮದಾಗಿಸಿ ಕೊಂಡಿದ್ದರು. ಮಹಾರಾಜರು ಅಂದಿನ ವಿಶ್ವಸ್ಥ ಮಂಡಳಿಯ ಮೂಲಕ ಈ ಜಾಗವನ್ನು ಕೊಡಿಸಿದ್ದರು. ಹಾಗೆ ನೀಡುವಾಗ ವಿಶ್ವಸ್ಥ ಮಂಡಳಿ ಕೆಲ ಷರತ್ತುಗಳನ್ನು ವಿಧಿಸಿತ್ತು, ಈ ಜಾಗ ಉಪ್ಪಾರ ವಿದ್ಯಾರ್ಥಿ ನಿಲಯಕ್ಕಲ್ಲದೇ ಬೇರೆ ಉದ್ದೇಶಕ್ಕೆ ಬಳಸಬಾರದೆಂದು, ಹಾಗೆ ಬಳಸಿದರೆ ಈ ಜಾಗ ಮತ್ತು ಕಟ್ಟಲಾದ ಕಟ್ಟಡದ ಸಮೇತ ಸಿಐಟಿಬಿಗೆ ಹಿಂದಿರುಗಿಸಬೇಕೆಂದು ಷರತ್ತು ವಿಧಿಸಿತ್ತು.

ಸಾಲದೆಂಬಂತೆ ಈ ಹಾಸ್ಟೆಲ್ ನಡೆಸಿಕೊಂಡು ಹೋಗಲು ಆರ್ಥಿಕ ಸ್ವಾವಲಂಬನೆಗಾಗಿ ಹೆಚ್.ಡಿ. ಕೋಟೆ ಬಳಿ 20 ಎಕರೆ ಜಮೀನು ನೀಡಲಾಗಿತ್ತು, ಅಂದಿನ ಯಜಮಾನ ಬೆಳ್ಳೂರು ಎ. ತಮ್ಮಯ್ಯ ತಮ್ಮ ಪರಿಶ್ರಮದಿಂದ ಈ ನೆಲದಲ್ಲಿ ಉಪ್ಪಾರ ವಿದ್ಯಾರ್ಥಿ ನಿಲಯದ ಕಟ್ಟಡ ಕಟ್ಟಿದ್ದರು. ಮೈಸೂರು ಉಪ್ಪಾರ ಸಮುದಾಯದ ಪಾಲಿಗೆ ಅದು ಹೊಸ ಹಾದಿ ತೋರಿಸಿತ್ತು, ಎ.ತಮ್ಮಯ್ಯನವರ ನಂತರ ಅವರ ಅಳಿಯ ಲಿಂಗಯ್ಯ ಈ ಹಾಸ್ಟೆಲ್‌ಅನ್ನು ಸಮರ್ಥವಾಗಿ ಮುನ್ನಡೆಸಿದ್ದರು. ಆ ನಂತರ ಬಂದವರು ಹುಟ್ಟು ನೆಲಗಳ್ಳರು.

ಇಡೀ ಉಪ್ಪಾರ ವಿದ್ಯಾರ್ಥಿ ನಿಲಯ ಧನದಾಹಿಗಳ ಪಾಲಾಗಿಹೋಯಿತು. ಲಿಂಗಯ್ಯ ಕಾಲವಾದ ನಂತರ ಅವರ ಮಗ ಡಾ. ಕೆ.ಎಲ್.ರಾಮದಾಸ್ ಈ ಟಟಿಎಲ್ ಟ್ರಸ್ಟ್‌ಗೆ ಅಧ್ಯಕ್ಷನಾದ. ಅವನ ತಂಗಿ ಕೆ.ಎಲ್. ಭಾಗ್ಯ ತಮ್ಮ ಕೃಪಾಕರ ಕಾರ್ಯದರ್ಶಿಗಳಾದರು. ಇವರೊಂದಿಗೆ ರಾಜಭೂಷಣ್ ಎಂಬಾತನೂ ಸೇರಿಕೊಂಡ. ಉಪ್ಪಾರ ವಿದ್ಯಾರ್ಥಿ ನಿಲಯದ ಆಸ್ತಿಯ ಖಾತೆಯನ್ನು ಟಟಿಎಲ್ ಟ್ರಸ್ಟ್‌ಗೆ ವರ್ಗಾಯಿಸಿಕೊಳ್ಳಲಾಯಿತು. ಅಲ್ಲಿಂದ ಶುರುವಾಯಿತು ಭೂಗಳ್ಳರ ಅಟ್ಟಹಾಸ! ರಾಜ್ಯದ ಅತ್ಯಂತ ಹಿಂದುಳಿದ ಉಪ್ಪಾರರು ಅತಂತ್ರರಾದರು. ಅವರ ಶೈಕ್ಷಣಿಕ ಏಳಿಗೆ ಕನಸು ನೆಗೆದು ಬಿತ್ತು, ಉಪ್ಪಾರ ವಿದ್ಯಾರ್ಥಿಗಳಿಗೆ ಗ್ರಹಣ ಹಿಡಿಯಿತು. ಅವರಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ಕೊಡಲಾಯಿತು. ಮೂಲ ಸೌಕರ್ಯಗಳನ್ನು ಒದಗಿಸದೆ ವಿದ್ಯಾರ್ಥಿಗಳು ನಿಲಯ ಬಿಟ್ಟು ಹೋಗುವಂತೆ ಮಾಡಲಾಯಿತು. ಇದೆಲ್ಲವೂ ನಡೆದದ್ದು ಟಟಿಎಲ್ ಟ್ರಸ್ಟ್‌ನ ಅಯೋಗ್ಯ ಅಧ್ಯಕ್ಷ ಡಾ.ಕೆ.ಎಲ್.ರಾಮದಾಸನ ನೇತೃತ್ವದಲ್ಲಿ.

ಇದು ಉಪ್ಪಾರ ಜನಾಂಗದವರನ್ನು ಕೆರಳಿಸಿತು. ಅವರು ತಮ್ಮ ಕುಲಗುರು ಪುರುಷೋತ್ತಮಾನಂದ ಪುರಿಗಳನ್ನು ತಮ್ಮ ಹೋರಾಟಕ್ಕೆ ಸೇರಿಸಿಕೊಂಡರು. ಮೈಸೂರು, ಚಾಮರಾಜನಗರಗಳ ಉಪ್ಪಾರ ಮುಖಂಡರುಗಳು ಸಭೆ ಸೇರಿ ಹೋರಾಟದ ರೂಪುರೇಷೆಗಳನ್ನು ಸಿದ್ಧಪಡಿಸಿದ್ದರು. ಮೊದಲಿಗೆ ವಿದ್ಯಾರ್ಥಿ ನಿಲಯಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಂಗ್ರಹಿಸಿ ಮೈಸೂರು ನ್ಯಾಯಾಲಯದಲ್ಲಿ ದಾವೆ ಹೂಡಲಾಯಿತು. ಇತ್ತ ಈ ನೆಲಗಳ್ಳರು ಫೆಬ್ರವರಿ 2010ರಂದು ವಿದ್ಯಾರ್ಥಿ ನಿಲಯವನ್ನು ಧ್ವಂಸ ಮಾಡಿಬಿಟ್ಟರು. ಅಲ್ಲಿ ವಿದ್ಯಾರ್ಥಿ ನಿಲಯ ಇತ್ತು ಎಂಬುದನ್ನೇ ಸುಳ್ಳಾಗಿಸುವಂತೆ ನೋಡಿಕೊಂಡರು. ಈ ಬಗ್ಗೆ ಜನಾಂಗದ ಮುಖಂಡರುಗಳು ಸರಸ್ವತಿಪುರಂ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಬೀದಿಗೆ ಬಂದು ಹೋರಾಡುತ್ತಿದ್ದಾರೆ.

ವಿದ್ಯಾರ್ಥಿ ನಿಲಯದ ಧ್ವಂಸದ ಹಿಂದೆ ಭಾರೀ ತೋಳವೊಂದು ಕಾರ್ಯಾಚರಣೆ ನಡೆಸಿದೆ. ಅದರ ಹೆಸರು



ಪ್ರಕಾಶ್ ತೋಳಿಗೌಡ. ಈತ ರಾಮದಾಸ್ ತೀರಿಕೊಂಡ ನಂತರ ಹೊಸ ಟ್ರಸ್ಟ್ ರಚಿಸಿದ್ದ. ಈತ ರಾಮದಾಸರ ಅಂತರ್ಜಾತಿ ಅಳಿಯ. ತಮ್ಮಯ್ಯ ತಾಯಮ್ಮ ಲಿಂಗಯ್ಯ ಟ್ರಸ್ಟ್ (ಟಟಿಎಲ್)ನ ಪ್ರೇರಣೆಯೇ ಈತ. ಇಡೀ ಟ್ರಸ್ಟ್ ಈ ಕುಟುಂಬದ ಕೈಯಲ್ಲೇ ಇದೆ. ಪ್ರಕಾಶ ತೋಳಿಗೌಡನೇ ಈ ಟ್ರಸ್ಟ್‌ನ ಉಪಾಧ್ಯಕ್ಷ. ರಾಮದಾಸರ ಮಗಳು ಚೇತನಾ ಪ್ರಕಾಶ್ ಟ್ರಸ್ಟಿ, ಅಶ್ವತ್ಥ್‌ನಾರಾಯಣ ಕಾರ್ಯದರ್ಶಿ, ಶಶಿಕಲಾ ಮತ್ತೊಂದು ಟ್ರಸ್ಟಿ, ಆನಂದ, ಶಿವಕುಮಾರ, ಮಧುಸೂದನ್, ತಿಮ್ಮರಾಯಪ್ಪ, ಟಿ.ಎನ್. ಪ್ರಸಾದರಂತಹ ಸಣ್ಣಪುಟ್ಟ ನೌಕರರೇ ಟ್ರಸ್ಟಿಗಳಾಗಿದ್ದಾರೆ. ಉಪ್ಪಾರ ಜನಾಂಗದ ಆಸ್ತಿಯನ್ನು ನುಂಗಿಹಾಕಲು ಸಜ್ಜಾಗಿದ್ದಾರೆ.



ಮಧ್ಯರಾತ್ರಿ ಜೆಸಿಬಿ ಯಂತ್ರವನ್ನು ತಂದು ವಿದ್ಯಾರ್ಥಿ ನಿಲಯದ ಕಟ್ಟಡವನ್ನು ಕೆಡವಲಾಗಿದೆ. ಕಟ್ಟಡ ಕೆಡವಿದವರ ವಿರುದ್ಧ ಐಪಿಸಿ ಕಲಂ 307ರ ಪ್ರಕಾರ ಕ್ರಿಮಿನಲ್ ಮೊಕದ್ದಮೆ ಹಾಕಲಾಗಿದೆ. ಅಷ್ಟಾಗಿಯೂ ಯಾರನ್ನೂ ಬಂಧಿಸಲಾಗಿಲ್ಲ, ನಗರಾಭಿವೃದ್ಧಿ ಪ್ರಾಧಿಕಾರವೂ ಇವರ ವಿರುದ್ಧ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ, ಈ ಕಳ್ಳರಕೂಟಕ್ಕೆ ಮೈಸೂರು ನಗರಪಾಲಿಕೆ ಅಧಿಕಾರಿಗಳ ಕುಮ್ಮಕ್ಕು ಇದೆ.

ಟಟಿಎಲ್‌ಗೆ ಅಕ್ರಮ ಖಾತೆ ಮಾಡಿಕೊಟ್ಟಿದ್ದೇ ಈ ಭ್ರಷ್ಟ ಅಧಿಕಾರಿಗಳು. ಉಪ್ಪಾರರ ಕುಲಗುರು ಪುರುಷೋತ್ತ ಮಾನಂದ ಪುರಿ ಸ್ವಾಮಿಗಳು ಜನಾಂಗದ ಜನರೊಂದಿಗೆ ಹೋರಾಟಕ್ಕೆ ಮುಂದಾದಂತೆ ಭಾರೀ ಹಗರಣವೇ ನಡೆದುಹೋಯಿತು.

ವಿದ್ಯಾರ್ಥಿನಿಲಯದ ಆಸ್ತಿಗೆ ಸಂಬಂಧಿಸಿದ ದಾಖಲೆಗಳ ಮಹಾನಗರಪಾಲಿಕೆಯಿಂದ ಕಾಣೆಯಾಗಿವೆ. ಅಧಿಕಾರಿಗಳ ದುಡ್ಡಿನಾಸೆಗೆ ದಾಖಲೆಗಳನ್ನು ನಾಶಪಡಿಸಿದ್ದಾರೆ. ಈ ನಡುವೆ ಉಪ್ಪಾರ ಜನಾಂಗದ ಮುಖಂಡರುಗಳು ಹಾಸ್ಟೆಲ್ ಎದುರು ಧರಣಿ ನಡೆಸಿದ್ದರು. ಜಿಲ್ಲಾಡಳಿತ ಸಮಸ್ಯೆ ಬಗೆಹರಿಸುವುದಾಗಿ ಆಶ್ವಾಸನೆ ನೀಡಿದೆ. ಅದರಂತೆ ಆಡಳಿತಾಧಿ ಕಾರಿಯಾಗಿ ಭಾರತಿ ಎಂಬುವವರನ್ನು ನೇಮಿಸಿದೆ. 'ಕಟ್ಟಡವನ್ನು ದುರಸ್ತಿಗೊಳಿಸುವುದಾಗಿ' ಜಿಲ್ಲಾಧಿಕಾರಿಗಳು ನೀಡಿರುವ ಭರವಸೆ ಇನ್ನೂ ಸಾಧ್ಯವಾಗಿಲ್ಲ, ಇತ್ತ ಆಡಳಿತಾಧಿಕಾರಿ ಭಾರತಿ ಕಳ್ಳರಕೂಟಕ್ಕೆ ಶರಣಾಗಿದ್ದಾರೆ. ವಿದ್ಯಾರ್ಥಿಗಳಿಗೆ ವಿನಾಕಾರಣ ಕಿರುಕುಳ ನೀಡುತ್ತಿದ್ದಾರೆ. ಆಕೆಯನ್ನು ಬದಲಾಯಿಸಬೇಕೆಂದು ಮತ್ತೆ ಮೇ 13ರಂದು ಡಿಸಿ ಕಚೇರಿಯ ಮುಂದೆ ಧರಣಿ ನಡೆಸಲಾಯಿತು. ಜಿಲ್ಲಾಧಿಕಾರಿಗಳಿಗೆ ಮನವಿ ಕೊಡಲು ಆರು ಸಾವಿರ ಜನ ಕಾದುಕುಳಿತಿದ್ದರು. ಅವರನ್ನು 3 ಗಂಟೆ ಕಾಯಿಸಲಾಗಿದೆ. ಕ್ಷುಲ್ಲಕ ಕಾರಣಕ್ಕೆ ಪ್ರತಿಭಟನಾ ನಿರತರನ್ನು ಪೊಲೀಸರು ಮನಸೋಇಚ್ಛೆ ಬಡಿದಿದ್ದಾರೆ.

ಜಿಲ್ಲಾಡಳಿತ ಅಸಮರ್ಥವಾಗಿದೆ. ಹಿಂದೆ ಇದೇ ನಾಯಕ ಜನಾಂಗದವರು ಜಾತಿ ಪ್ರಮಾಣಪತ್ರದ ಸಂಬಂಧ ಸಾವಿರಾರು ಸಂಖ್ಯೆಯಲ್ಲಿ ಡಿಸಿ ಕಚೇರಿಯೆದುರು ಪ್ರತಿಭಟನೆ ಮಾಡಿದಾಗ ಹಾಗೂ ಪಾಪ್ಯುಲರ್ ಫ್ರಂಟ್ ಇಂಡಿಯಾದವರು ಮೈಸೂರಿನಲ್ಲಿ ಪ್ರತಿಭಟನೆ ಮಾಡಿದಾಗ ಪರಿಸ್ಥಿತಿ ನಿಭಾಯಿಸುವಲ್ಲಿ ಜಿಲ್ಲಾಡಳಿತ ವಿಫಲವಾಗಿತ್ತು, ಜನರ ಪ್ರತಿಭಟನೆ ಆಲಿಸಲು ಬಾರದ ಅದಕ್ಷ ಸರ್ಕಾರ ಒಂದು ಕಡೆಯಾದರೆ, ಅಸಮರ್ಥ ಆಡಳಿತ ಇನ್ನೊಂದು ಕಡೆ. ಒಟ್ಟಿನಲ್ಲಿ ಜನಸಾಮಾನ್ಯರು ದಿಕ್ಕುತೋಚದೆ ಕುಳಿತಿದ್ದಾರೆ.

ಇನ್ನಾದರೂ ಉಪ್ಪಾರ ಜನಾಂಗದ ಉನ್ನತಿಗೆ ಕಾರಣವಾಗಿದ್ದ ವಿದ್ಯಾರ್ಥಿ ನಿಲಯವನ್ನು ಅವರಿಗೆ ಮೀಸಲಿಡಬೇಕು. ಕಳ್ಳರ ಕೂಟದ ಟ್ರಸ್ಟ್ ಅನ್ನು ಅಕ್ರಮವೆಂದು ಕಿತ್ತುಹಾಕಬೇಕು. ಈ ಎಲ್ಲಾ ಟ್ರಸ್ಟಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬೇಕು.

ನಾಯಕ ಜನಾಂಗಕ್ಕೆ ನ್ಯಾಯ ಸಿಗಬೇಕು.

...ೋರಾಟಗಾರ ಹೊರಟ್ಟಿಯ ಓಟಕ್ಕೆ ಬ್ರೇಕಿಲ್ಲ


...ೆಲಿಲ್ಲದ ಸರದಾರನಿಗೆ ಇನ್ನೊಂದು ...0 ವರ್ಷಗಳಿಂದ ಪಶ್ಚಿಮ ಶಿಕ್ಷಕರ ...ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿರುವ ... ಹೊರಟ್ಟಿಗೆ ಇನ್ನೊಂದು ಗೆಲುವು ...980ರಲ್ಲಿ ಈ ಬಸವರಾಜ ಹೊರಟ್ಟಿ ... ಲ್ಯಾಮಿಂಗ್‌ಟನ್ ಹೈಸ್ಕೂಲಿನಲ್ಲಿ ...ಡ್ರಿಲ್ ಮಾಸ್ತರ್ ಆಗಿದ್ದರು. ಆಗಲೇ ...ಗೆ ಸ್ಪರ್ಧಿಸಿ 649 ಮತಗಳಿಂದ ...ದರು. ಸಂಘಪರಿವಾರಿಯಾಗಿದ್ದ ...ಟ್ಟರನ್ನು ಮಣ್ಣುಮುಕ್ಕಿಸಿದರು. ಈ ...ಟಿಂದೆ ಇದ್ದದ್ದು ಕರ್ನಾಟಕ ರಾಜ್ಯ ...ಕ ಶಾಲಾ ನೌಕರರ ಸಂಘ. ...ಚೂರುರೊಂದಿಗೆ ಅಸಂಘಟಿತರಾಗಿದ್ದ ...ಶಾಲಾ ನೌಕರರನ್ನು ಒಂದುಗೂಡಿಸಿ ...ವಡ ತಲುಪಿದವರು ಹೊರಟ್ಟಿ.

1986ರಲ್ಲಿ ಬಸವರಾಜ ಹೊರಟ್ಟಿ ... ಲೋಕಶಕ್ತಿಯಿಂದ. ಆರ್.ಕೆ. ... 2398 ಮತಗಳ ಅಂತರದಿಂದ ...ಕ್ಕಿಸಿದ್ದರು. ಆಗ ಕ್ರಿಯಾಶೀಲ ... ಬಳಗ ಅವರ ಹಿಂದೆ ಇತ್ತು. ...ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘಟನೆಯಲ್ಲಿ ...ತು. ಹೊರಟ್ಟಿಯವರೊಂದಿಗೆ ಇದ್ದ ಕೆ.ಬಿ.ರಾಯಚೂರು ಕಾಂಗ್ರೆಸ್ ...ಸಿದ್ದರು. ಕೇವಲ 1700 ಮತ ಪಡೆದು ಸೋತುಹೋದರು. ...016 ಮತಗಳ ಅಂತರದಿಂದ ಭಾರೀ ಗೆಲುವು ದಾಖಲಿಸಿದ್ದರು. ...ನ್ನು ಕಾಪಾಡಿದ್ದು ಖಾಸಗಿ ಅನುದಾನಿತ ಮಾಧ್ಯಮಿಕ ಹಾಗೂ ... ಶಾಲೆಗಳ ಶಿಕ್ಷಕರು. ಈ ಹಂತದಲ್ಲಿ ಹೊರಟ್ಟಿ ರಾಮಕೃಷ್ಣ ...ದಿಗೆ ಗುರುತಿಸಿಕೊಂಡಿದ್ದರು. 1998ರಲ್ಲಿ ಮತ್ತೆ ಸ್ಪರ್ಧಿಸಿದ್ದ ಹೊರಟ್ಟಿಗೆ ...ಟ್ಟು ಎದುರಾಯಿತು. ಅವರಿದ್ದ ಜನತಾ ಪಕ್ಷ ಹೋಳಾಗಿತ್ತು. ...ಮಯಿಸಿದ್ದ ಜೆಡಿಎಸ್‌ನಿಂದ ಮತ್ತೆ ... ಬಿಜೆಪಿಯಿಂದ ಶಿವಮುತ್ತಪ್ಪ ...ಸಿದ್ದ. ಹೊರಟ್ಟಿ ಗೆದ್ದದ್ದು 4,496 ...ಅಂತರದಿಂದ.

...ವಲ್ಲಿ ಜೆಡಿಎಸ್‌ನಿಂದ ಮತ್ತೆ ...ಹೊರಟ್ಟಿ 7,364 ಮತ ಪಡೆದು ...ರು. ಆಗ ಆತ ಸೋಲಿಸಿದ್ದು ... ಪರಿವಾರಿ ಕುಬೇರಪ್ಪನನ್ನು. ...ಕರ ಹೊರಟ್ಟಿಗೆ ಇನ್ನೊಂದು ... ಕೂಡಿಬಂತು. ಶಿಕ್ಷಣ ...ರು. ಒಂದಿಷ್ಟು ಕೆಲಸಗಳಾದವು. ...ರವಾಗಿ ಹೊಸಧ್ವನಿಯೊಂದು ...ಂತು.

...ಮತ್ತೆ ಚುನಾವಣೆ ಎದುರಾಗಿದೆ. ... ಶಿಕ್ಷಕರು ತಮ್ಮ ಮತ ಚಲಾಯಿಸಲಿದ್ದಾರೆ. ಹುಬ್ಬಳ್ಳಿಯರೇ ಆದ ...ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯೊಂದರಲ್ಲೇ ಸುಮಾರು ...ಕ್ಕೂ ಹೆಚ್ಚು ಮತದಾರ ಸ್ನೇಹಿತರಿದ್ದಾರೆ. ಹಾವೇರಿ ಜಿಲ್ಲೆಯ 3 ...ಹೆಚ್ಚು ಶಿಕ್ಷಕರ ಪೈಕಿ ಶೇ 90ರಷ್ಟು ಜನ ಹೊರಟ್ಟಿಯ ಬೆಂಬಲಿಗರು ...ಂದ ಈ ಬಾರಿ ಕಳೆದ ನಾಲ್ಕು ಚುನಾವಣೆಗಳಿಗಿಂತ ಅವರ ...ಅಂತರ ಹೆಚ್ಚಾಗಲಿದೆ.

...ಾಜ ಹೊರಟ್ಟಿ ಈಚೆಗೆ 'ಸಾಧನೆಗಳ ಸಮರ್ಪಣೆ' ಎಂಬ ಪುಸ್ತಕದಲ್ಲಿ ...ೋರಾಟ, ಶ್ರಮ, ಕೆಲಸದ ಕುರಿತು ದಾಖಲೆ ಸಮೇತ ನೀಡಿದ್ದಾರೆ. ...ೂ ಮೊದಲು ಪ್ರಾರಂಭವಾದ ಶಾಶ್ವತ ಅನುದಾನರಹಿತ ಖಾಸಗಿ ...ೇಜುಗಳಿಗೆ ಅನುದಾನ ನೀಡಿಕೆ, ಪ್ರಥಮ ದರ್ಜೆ ಕಾಲೇಜುಗಳಲ್ಲಿ ...ಹುದ್ದೆಗಳ ಸೇರ್ಪಡೆ, ಸೇವಾ ಜ್ಯೇಷ್ಠತೆಯ ಆದ್ಯತೆಯ ಮೇಲೆ ಬಡ್ತಿ ...ವರಾಗಿದ್ದಾಗ ಹೊರಟ್ಟಿ 7,470 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಶಿಕ್ಷಕರ ಹುದ್ದೆಗೆ ಬಡ್ತಿ ನೀಡಿ ಮುಖ್ಯ ಶಿಕ್ಷಕರನ್ನಾಗಿ, ಮಾಡಿದ್ದು ಪ್ರಾಥಮಿಕ ಪ್ರೌಢಶಾಲೆಗಳ ಹಾಗೂ ಪದವಿಪೂರ್ವ ಕಾಲೇಜುಗಳ 48,313 ಹುದ್ದೆಗಳನ್ನು ಭರ್ತಿ ಮಾಡಿದ್ದು ಮಹಾಸಾಧನೆಗಳೇ.




ಹೊರಟ್ಟಿ

ಒರಿಸ್ಸಾದಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಕ್ರೈಸ್ತ ಶಿಕ್ಷಣ ಸಂಸ್ಥೆಗಳು ಪ್ರತಿಭಟನೆ ನಡೆಸಿದವು. ಕೋಮುವಾದಿ ಬಿಜೆಪಿ ಸರ್ಕಾರ ಅವರ ಮೇಲೆ ಕ್ರಮಕ್ಕೆ ಮುಂದಾಗಿತ್ತು. ಇದನ್ನು ಪ್ರತಿಭಟಿಸಿ ಆ ಆದೇಶವನ್ನು ಹಿಂಪಡೆಯುವಂತೆ ಮಾಡಿದ್ದು ಬಸವರಾಜ ಹೊರಟ್ಟಿ. ರಾಜ್ಯದಲ್ಲಿ ಅಧಿಕಾರದಲ್ಲಿರುವ ಕೋಮುವಾದಿ ಬಿಜೆಪಿ ಸರ್ಕಾರ ಶಿಕ್ಷಣವನ್ನು ಕೇಸರೀಕರಣ ಮಾಡಲು ಹೊರಟಿದೆ. ಅದಕ್ಕೆ ಅಡ್ಡಗಾಲು ಹಾಕುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಮುಳುಗಿಸಲು ಸಜ್ಜಾಗಿದೆ. ಅನುದಾನ ಕಡಿತಗೊಳಿಸುವ ಬೆದರಿಕೆಯೊಡ್ಡಿದೆ. ಈ ಬಾರಿ ಶಿಕ್ಷಕರು ಎಚ್ಚೆತ್ತುಕೊಳ್ಳಬೇಕು. ಕೋಮುವಾದಿಗಳನ್ನು ತಡೆಯಲು ಹೊರಟ್ಟಿಯನ್ನು ಗೆಲ್ಲಿಸಬೇಕು.

ಈಗಾಗಲೇ ನಡೆಯುತ್ತಿರುವ ಬಹಿರಂಗ ಸಭೆಗಳಲ್ಲಿ ಸಚಿವ ಶೆಟ್ಟರ್, ಸಂಸದ ಪ್ರಹ್ಲಾದ ಜೋಷಿ ಕೇವಲ ಬಿಜೆಪಿ ಸರ್ಕಾರದ ಸಾಧನೆಗಳ ಬಗ್ಗೆ ಹೇಳಿಕೊಳ್ಳುತ್ತಿದ್ದಾರೆ. ಶಿಕ್ಷಕರ ಸಮಸ್ಯೆಗಳ ಬಗ್ಗೆ ಚಕಾರ ಎತ್ತುತ್ತಿಲ್ಲ. ಎಲ್ಲಾ ಚುನಾವಣೆಗಳನ್ನು ಗೆದ್ದಿದ್ದೇವೆ, ಇದನ್ನೂ ಗೆಲ್ಲುತ್ತೇವೆಂದು ಬಡಾಯಿಕೊಚ್ಚಿಕೊಳ್ಳುತ್ತಿದ್ದಾರೆ. ವಿಪರ್ಯಾಸವೆಂದರೆ ಬಿಜೆಪಿ ಆರಂಭದಲ್ಲೇ ಎಡವಿದೆ. 2002ರ ತನಕ ಹೊರಟ್ಟಿಯೊಂದಿಗೆ ಇದ್ದ ಪ್ರೊ.ಸಂಕನೂರರನ್ನು ಮೊದಲಿಗೆ ಅಭ್ಯರ್ಥಿಯೆಂದು ಹೇಳಲಾಗಿತ್ತು. ಆತ ಗದಗದ ಪದವಿಪೂರ್ವ ಕಾಲೇಜಿನ ಪ್ರಾಧ್ಯಾಪಕನಾಗಿದ್ದ. ಬಿಜೆಪಿಗಳ ಸುಳ್ಳು ಭರವಸೆಗಳನ್ನು ನಂಬಿಕೊಂಡು ಓಡಾಡುತ್ತಿದ್ದ. ತನ್ನ ಹಡಬೆ ದುಡ್ಡಿನಲ್ಲಿ ಶಿಕ್ಷಕರ ಸಮ್ಮೇಳನಗಳನ್ನು ಮಾಡುತ್ತಾ ಗುರುತಿಸಿಕೊಳ್ಳುತ್ತಿದ್ದ. ಈಗ ಅವನಿಗೆ ಕೈಕೊಡಲಾಗಿದೆ.



ಕುಬೇರಪ್ಪ



ಸಂಕನೂರು

ಡಾ.ಕುಬೇರಪ್ಪ ಟಿಕೆಟ್ ಕೊಡಲಾಗಿದೆ. 25 ವರ್ಷಗಳಿಂದ ಆರೆಸ್ಸೆಸ್ ಪ್ರಚಾರವನ್ನೇ ತನ್ನ ವೃತ್ತಿಯನ್ನಾಗಿಸಿಕೊಂಡಿದ್ದ ಈತ ಕಳೆದೈದು ವರ್ಷಗಳಿಂದ ಪ್ರಿನ್ಸಿಪಾಲ್ ಎಂದು ಕರೆಸಿಕೊಳ್ಳುತ್ತಿದ್ದವ. ಜಾತಿಯಲ್ಲಿ ಬಣಜಿಗ ಲಿಂಗಾಯತ. ಕಳೆದ ಬಾರಿ ಇದೇ ಹೊರಟ್ಟಿ ಎದುರು 2267 ಓಟು ಪಡೆದು ಸೋತುಹೋಗಿದ್ದ. ಇತ್ತ ಸಂಕನೂರು ಬಿಜೆಪಿಗಳ ಬಣ್ಣ ಬಯಲಾಗುತ್ತಿದ್ದಂತೆ ಚೆಡ್ಡಿ ತೆಗೆದಿಟ್ಟು "ನಾನು ಸ್ವತಂತ್ರ ಅಭ್ಯರ್ಥಿ" ಎಂದು ಬಾಯಿಬಡಿದುಕೊಳ್ಳುತ್ತಿದ್ದಾನೆ.

ಇನ್ನು ಸೋತು ಸುಣ್ಣವಾಗಿರುವ ಕಾಂಗ್ರೆಸ್‌ನ ಬುದ್ಧಿಗೇಡಿ ರಾಜ್ಯ ನಾಯಕರು ಟಿ.ಈಶ್ವರ್ ಎಂಬ ಆಸಾಮಿಯನ್ನು ಕಣಕ್ಕಿಳಿಸಿದ್ದಾರೆ. ಈತ ಲಕ್ಷ್ಮೇಶ್ವರರಲ್ಲಿ ಚಂದನ್ ಶಿಕ್ಷಣ ಸಂಸ್ಥೆ ನಡೆಸುತ್ತಿದ್ದಾನೆ. ಸರಿಯಾಗಿ ಪಶ್ಚಿಮ ಶಿಕ್ಷಕರ ಕ್ಷೇತ್ರವನ್ನೇ ಅರಿಯದವನು. ಸಿದ್ದರಾಮಯ್ಯ ಮತ್ತು ಸತೀಶ್ ಜಾರಕಿಹೊಳಿ ಶಿಷ್ಯನಂತಿರುವ ಈಶ್ವರ್‌ಗೆ ತಾನು ಸೋಲುವುದು ಗೊತ್ತಿದ್ದರೂ ಸ್ಪರ್ಧಿಸಿದ್ದಾನೆ.

ಇಂತಹ ಅಧ್ವಾನ ಅಯೋಗ್ಯರ ನಡುವೆ ಶಿಕ್ಷಕರ ಪಾಲಿಗೆ ಆಧಾರಸ್ತಂಭದಂತಿರುವ ಬಸವರಾಜ್ ಹೊರಟ್ಟಿಯವರ ಆಯ್ಕೆ ಸುಗಮವಾಗಬೇಕು. ●



ಹೋರಾಟನಿರತ ಮಹಿಳೆಯ ಸಾವು

ಹಠಮಾರಿ ಧೋರಣೆಯ ಯಡ್ಡಿಯ ಸರಕಾರ ಕೊನೆಗೂ ಕಲಬುರ್ಗಿಯ ಪೌರ ಕಾರ್ಮಿಕಳ ಜೀವ ನುಂಗಿ ಕುಂತಿದೆ. 'ಸಂಬಳ ಕೊಡಿ ಇಲ್ಲವೆ ವಿಷ ಕೊಡಿ' ಎಂಬ ವಿನೂತನ ಚಳವಳಿ ಹಮ್ಮಿಕೊಂಡಿರುವ ಮಾಜಿ ಮಂತ್ರಿ ಎಸ್.ಕೆ.ಕಾಂತಾ ಅವರ ನೇತೃತ್ವದಲ್ಲಿ ನಡೆದಿರುವ ಈ ಹೋರಾಟ ದಿನಗಳೆದಂತೆಲ್ಲ ತಾರಕಕ್ಕೆ ಏರುತ್ತಿದ್ದರೂ ಸರಕಾರ ಜಪ್ಪಯ್ಯ ಅನ್ನುತ್ತಿಲ್ಲ. ಬದಲಾಗಿ ತನ್ನ ಪೊಲೀಸ್ ಪವರನ್ನು ಪ್ರಯೋಗಿಸಿ ಜನಪರ ಹೋರಾಟಗಾರ ಕಾಂತಾ ಅವರನ್ನು ಬೆಳಗಾಂವಿಯ ಹಿಂಡಲಗಾ ಜೇಲಿನಲ್ಲಿ ಇಟ್ಟಿದೆ. ಇದೆಲ್ಲ ಸಾಲದೆಂಬಂತೆ ಅನವಶ್ಯಕವಾಗಿ ಕಾಂತಾ ಅವರ ಮೇಲೆ ಹತ್ತೆಂಟು ಕೇಸುಗಳನ್ನು ಹಾಕುವ ಮೂಲಕ ಅವರ ಹೋರಾಟವನ್ನೂ ನಿತ್ರಾಣಗೊಳ್ಳುವಂತೆ ಮಾಡುತ್ತಿದೆ. ಇದು ನಿಜಕ್ಕೂ ಅನ್ಯಾಯದ ಪರಾಕಾಷ್ಠೆ.

ಇವತ್ತಿಗೂ ಪೌರಕಾರ್ಮಿಕರು ತಮ್ಮ ಬೇಡಿಕೆಗಳನ್ನು ಮುಂದೆ ಮಾಡಿ ನಡೆಸಿರುವ ಧರಣಿ ಮುಂದುವರೆದಿದೆ. ಈ ನಡುವೆ ಚಳವಳಿಗಾರರು ಆಮರಣ ಉಪವಾಸದಿಂದ ನಿತ್ರಾಣರಾಗಿ ಆಸ್ಪತ್ರೆ ಸೇರಿ ಜೀವದ ಜೊತೆ ಜೋಕಾಲಿ ಆಡುತ್ತಿದ್ದಾರೆ. ಸೂಕ್ಷ್ಮತೆಯನ್ನೇ ಕಳೆದುಕೊಂಡಿರುವ ಜಿಲ್ಲಾಡಳಿತ ತನ್ನ ಎಂದಿನ ಉಡಾಫೆ ಹಾಗೂ ಸರ್ವಾಧಿಕಾರಿ ಧೋರಣೆಯಿಂದ ಕಾರ್ಮಿಕಳಾದ ಅಂಬುಬಾಯಿ ಎಂಬುವವಳ ಜೀವವನ್ನೇ ಬಲಿತೆಗೆದುಕೊಂಡಿದೆ.

ಮೂರ್‍ನಾಲ್ಕು ದಿನಗಳ ಹಿಂದೆ ಚಳವಳಿನಿರತ ಅಂಬುಬಾಯಿಯನ್ನು ಪೊಲೀಸರು ಬಂಧಿಸಿದ್ದರು. ನಿರಂತರ ಚಳವಳಿಯಿಂದ ಬಸವಳಿದಿದ್ದ ಅಂಬುಬಾಯಿ ಜ್ವರದಿಂದ ಬಳಲುತ್ತಿದ್ದರಿಂದ ಆಕೆಯನ್ನು ಪೊಲೀಸರು ಸರಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದರು. ಆದರೆ ಸರಕಾರ ತಮ್ಮ ಬೇಡಿಕೆಗಳನ್ನು ಈಡೇರಿಸದೆ ಮೊಂಡು ಹಠ ಹಿಡಿದು ಕುಳಿತದ್ದು ನೋಡಿ ಅಂಬುಬಾಯಿ ಮಾನಸಿಕವಾಗಿಯೂ ಜರ್ಜರಿತಗೊಂಡಿದ್ದಳು. ಮೊದಲೆ ಗಂಡನನ್ನು ಕಳಕೊಂಡು ಹೈರಾಣಾಗಿದ್ದ ಅಂಬುಬಾಯಿಗೆ ಆಸರೆ ಎಂದಿದ್ದದ್ದು ಕಲಬುರ್ಗಿ ಮಹಾನಗರ ಪಾಲಿಕೆಯ ಪೌರಕಾರ್ಮಿಕಿಯಾಗಿ ನೌಕರಿ ಮಾತ್ರ. ಸತತ ಮೂರು ವರ್ಷಗಳಿಂದಲೂ ಪಗಾರ ಇಲ್ಲದೆ ದುಡಿಯುವ ಶಕ್ತಿ ಈ ಕಡುಬಡವಳಲ್ಲಿ ಇರುವುದಾದರೂ ಹೇಗೆ? ವಯಸ್ಸಿಗೆ ಬಂದ ಮೂವರು ಹುಡುಗಿಯರನ್ನು ಕಟ್ಟಿಕೊಂಡು ಬದುಕನ್ನು ಸಾಗಿಸುವ ಬಗೆಯಾದರೂ ಎಂತು?

ಸಹಜವಾಗಿಯೆ ಆಕೆಗೆ ಕಲಬುರ್ಗಿ ಮಹಾನಗರ ಪಾಲಿಕೆ ಸಂಬಳವೆ ದೊಡ್ಡ ದೇವರಾಗಿತ್ತು. ಅದನ್ನವಳು ಶಬರಿ ರಾಮನ ಬರವಿಗಾಗಿ ಕಾದುಕೊಂಡು ಕುಳಿತಂತೆ ಕುಳಿತಿದ್ದಳು. ಆದರೆ ಜೀವಂತಿಕೆ ಎಂಬುದೇ ಇಲ್ಲದ ಅವಿವೇಕಿ ಸರಕಾರಕ್ಕೆ ಬಡವರ ಕರುಳನ್ನು ಬಗೆದು ತಿನ್ನುವುದು ಗೊತ್ತೆ ಹೊರತು ಅವರ ಕಣ್ಣೀರನ್ನು ಒರೆಸುವ ಹೃದಯ ಅದಕ್ಕೆ ಇಲ್ಲ. ಹೀಗಾಗಿ ಅಂಬುಬಾಯಿ ಬದುಕಿನ ಆಶೆಯನ್ನೆ ತ್ಯಜಿಸಿದ್ದಳೆಂದು ಹೇಳಬಹುದು. ಏಕೆಂದರೆ ಕಾರ್ಮಿಕರ ಬೇಡಿಕೆಯನ್ನು ಮುಂದು ಮಾಡಿ ಹೋರಾಟ ನಡೆಸುತ್ತಿರುವ ಮಾಜಿ ಮಂತ್ರಿಯ ನೇತೃತ್ವದ ಚಳವಳಿಗೂ ಸರಕಾರ ಬಗ್ಗದೆ ಇರುವುದು ಆಕೆಯನ್ನು ಮಾನಸಿಕವಾಗಿ ಕುಗ್ಗಿಸಿತ್ತು. ಇದೆಲ್ಲದರಿಂದ ಜರ್ಜರಿತಳಾದ ಅಂಬುಬಾಯಿ ತನ್ನ ಜೀವವನ್ನು ಬಲಿಕೊಟ್ಟಿದ್ದಾಳೆ.

25-5-2010 ರಂದು ಈಕೆ ಸತ್ತನಂತರ ಶವವನ್ನು ಮಹಾನಗರ ಪಾಲಿಕೆಯ ಮುಂದೆ ತಂದು ಇಟ್ಟಾಗ ಅಲ್ಲಿ ಉಂಟಾದ ಸ್ಮಶಾನ ಸದೃಶ್ಯ ಎಂಥವರ ಕರುಳನ್ನೂ ಬಗೆಯುವಂತಿತ್ತು. ಯಡ್ಡಿಯ ಸರಕಾರಕ್ಕಂತೂ ಅಲ್ಲಿ ನೆರೆದ ಮಹಿಳೆಯರು ಹಾಕುತ್ತಿದ್ದ ಹಿಡಿಶಾಪ ಬೆಚ್ಚಿಬೀಳಿಸುವಂತಿತ್ತು. ಅಂಬುಬಾಯಿಯ ಸಾವಿನಿಂದ ಕಂಗೆಟ್ಟ ಪೌರಕಾರ್ಮಿಕರನ್ನು ಸಂತೈಸುವ ಬದಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ತಮ್ಮ ಅಧಿಕಾರವನ್ನು ಪ್ರಯೋಗಿಸಿ ಶವವನ್ನು ಪೋಸ್ಟ್‌ಮಾಟಮ್‌ಗೆ ಕೊಂಡೊಯ್ಯಬೇಕೆಂದಾಗ ಅಲ್ಲಿ ನೆರೆದಿದ್ದವರು "ಆಕಿನ್ನ ತಗೊಂಡ್ ಹೋಗ್ಲಿಕ್ ಬಂದೀರಾ? ಹೊಟ್ಟಿಗೆ ಊಟ ಇಲ್ದ ಆಕಿ ಸತ್ತಾಳ. ನಿಮಗೆ ಖಬರ್ ಅದ ಏನು? ಮುಟ್ಟರ ಮುಟ್ರಿ... ಆಕಿನ್ನ..." ಎಂದು ಹತ್ತಾರು ಜನ ಆಕೆಯ ಶವದ ಸುತ್ತ ಸುತ್ತುವರೆದಾಗ ಪೊಲೀಸರೆ ಹ್ಯಾಪು ಮೋರೆ ಹಾಕಿಕೊಂಡು ಹಿಂದೆ ಸರಿಯಬೇಕಾಯಿತು.

ಕಾಟಾಚಾರಕ್ಕೆಂಬಂತೆ ಜಿಲ್ಲಾಧಿಕಾರಿ ಡಾ. ಆರ್.ವಿಶಾಲ, ಪೊಲೀಸ್ ವರಿಷ್ಠಾಧಿಕಾರಿ ಪದ್ಮನಯನ ಹಾಗೂ ಪಾಲಿಕೆ ಆಯುಕ್ತ ಮನೋಜ್ ಜೈನ್ ಸರಕಾರದ ಪರವಾಗಿ ಬಂದು ನಿಂತಾಗ ಅಲ್ಲಿ ಸೇರಿದ್ದ ಎಲ್ಲರೂ ಕ್ಯಾಕರಿ ಉಗುಳಿ "ನಿಮ್ಮ ಸರಕಾರಕ್ಕೆ ತಿಳಿಸಿ" ಎನ್ನುವಂತೆ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಒಬ್ಬಾಕೆಯಂತೂ "ಇನ್ನೆಷ್ಟು ಹೆಣಬಿದ್ ಮ್ಯಾಲೆ ಸರ್ಕಾರ ನಮ್ ಕಡೆ ನೋಡ್ತೈತೋ ನೋಡ್ಲಿ....." ಎಂದು ಹೇಳಿದ್ದು ಸರಕಾರದ ಹಠಮಾರಿತನಕ್ಕೊಂದು ಸವಾಲು ಎಂಬಂತೆ ಇತ್ತು.

● ವಿಶ್ವಾರಾಧ್ಯ ಸತ್ಯಂಪೇಟೆ
satyampet1969@gmail.com

ನಾಡನ್ನು ಮಾರುತ್ತಿರುವ ದಲ್ಲಾಳಿ ಸರ್ಕಾರ!

▶▶2


ಸ್ಥಾನದಲ್ಲಿರುವುದು ದೆಹಲಿ ವಲಯ (97,125 ಕೋಟಿ ರೂ.). ಮೂರನೇ ಸ್ಥಾನದಲ್ಲಿ ಬೆಂಗಳೂರು ವಲಯವಿದೆ. ಈ ವಲಯಕ್ಕೆ ಕಳೆದ ಹತ್ತು ವರ್ಷಗಳಲ್ಲಿ ಹರಿದುಬಂದಿರುವ ವಿದೇಶಿ ಬಂಡವಾಳ ಎಷ್ಟು? ಕೇವಲ 29,850 ಕೋಟಿ ರೂಪಾಯಿಗಳು. ಭಾರತಕ್ಕೆ ವಿದೇಶಿ ಬಂಡವಾಳದ ಹರಿವಿನ ಮೇಲ್ವಿಚಾರಣೆ ಮತ್ತು ಉತ್ತೇಜನ ಮಾಡುವ ಕೇಂದ್ರ ಸರ್ಕಾರದ ಡಿಪಾರ್ಟ್‌ಮೆಂಟ್ ಆಫ್ ಇಂಡಸ್ಟ್ರಿಯಲ್ ಪಾಲಿಸಿ ಅಂಡ್ ಪ್ರಮೋಷನ್ ಒದಗಿಸಿರುವ ಅಂಕಿಅಂಶದ ಪ್ರಕಾರ ಭಾರತವು 4,68,000 ಕೋಟಿ ರೂ. ಬಂಡವಾಳದ ಹೂಡಿಕೆಯ ಭರವಸೆ ಪಡೆದುಕೊಂಡಿದ್ದರೂ ಕಳೆದ ಹತ್ತು ವರ್ಷಗಳಲ್ಲಿ ಭಾರತ ವಾಸ್ತವವಾಗಿ ಪಡೆದುಕೊಂಡ ವಿದೇಶಿ ಬಂಡವಾಳ ಕೇವಲ 2,35,992 ಕೋಟಿ ರೂಪಾಯಿಗಳು ಮಾತ್ರ. ಅದರಲ್ಲಿ ಕರ್ನಾಟಕದ ಪಾಲು ಎಷ್ಟು ಗೊತ್ತೆ? ಕೇವಲ 5,219 ಕೋಟಿ ರೂಪಾಯಿಗಳು ಮಾತ್ರ. ಅಂದರೆ ಒಟ್ಟಾರೆ ದೇಶದಲ್ಲಾದ ಬಂಡವಾಳ ಹೂಡಿಕೆಯ ಶೇ.2.21ರಷ್ಟು ಮಾತ್ರ!!

ಹೀಗೆ ಸರ್ಕಾರದ ಅಂಕಿಅಂಶಗಳೇ ಹೇಳುವಂತೆ 2000–2010ರ ನಡುವೆ ಕರ್ನಾಟಕ ಪಡೆದುಕೊಂಡ ವಿದೇಶಿ ಬಂಡವಾಳ ಹೆಚ್ಚೆಂದರೆ 29,000 ಕೋಟಿ, ಕಡಿಮೆಯೆಂದರೆ 5,219 ಕೋಟಿ ರೂ.ಗಳು ಮಾತ್ರ. ಅದೂ 2000ದ ಜೂನ್‌ನಲ್ಲಿ ಆಗಿನ ಸರ್ಕಾರ ಬೃಹತ್ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಮಾಡಿದ ನಂತರ ಎಂಬುದನ್ನೂ ಮರೆಯುವಂತಿಲ್ಲ. ಆದ್ದರಿಂದಲೇ ಈಗ ಯಡಿಯೂರಪ್ಪ ಮತ್ತೊಂದು ಜಾಗತಿಕ ಸಮಾವೇಶ ಮಾಡಿದ ಕೂಡಲೇ ಕಳೆದ ಹತ್ತು ವರ್ಷಗಳಲ್ಲಿ ರಾಜ್ಯ ಪಡೆದ ವಿದೇಶಿ ಬಂಡವಾಳದ ಹತ್ತು ಪಟ್ಟು ಹೆಚ್ಚಿನ ಬಂಡವಾಳ ಬರುತ್ತದೆ ಎಂಬ ಬಿಜೆಪಿ ಸರ್ಕಾರದ ಬೊಗಳೆಗಳು ಎಷ್ಟು ಸುಳ್ಳು ಎಂಬುದು ಮೇಲ್ನೋಟಕ್ಕೆ ಸಾಬೀತಾಗುತ್ತದೆ.

ಇನ್ನು ಮೂರು ಲಕ್ಷ ಉದ್ಯೋಗಗಳು ಸಿಗುವ ವಿಷಯ. ಮೂರು ಲಕ್ಷ ಕೋಟಿ ಬಂಡವಾಳವೇ ಇಲ್ಲವೆಂದ ಮೇಲೆ ಮೂರು ಲಕ್ಷ ಉದ್ಯೋಗ ಎಲ್ಲಿಂದ ಸೃಷ್ಟಿಯಾಗುತ್ತದೆ? ಹೀಗಾಗಿ ಅದು ಮತ್ತೊಂದು ಸುಳ್ಳು. ಈಗಲೂ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಒಂದು ಕೋಟಿ ಬಂಡವಾಳಕ್ಕೆ ಹೆಚ್ಚೂ ಕಡಿಮೆ 20 ಉದ್ಯೋಗಗಳನ್ನು ಸೃಷ್ಟಿಸುತ್ತವೆ. ಆದರೆ ಭಾರಿ ಬಂಡವಾಳ ಹೂಡುವ ಉದ್ಯಮಗಳಲ್ಲಿ ಬಂಡವಾಳ ಹೆಚ್ಚಿದಷ್ಟು ಉದ್ಯೋಗದ ಅನುಪಾತ ಕಡಿಮೆಯಾಗುತ್ತಲೇ ಹೋಗುತ್ತದೆ. ಭಾರಿ ಕೈಗಾರಿಕೆಗಳೆಂದು ಪರಿಗಣಿಸಲ್ಪಡುವ ಸಿಮೆಂಟ್, ಆಟೋಮೊಬೈಲ್, ಔಷಧ ಮತ್ತು ರಾಸಾಯನಿಕ ಮತ್ತು ಉಕ್ಕು ಕ್ಷೇತ್ರಗಳಲ್ಲೂ ಇತ್ತೀಚಿನ ವರ್ಷಗಳಲ್ಲಿ ತಂತ್ರಜ್ಞಾನ ಬೆಳೆದಿದ್ದು ಪ್ರತಿ ಕೋಟಿ ರೂಪಾಯಿ ಬಂಡವಾಳ ಸೃಷ್ಟಿಸುವ ಉದ್ಯೋಗದ ಸಂಖ್ಯೆ ಕಡಿಮೆಯಾಗುತ್ತಾ ಹೋಗುತ್ತಿದೆ. ಈ ಮೊದಲು ಒಂದು ಕೋಟಿಗೆ 5–7 ಉದ್ಯೋಗಗಳು ಸೃಷ್ಟಿಯಾಗುತ್ತಿದ್ದವು. ಆದರೆ ಈಗ ಸರ್ಕಾರವೇ ಹೇಳುವಂತೆ 3 ಲಕ್ಷ ಕೋಟಿಗೆ 3 ಲಕ್ಷ ಉದ್ಯೋಗಗಳು. ಅಂದರೆ ಒಂದು ಕೋಟಿ ಬಂಡವಾಳಕ್ಕೆ ಒಂದು ಉದ್ಯೋಗ! ಆದರೆ ವಾಸ್ತವವಾಗಿ ಇದು ಕೂಡಾ ಉತ್ಪ್ರೇಕ್ಷೆಯೇ! ಏಕೆಂದರೆ ಈಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಶ್ರಮಶಕ್ತಿಯನ್ನು ಬೇಡುವ ಸಿಮೆಂಟ್, ಆಟೊಮೊಬೈಲ್, ಉಕ್ಕು ಕ್ಷೇತ್ರದಲ್ಲೂ 7 ಕೋಟಿ ರೂ. ಬಂಡವಾಳ ಒಂದು ಉದ್ಯೋಗವನ್ನು ಸೃಷ್ಟಿಸುತ್ತದೆ. ಅಷ್ಟೆ. ಟಾಟಾದವರು ಬಂಗಾಳದ ಸಿಂಗೂರಿನಲ್ಲಿ 1,000 ಕೋಟಿ ರೂ.ಗಳ ನಾನೋ ಕಾರಿನ ಘಟಕ ಹಾಕಿದಾಗ ಅದು ಹತ್ತು ಸಾವಿರ ಉದ್ಯೋಗಗಳನ್ನು ಸೃಷ್ಟಿಸುತ್ತದೆ ಎಂದು ಸರ್ಕಾರ ಹೇಳಿತ್ತು, ಆದರೆ ಅದು ಕೇವಲ 750 ಶಾಶ್ವತ ಉದ್ಯೋಗಗಳನ್ನು ಮತ್ತು 1,000 ಅವಲಂಬಿತ ಉದ್ಯೋಗಗಳನ್ನು ಮಾತ್ರ ಸೃಷ್ಟಿಸಲು ಸಾಧ್ಯ ಎಂಬುದನ್ನು ನಂತರ ಟಾಟಾದವರೇ ಒಪ್ಪಿಕೊಂಡರು. ಹೀಗಾಗಿ ಮೂರು ಲಕ್ಷ ಕೋಟಿ ಬಂಡವಾಳ ಹೂಡಿಕೆಯಾದರೂ ಮೂರು ಲಕ್ಷ ಉದ್ಯೋಗಗಳು ಸೃಷ್ಟಿಯಾಗುವುದು ಕನಸಿನ ಮಾತು!

ಈ ಸಮಾವೇಶದಲ್ಲಿ ಬಂಡವಾಳ ಹೂಡಲಿರುವ ಉದ್ಯಮಗಳಿಗೆ ಸರ್ಕಾರ ಏಳು ವಿಶೇಷ ಆರ್ಥಿಕ ವಲಯಗಳನ್ನು (SEZ) ರೂಪಿಸಲಿದೆ. ಧಾರವಾಡ, ಕೋಲಾರ ಹಾಗೂ ಮೈಸೂರುಗಳಲ್ಲಿ ಐಟಿ ಉದ್ಯಮಗಳು, ಬೆಂಗಳೂರಿನ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಏರೋಸ್ಪೇಸ್ ವಲಯ, ಹಾಸನದ ಬಳಿ ಆಹಾರ, ಟೆಕ್ಸ್‌ಟೈಲ್ಸ್ ಮತ್ತು ಔಷಧ ಕೈಗಾರಿಕಾ ವಲಯ ಮತ್ತು ಬೀದರ್ ಹಾಗೂ ಗುಲ್ಬರ್ಗಗಳಲ್ಲಿ ಇಂಡಸ್ಟ್ರಿಯಲ್ ಪಾರ್ಕ್‌ಗಳನ್ನು ನಿರ್ಮಿಸುವುದಾಗಿ ಸರ್ಕಾರ ಹೇಳುತ್ತಿದೆ. ಮೇಲಿನ ಉದ್ಯಮಗಳ ಬಗೆಗಳನ್ನೇ ನೋಡಿದರೂ ಅವು ಹೆಚ್ಚಿನ ಬಂಡವಾಳ ಸಾಂದ್ರತೆ ಹೊಂದಿರುವ ಮತ್ತು ಹೆಚ್ಚಿನ ವಿದ್ಯಾರ್ಹತೆ ಮತ್ತು ಕೌಶಲ್ಯವನ್ನು ಬೇಡುವ ಉದ್ಯೋಗಗಳೆಂದು ಅರ್ಥವಾಗುತ್ತದೆ. ಇವು ಮೂರು ಲಕ್ಷ ಉದ್ಯೋಗಗಳನ್ನು ಸೃಷ್ಟಿ ಮಾಡುವುದುಂಟೆ?

ಸರ್ಕಾರದ ಪ್ರಕಟಣೆಗಳು ತಿಳಿಸುವಂತೆ ಈ ಜಾಗತಿಕ ಸಮಾವೇಶದ ಮೂಲಕ ಕರ್ನಾಟಕದಲ್ಲಿ ಹೂಡಿಕೆ ಮಾಡಲಿರುವ ಪ್ರಮುಖ ವಿದೇಶಿ ಉದ್ಯಮಗಳೆಂದರೆ ಆರ್ಸೆಲರ್ ಮಿತ್ತಲ್, ಪೊಸ್ಕೋ ಮತ್ತು ಲಾಫರೇಜ್ ಕಂಪನಿಗಳು. ಇವಲ್ಲದೆ ದೇಸೀ ಕಂಪನಿಗಳಾದ ಒಎನ್‌ಜಿಸಿ,



ಜೆಎಐಎಲ್, ರಿಲೈಯನ್ಸ್ ಕಂಪನಿಗಳು ಸಹ ದೊಡ್ಡ ಮಟ್ಟದಲ್ಲಿ ಬಂಡವಾಳ ಹೂಡುವ ನಿರೀಕ್ಷೆ ಇವೆ.

ಇದರಲ್ಲಿ ಪ್ರಮುಖವಾದದ್ದು ಮಿತ್ತಲ್ ಮತ್ತು ಪೋಸ್ಕೋ ಕಂಪನಿಗಳು. ಮಿತ್ತಲ್ ಕಂಪನಿ 30,000 ಕೋಟಿ ರೂ. ಬಂಡವಾಳ ಹೂಡಿ ಬೃಹತ್ ಉಕ್ಕು ಕಾರ್ಖಾನೆಯನ್ನು ಸ್ಥಾಪಿಸುವ ಇರಾದೆಯನ್ನು ಕಳೆದ ಕೆಲ ವರ್ಷಗಳಿಂದ ತೋರುತ್ತಾ ಬಂದಿದೆ. ವಿಶ್ವದಲ್ಲೇ ದೊಡ್ಡ ಸ್ಟೀಲ್ ಕುಳವಾದ ಈ ಲಕ್ಷ್ಮೀ ಮಿತ್ತಲ್ ಸಂಸ್ಥೆ ಪ್ರಧಾನವಾಗಿ ಸುಧಾರಿತ ತಂತ್ರಜ್ಞಾನ ಬಳಸಿ ಹೆಚ್ಚಿನ ಲಾಭದತ್ತ ಗಮನ ಇಟ್ಟಿರುವ ಕಂಪನಿಯೇ ಹೊರತು ಹೆಚ್ಚಿನ ಉದ್ಯೋಗ ಸೃಷ್ಟಿಸುವ ಕಂಪನಿಯಲ್ಲ. ಇಲ್ಲಿ ಅದರ ಕಣ್ಣಿರುವುದು ಸುಲಭವಾಗಿ ಸಿಗುವ ಅದಿರಿನ ಮೇಲೆ ಮತ್ತು ತುಂಗಭದ್ರ ಡ್ಯಾಮಿನಿಂದ ಸಿಗುವ ನೀರಿನ ಮೇಲೆಯೇ ವಿನಃ ಕಾರ್ಮಿಕರ ಕ್ಷಮತೆಯ ಮೇಲಲ್ಲ. ಇಡೀ ಪ್ರಪಂಚದಾದ್ಯಂತ ತನ್ನ ಸ್ಥಾವರಗಳನ್ನು ಹೊಂದಿರುವ ಈ ಕಂಪನಿ ಈವರೆಗೆ ಸೃಷ್ಟಿಸಿರುವ ಉದ್ಯೋಗದ ಸಂಖ್ಯೆ ಒಂದು ಲಕ್ಷವನ್ನು ದಾಟುವುದಿಲ್ಲ.

ಇನ್ನು ಪೊಸ್ಕೋ ಎಂಬ ಕೊರಿಯನ್ ಕಂಪನಿಯದ್ದೂ ಇದೇ ಕಥೆ. ಉದ್ಯೋಗದ ಭರವಸೆ ನೀಡಿ ಈಗಾಗಲೇ ಒರಿಸ್ಸಾದಲ್ಲಿ ತನ್ನದೇ ಆದ ಉಕ್ಕು ಸ್ಥಾವರ ಹೊಂದಿರುವ ಈ ಪೊಸ್ಕೋ ಸಂಸ್ಥೆ ಆ ನಂತರ ತಾನು ಹೇಳಿದಷ್ಟು ಉದ್ಯೋಗವನ್ನೂ ಸೃಷ್ಟಿಸಲಿಲ್ಲ, ಸೃಷ್ಟಿಸಿದ ಉದ್ಯೋಗಗಳಿಗೆ ಬೇಕಾದಷ್ಟು ವಿದ್ಯಾರ್ಹತೆ ಇಲ್ಲವೆಂದು ಸ್ಥಳೀಯರಿಗೆ ಉದ್ಯೋಗವನ್ನೂ ನೀಡಲಿಲ್ಲ. ಈ ಸ್ಥಾವರಕ್ಕಾಗಿ ಜಮೀನು ಕಳೆದುಕೊಂಡ ಆದಿವಾಸಿಗಳು ಮತ್ತು ರೈತರು ಈಗ ಅದರ ವಿರುದ್ಧ ಜೀವನ್ಮರಣದ ಹೋರಾಟ ನಡೆಸುತ್ತಿರುವಾಗಲೇ ಈ ಪೊಸ್ಕೋ ಕರ್ನಾಟಕದತ್ತ ಮುಖ ಮಾಡಿದೆ.



ಹೀಗೆ ಬಿಜೆಪಿ ಸರ್ಕಾರ ಬೊಗಳೆ ಬಿಡುವಂತೆ ಈ ಜಾಗತಿಕ ಹೂಡಿಕೆದಾರರ ಸಮಾವೇಶವು ಕರ್ನಾಟಕಕ್ಕೆ ಕೊಚ್ಚಿಕೊಂಡಷ್ಟು ಬಂಡವಾಳವನ್ನೂ ತರುವುದಿಲ್ಲ, ಉದ್ಯೋಗವನ್ನು ಸೃಷ್ಟಿಸುವುದಿಲ್ಲ.

ಆದರೆ ಅದೇ ಸಮಯದಲ್ಲಿ ಸರ್ಕಾರದ ಮತ್ತು ಈ ಕಂಪನಿಗಳ ನಿಮಿತ್ತವೇ ಇಲ್ಲದಂತೆ ತಮ್ಮದೇ ಜಮೀನಿನಲ್ಲಿ ಕೃಷಿ ಮಾಡಿಕೊಳ್ಳುತ್ತಾ ಮನೆಮಕ್ಕಳೆಲ್ಲಾ ಉದ್ಯೋಗ ಕಂಡುಕೊಂಡಿರುವ ಲಕ್ಷಾಂತರ ರೈತ ಕುಟುಂಬಗಳನ್ನು ಮಾತ್ರ ನಿರುದ್ಯೋಗಿಗಳನ್ನಾಗಿ ಮಾಡುವುದು ಖಂಡಿತ. ಈ ನಾಡಿನ ರೈತರಿಗೆ ವಿಪತ್ತನ್ನು, ಬಡವರ ಮತ್ತು ಮಧ್ಯಮ ವರ್ಗದ ಬದುಕಿಗೆ ಕಂಟಕವನ್ನೂ ಸೃಷ್ಟಿಸುವುದಂತೂ ನಿಜ. ಏಕೆಂದರೆ ಈ ಬಂಡವಾಳಿಗರು ಬೇರೆ ರಾಜ್ಯಗಳಿಗೆ ಹೋಗದೆ ನಮ್ಮ ರಾಜ್ಯಕ್ಕೆ ಬರಬೇಕೆಂದು ಆಕರ್ಷಿಸಲು ಕರ್ನಾಟಕ ಸರ್ಕಾರ ಹಲವಾರು ರಿಯಾಯತಿಗಳನ್ನೂ, ವಿನಾಯತಿಗಳನ್ನೂ, ಸಹಾಯಧನವನ್ನೂ ನೀಡುತ್ತಿದೆ. ಉದ್ರಿಯಾಗಿ ಅಥವಾ ಕಡಿಮೆ ಬೆಲೆಯಲ್ಲಿ ಭೂಮಿ, ವಿದ್ಯುತ್, ನೀರನ್ನು ಒದಗಿಸಲಿದೆ. ಇವೆಲ್ಲವೂ ಹೆಚ್ಚುವರಿಯಾಗಿ ಬೇರೆಲ್ಲಿಂದಲೋ ಬರುವುದಿಲ್ಲ, ಈವರೆಗೆ ಈ ನಾಡಿನ ಜನತೆಯ ಬಳಿ ಇದ್ದದ್ದನ್ನೇ ಕಿತ್ತು ಈ ಲಾಭಕೋರ ಕಂಪನಿಗಳಿಗೆ ಕೊಡಲಾಗುತ್ತದೆ.

ಉದಾಹರಣೆಗೆ ಮಿತ್ತಲ್ ಕಂಪನಿಗೆ ಕರ್ನಾಟಕ ಸರ್ಕಾರ ಬಿಡಿಗಾಸಿನ ಬೆಲೆಗೆ ಬಳ್ಳಾರಿಯ ಕುಡಿತಿನಿಯ ಬಳಿ 4,500 ಎಕರೆ ಫಲವತ್ತಾದ ಜಮೀನನ್ನು ಕೊಡಲು ಎಲ್ಲಾ ಸಿದ್ಧತೆಗಳನ್ನು ನಡೆಸಿದೆ. ಆ ಜಮೀನಿನ ಶೇ.60 ರಷ್ಟು ಭಾಗದಲ್ಲಿ ಸಣ್ಣ ಹಾಗೂ ಅತಿಸಣ್ಣ ರೈತರು ವರ್ಷಕ್ಕೆ ಒಂದೆರಡು ಬೆಳೆ ಬೆಳೆದು ಇದ್ದುದ್ದರಲ್ಲಿ ಬೀದಿಪಾಲಾಗದೆ ಬದುಕುತ್ತಿದ್ದರು. ಈಗ ಈ ಯೋಜನೆಯ ಮುಖಾಂತರ ಆ ಭಾಗದ ಸಾವಿರಾರು ರೈತರು ಬೀದಿಪಾಲಾಗಲಿದ್ದಾರೆ. ಅದೇರೀತಿ ಬಿಜೆಪಿ ಸರ್ಕಾರವು ಈ ಜಾಗತಿಕ ಸಮಾವೇಶಕ್ಕೆ ಮುನ್ನವೇ 50,000 ಎಕರೆ ಜಮೀನನ್ನು ವಶಪಡಿಸಿಕೊಳ್ಳುವ ನೋಟಿಸು ನೀಡಿದ್ದು ಅವನ್ನು ಈ ಕಂಪನಿಗಳಿಗೆ ಪರಭಾರೆ ಮಾಡಲಿದೆ. ಅದೇ ರೀತಿ ಇನ್ನೂ 1 ಲಕ್ಷ ಎಕರೆ ಜಮೀನನ್ನು ಅಧಿಕವಾಗಿ ಈ ಕಂಪನಿಗಳಿಗೆಂದು ಗುರುತಿಸಲಾಗಿದೆ. ಒಂದು ಎಕರೆ ಭೂಮಿ 5 ಜನಕ್ಕೆ ಕೆಲಸ ನೀಡಿ 5 ಜನರನ್ನೂ ಸಾಕುತ್ತಿತ್ತು ಎಂದಿಟ್ಟುಕೊಂಡರೂ ಈ ಸಮಾವೇಶದ ಮೂಲಕ ಬಿಜೆಪಿ ಸರ್ಕಾರ ಈ ಬಾಬತ್ತಿನಲ್ಲೇ ಕನಿಷ್ಟ ಏಳು ಲಕ್ಷಕ್ಕೂ ಹೆಚ್ಚು ಜನರನ್ನು ಬೀದಿಪಾಲು ಮಾಡಲಿದೆ. ಈ ಕಂಪನಿಗಳು ಮೂರು ಲಕ್ಷ ಉದ್ಯೋಗವನ್ನು ಸೃಷ್ಟಿಸಲು ಸಾಧ್ಯವೇ ಇಲ್ಲವೆಂದು ಈಗಾಗಲೇ ನೋಡಿದ್ದೇವೆ. ಆದರೆ ಉಳುವ ಯೋಗ್ಯ ಭೂಮಿಯನ್ನು ಕಂಪನಿಗಳಿಗೆ ಪರಭಾರೆ ಮಾಡುವ ಮೂಲಕ ಸುಮಾರು ಏಳು ಲಕ್ಷ ಉದ್ಯೋಗಗಳನ್ನು ಕಸಿಯುವುದಂತೂ ಖಾತರಿ.

ಹಾಗೆಯೇ ಈ ಕಂಪನಿಗಳು ತಮ್ಮ ಬಂಡವಾಳ ಹೂಡುತ್ತವೆ ಎಂಬುದೇ ಒಂದು ಬಗೆಯ ಕುಚೋದ್ಯ. ಏಕೆಂದರೆ ಅವರು ಇಲ್ಲಿ ಹೂಡುತ್ತಾರೆ ಎನ್ನಲಾಗುವ ಲಕ್ಷಾಂತರ ಕೋಟಿ ರೂಪಾಯಿ ಬಂಡವಾಳದಲ್ಲಿ ಅವರ ಹೂಡುವ ಪಾಲು ಶೇ.20 ದಾಟುವುದಿಲ್ಲ, ಉಳಿದ ... ಯಾವ ಸರ್ಕಾರವು ... ಕಡಿಮೆ ಬಡ್ಡಿಯ ದ... ಬಂಡವಾಳವನ್ನು ಸಾ... ಒದಗಿಸುತ್ತದೆಯೋ ಅಲ್ಲಿ ... ಉದ್ಯಮ ಹೂಡುತ್ತಾರೆ. ... ಸರ್ಕಾರ ಕಿಂಚಿತ್ತೂ ಬಡ್ಡಿ ... ಸದೆ ಸಾಲವನ್ನು ಒದ... ಭರವಸೆಯ ಮೇಲೆ ... ಕಂಪನಿಗಳನ್ನು ಆಕರ್ಷಿ... ಸರ್ಕಾರ ಎಲ್ಲಿಂದ ದುಡ್ಡನ್ನು ... ತ್ತದೆ? ನಮ್ಮ ತೆರಿಗೆ ಹಣ... ಬಜೆಟ್ಟುಗಳಲ್ಲಿ ನಮ್ಮ ... ರಸ್ತೆ ಶಾಲೆಗೆ, ಪಡಿತರಕ್ಕೆ ... ಬೇಕಾದ ಹಣವನ್ನು ... ಅವರಿಗೆ ಕೊಡುವುದ... ಬ್ಯಾಂಕುಗಳಲ್ಲಿ ನಾವಿಟ್ಟಿರುವ ಉಳಿತಾಯದ ಹಣ... ಅಂದರೆ ಹಣ ನಮ್ಮದು. ಲಾಭ ಅವರದು. ... ಸರ್ಕಾರ ಅವರಿಗೆ ಕೊಡುವ ಸಾಲವನ್ನು ಸುಲಭ... ವಾಪಸ್ ತೀರಿಸಲು ಸಹಾಯವಾಗುವಂತೆ ಹಲ... ಲಾಭದ ದಾರಿಗಳನ್ನು ಕೊಟ್ಟಿದೆ. ಉಚಿತ ಜ... ತೆರಿಗೆ ವಿನಾಯತಿ, ಖಚಿತ ಲಾಭದ ಖಾತರಿ, ... ವಿದ್ಯುತ್, ಕಡ್ಡಾಯ ಖರೀದಿ ಇನ್ನಿತರ ಈ ನಾಡಿನ ಯಾ... ರೈತನಿಗೂ ಇಲ್ಲದ, ನಾಗರಿಕನಿಗೂ ಇಲ್ಲದ, ಸಣ್ಣ ... ಬಂಡವಾಳಿಗರಿಗೂ ಇಲ್ಲದ ಅಪಾರ ಲಾಭ ಸೌಲಭ್ಯ... ಈ ಕಂಪನಿಗಳಿಗೆ ಒದಗಿಸುತ್ತದೆ. ಇವುಗಳಿಗೆ ಕೆ... ಸೌಲಭ್ಯದಿಂದ ಉಂಟಾಗುವ ಖೋತಾವನ್ನು ... ಸಹಾಯಧನವನ್ನು ಕಡಿಮೆ ಮಾಡುವ ಮೂಲಕ ... ನಾಡಿನ ಜನರಿಗೆ ಕೊಡುತ್ತಿದ್ದ ವಿದ್ಯುತ್, ನೀರು ... ಶುಲ್ಕವನ್ನು ಹೆಚ್ಚಿಸುವ ಮೂಲಕ, ರೈತರ ಜ... ಅತ್ಯಂತ ಕಡಿಮೆ ದರವನ್ನು ಕೊಟ್ಟು ಬೀದಿಪಾಲು ಮಾ... ಮೂಲಕ ಸರಿದೂಗಿಸಿಕೊಳ್ಳುತ್ತದೆ.

ಹೀಗೆ ನಮ್ಮ ಸಂಪನ್ಮೂಲವನ್ನು ಬಿಡಿಗಾಸಿ... ವಿದೇಶಿ ಕಂಪನಿಗಳಿಗೆ ಕೊಟ್ಟು, ಈ ನಾಡಿನ ಜ... ಸುಲಿದು ಆ ಕಂಪನಿಗಳ ಲಾಭವನ್ನು ಹೆಚ್ಚಿಸುವುದ... ಜಾಗತೀಕ ಬಂಡವಾಳ ಹೂಡಿಕೆದಾರರ ಸಮಾ... ಪರಿಣಾಮ. ಏಕೆಂದರೆ ಬಿಜೆಪಿ ಸರ್ಕಾರಕ್ಕೆ ಈ ... ನಾಗರಿಕರು ಕೊಡುತ್ತಿರುವ ತೆರಿಗೆ ಹಣ ಸಂಪನ್ಮೂಲ... ವುದೇ ಇಲ್ಲ, ಡಾಲರ್ ಬಂಡವಾಳ ಮಾತ್ರ ಸಂಪನ್ಮೂ... ಸುತ್ತದೆ. ಈ ದೇಶದ ಕೃಷಿಯಲ್ಲಿ ಲಕ್ಷಾಂತರ ಉ... ಸೃಷ್ಟಿಯಾಗುತ್ತಿರುವುದು ಅವರಿಗೆ ಉದ್ಯೋಗವೆನಿಸು... ಈ ಕಂಪನಿಗಳು ಸೃಷ್ಟಿಸುವ ಉದ್ಯೋಗ ಮ... ಉದ್ಯೋಗವಾಗಿ ಕಾಣುತ್ತದೆ. ಆದ್ದರಿಂದಲೇ ರೈತರ ಜ... ವಶವಾಗುವುದರಿಂದ ರೈತರ ಉದ್ಯೋಗಗಳು ನಾ... ವುದು ಕಾಣುವುದೇ ಇಲ್ಲ. ಎಲ್ಲಕ್ಕಿಂತ ಹೆಚ್ಚಾ... ಜಾಗತೀಕರಣದ ಕಾಲಘಟ್ಟದಲ್ಲಿ ಡಾಲರಿನ ಮುಂ... ದೇಶದ ಜನರು ಅವರ ಕಣ್ಣಿಗೆ ನಿವಾರಿಸಿಕೊಳ್ಳ... ಹೊರೆಯಂತೆ ಕಾಣುತ್ತಿದೆಯೇ ವಿನಃ ಈ ದೇಶದ ನಿ... ಮಾಲೀಕರಂತಲ್ಲ.


ಇದು ದೇಶಭಕ್ತ ಬಿಜೆಪಿಗಳ ಅಸಲಿ ಬ್ರಿಟಿಷ್ ... ಭಾವ.

ಕಾಂಗ್ರೆಸ್ಸಿನ ಮನಮೋಹನ್ ಸಿಂಗ್‌ದೂ ... ಮನೋಭಾವ. ಮೊನ್ನೆ ಯುಪಿಎ ಸರ್ಕಾರಕ್ಕೆ ... ವರ್ಷ ತುಂಬಿದ್ದಕ್ಕೆ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ... ಮಂತ್ರಿಗಳು ಶುರು ಮಾಡಿದ್ದೇ "ಈ ದೇಶ ಬಿ... (ನೂರು ಕೋಟಿ) ಡಾಲರ್...ಸಾರಿ ಬಿಲಿಯನ್ ಜ... ಇರುವ ದೇಶ" ಎಂದು. ಅಂದರೆ ಕನಸುಮನಸ... ಡಾಲರನ್ನೇ ಕನಸುವ ಜನರೇ ನಮ್ಮನ್ನು ಆಳು... ಇದು ಈ ದೇಶದ ಜನ ಎದುರಿಸುತ್ತಿರುವ ಅತಿ... ಸವಾಲು.

ಜನ ಸಂಗಮ ದೇವ

ಮೈಮನವ ಸುತ್ತಿ ಉಸಿರು ಕಟ್ಟಿಸಿದ
ಕರ್ಮಲತೆಯನ್ನು ಕಿತ್ತೊಗೆದ ಅಣ್ಣನ
ದಿಟದ ದನಿಯ ಕೊರಳನ್ನು
ಕೆಂಪರಿವೆಯ ತೆರೆದ ಲಿಂಗು
ಅಲಂಕರಿಸಿತ್ತು!
ಕೇರಿಕೇರಿಯ ಮನಮನವ
ಮಾಮನೆಯ ಅರಿವು ತೆಕ್ಕೈಸಿತ್ತು!
*****
ಭರವಸೆಯ ಬೆಳಕು
ಸಂದಿಹೋದ ಬಳಿಕ
ಗುಡಿಯ ದೇವಂಗಳ ತಿಮಿರ
ಬಯಲ ಅಲಯಕ್ಕಮರಿ
ಕಲ್ಯಾಣದ ಬೆಳೆ, ಕಣದಲ್ಲೇ ಉಳಿದು
ಕಳ್ಳ-ಕಾಕರ ಕೊಳ್ಳೆಯಾಯಿತು!
ಭಾರವೆನಿಸಿದ ಕುರುಹು ದೇವರು
ದಾರಹಿಡಿದು ಎದೆಯ ಮೇಲೆ
ಜೋತಿತು!
ಬರುಬರುತ, ದಾರ ಉದ್ದವಾಗಿ
ಬದಿಗೆ ಸರಿದು
ದಾರ ಹೆಗಲ ಮೇಲೆ
ಹಳೆಯ ಜನಿವಾರದಂತೆಸೆಯಿತು!
ಮೇಲುಕುಲದಟ್ಟ ಬೆಟ್ಟದ
ಬುದ್ಧೋರಿಗೆ-ಸಿರಿಸಿದ್ಧಿ ವೃದ್ಧಿಯ
ಏಣಿಯಾಯಿತು, ತೋರುಂಬ ಫೇಣಿಯಾಯಿತು!
ಕಿಲುಬು ಕಾಸಿನ ಕೂಲಿಕಸುಬುಗಳ
ಭಕ್ತಗಣಕ್ಕೆ-ಮೂಲ ಕಾಯಕದ
ಭವವೇ ಕೈಲಾಸವಾಯಿತು!
*****
ಅದೋ, ಅಲ್ಲಿ-
ದಿಗಂತದಂಚಿನಲ್ಲಿ;
ಸಕಲ ಜನಸಂಗಮ ದೇವ
ಮೆಚ್ಚಿ ಅಹುದಹುದೆಂಬ
ನಿರ್ಮತದ, ನಿರ್ಲಿಂಗ ಸಂಗಿಗಳ
ಸೆಳೆ ಮಿಂಚು!
ನವ ಶರಣ ಸಂದೋಹ ಕಮ್ಮಟದ
ಜಾಗಟೆಯ ಕಂಚು!

• ಬಿ. ರಾಜಣ್ಣ



...ಾವಿನ ಬೆಲೆನೂ ಶ್ರೇಣೀಕೃತವಾಗಿರೊ ದೇಶ ನಮ್ದು!

...ಂಗಳೂರು ಬಳಿ ವಿಮಾನ ಬಿದ್ದು ಉರಿದು ...ಸುದ್ದಿ ಕೇಳಿದ ಕಾಳಮಾವ ಲೊಚಗರಿದು, ...ಳ ಕೃಟ್ಟ ಸಾವು ಬುಡಪ್ಪ. ಜೀವ ಬ್ಯರಕೆ ...ೋದ್ರು ಅಂದ್ರೆ ಸದರವಾಗ ಮಾತೆ" ಎಂದ. ...ಕ್ಕಳೂ ಇದ್ದವಂತೆ ಕಣ ಮಾವ" ಎಂದಳು

...ಮು ಲು ಸೀ ಮ

...ಪಟ್ಟೆಪುರಾಣ

ಬಿ. ಚಂದ್ರೇಗೌಡ

...ಳನ್ನಲ್ಲ ಯಾಕ್ಲೆ ಕರಕಂಡೋಗಬೇಕು? ಇವುರೇನೋ ...ಾಳಿದ್ದ ಜನ. ಪಾಪ ಆ ಕಂದಗಳನೂ ಕಳಕಂಡ್ರಲ್ಲ

...ಯ್ಯಂಗೆ ಬೀಳ್ತು ಹೇಳ್ರ ಉಗ್ರಿ."

...ಯರ್‌ನ್ನೋರು ಹೇಳೊ ಪ್ರಕಾರ, ಅಲ್ಲಿ ಇಳಿಬೇಕಾದ ...ಾಲ್ಲೇ ಇಳಿತಂತೆ ಕಣೆ. ಇಳಿದ ರಭಸಕ್ಕೆ ಚಕ್ರ ...ದವಂತೆ. ಕೂದ್ಲೆ ಪೈಲೆಟ್ಟು ಹಾರಸಕ್ಕೆ ನೋಡಿದ. ...ಮಾನ ಮುನ್ನುರದಿ ಆಳಕ್ಕೆ ಬಿದ್ದು ಹತ್ತಿಗಂಡು ...ೀಯ್ತು."

...ಾವನೊ ಸಾಬಿ ಕೈವಾಡ ಇದ್ದತಂತೆ ಕಂಡ್ರ" ...ರ.

...ಾರೂ ಹೇಳಿದೋರು ನಿನಿಗೆ?"

...ರ್ದ್ಯಾಕೇಳಕ್ಕೆ ಬಂದರೂ. ಪೇಪ್ರಲ್ಲೆ ಕೊಟ್ಟಿದ್ದರಂತೆ."

...ಂತ ಕೊಟ್ಟಿದ್ದರೂ?"

...ರಪ್ಲೇನ್ ಕ್ಯಳಿಕೆ ಬೀಳಂಗೆ ಮಾಡಿದೋನ್ನ ...ು ಹಿಡದಾಕಿದ್ದರಂತೆ. ಹಿಡುದು ಅವುನು ...ನಲ್ಲಿ ಮಡಗಿದ್ದ ಪೆಟಗೆಯ ಉಡುಕ್ತ ಅವುರಂತೆ. ...ಲ್ಲವಂತೆ."

...ು ಕತೆಕಟ್ಟಿದ್ದಿಯಾ ಸೀರ ಮಾವ."

...ಯು ನಾನ್ಯಾಕೆ ಕಟ್ಟನ್ಲ? ಅವುನ್ಯಾರೋ ಅಬ್ದುಲ್ಲ ...ಬಿ ಪೆಟಗೆ ವಳಗಡೆ ಬಾಂಬ ಮಡಗಿ ಈರಪ್ಲೇನಲ್ಲಿ ... ಈಗ ಬಟ್ಕಳದತ್ರ ಸಿಗಾಯ್ಕಂಡಿದ್ದನಂತೆ."

..., ಅದಕೂ ಇದುಕು ಸಮಂದಿಲ್ಲ ಕಣೊ. ...ಸಾಬರ ಕ್ಯಲಸನೆ ಬ್ಯಾರೆ, ವಿಮಾನ ಬಿದ್ದಿರೊ ...ಬ್ಯಾರೆ ಕಣೊ."

...ೆ ಅಂತ ನೀನೇಳ್ತಿ, ಜನೇಳಬೇಕಲ್ಲ, ಅವುನು ...ಪೆಟಗೆಯ ಪೊಲೀಸ್ ಹುಡುಕತಾ ಯಿರದು

...ಲ್ಲ ಸರಿ, ಆ ಪೆಟಗೆ ಯಾವುದು ಗೊತ್ತೇ?"

... ಆ ಸಾಬಿ ಬಾಂಬು ಮಡಗಿದ್ದು."

... ಅದು ಬಾಂಬಿನ ಪೆಟಗೆ ಅಲ್ಲ ಕಣೊ. ...ಾರಾಟ ಮಾಡಿ ಕ್ಯಳಿಕಿಳಿಯೋವರಿಗೂ ಏನೇನು ...ದ್ಯಲ್ಲ ಆ ಪೆಟಗೆಲಿ ದಾಖಲಾಗಿರತದಂತೆ. ...ಕ್ಕದ್ರೆ ಈರಪ್ಲೇನ್ ಯಂಗೆ ಬಿತ್ತು ಅಂತ ...ಂತೆ. ಅದ್ನೆ ನೀನು ಸಾಬಿ ಬಾಂಬಿಟ್ಟ ಪೆಟಗೆ

"ಅಂಗರೆ ಸಾಬಿ ಯಾಕಿಡದವ್ರುರೆ?"

"ಆ ಸಾಬರು ಪೂನಾದಲ್ಲಿ ಬೈಡ್ಡಂಗಡಿಗೆ ಬಾಂಬಾಕಿದ್ರಂತೆ. ಅವುರು ಈಗ ಸಿಕ್ಯವುರೆ."

"ಏನೇ ನ್ಯಡದ್ರು ಸಾಬರ ಕಡಿಕೆ ಕೈ ತೋರಂಗಾಯ್ತಲ್ಲ ದೇಸ." ಎಂದು ಕಾಳಮಾವ ಚಿಂತಾಕ್ರಾಂತನಾದ.

"ಅದವುರೆ ಮಾಡಿಕಂಡಿದ್ದು, ನಾವು ಮಾಡಕ್ಕೋಗಿದ್ವೆ?" ಎಂದ ಸೀರ.

"ಅವುರ್ಯಾವತ್ತು ಮಾಡಕ್ಕೋಗಿರಲಿಲ್ಲ, ಯಾವತ್ತು ಬಿಜೆಪಿಗಳು ಬಾಬರಿ ಮಸೀದಿ ಕೆಡಗಿದ್ರೊ ಅವತ್ತು ಸಾಬರು ಅಂಗಾದ್ರು."

"ಆಗೊಂದು ಸತಿ ಪಕ್ಷದ ದಿನವೆಯ ಸಾಬರು ಈರಪ್ಲೇನ್ ತಂಗಂಡೋಗಿ ಅಮೆರಿಕದ ಕಟ್ಟಡನೆ ಉಡಿಯಾರಿ ಸಿರಲಿಲ್ವೆ?" ಎಂದ ಸೀರ.

"ಅದ್ಕೆ ಈಗ್ಲು ಅಂಗೆ ಆಗಿರಬೇಕು ಅನ್ನಕಂಡೇನೊ."

"ನಾನ್ಯಾಕಂದಕಳನ. ಜನನ್ನೊ ಮಾತ ಹೇಳಿದನಪ್ಪ. ಆದ್ರು ಇನ್ನಮ್ಯಾಲೆ. ಬಸ್ಸಿನಲ್ಲೇ ಹೋಗಿ ಬರದು ಸೇಮು ಕಂಡ್ರ, ಈರಪ್ಲೇನ್‌ನಲ್ಲಿ ಹೋಗದೂ ಬ್ಯಾಡ, ಸುಟ್ಟು ಕರಕಲಾಗದೂ ಬ್ಯಾಡ."

"ನೀನ್ಯಾವಾಗ ಏರೋಪ್ಲೇನಲ್ಲಿ ಹೋಗಿದ್ಯಪ್ಪ?"

"ಹೋಗೋ ಚಾನ್ಸು ಬಂದಿತ್ತು ಕಂಡ್ರ. ದುಡ್ಡಿಲ್ಲದೆ ತಪ್ಪಿಸಿಗಂಡೆ."

"ಅದ್ಯಾವಾಗಪ್ಪ?"

"ವಾದ್ನೆ ವರುಸು ನಾಗ್ತಳ್ಳಿ ಚಂದ್ರಸೇಕ್ರ ಅವುರೂರು ಜನನ್ನಲ್ಲ ಟೂರು ಕರಕೊಂಡೋಗಿದ್ದ. ಆಗ ಅತ್ಲಿಂದ ಈರಪ್ಲೇನಲ್ಲಿ ಕರಕಂಡು ಬಂದ. ಆಗ ನಮ್ಮ ಕಾಂತರಾಜ ನೀನು ಬತ್ತಿಯ ಸೀರಪ್ಪ ಬೆಳಗಾವಿಯಿಂದ ಬೆಂಗಳೂರಿಗೆ ಈರಪ್ಲೇನಲ್ಲಿ ಬರಿವೆ ಅಂದ. ನಾನು ಹೆದ್ರಿಕಂಡು ಹೋಗಲಿಲ್ಲ."

"ಅದ್ಯಾಕೆದ್ರಿಕಂಡೆ?"

"ನನಿಗೆ ಜಾಸ್ತಿ ಹೆದ್ರಿಕಾದಾಗ ಯರಡುಕ್ಕೋಗಬೇಕು, ಒಂದ ಮಾಡಬೇಕು ಅನ್ನಸ್ತದೆ. ಆಗ ಈರಪ್ಲೇನ್‌ನಲ್ಲಿ ಮಾಡಕ್ಕಾದತೆ?"

"ಅದುಕೂ ಯವಸ್ಥೆ ಇರತದೆ ಕಣೊ ಅದರಲ್ಲಿಯಾ."

"ಇರ್ಲಿ ಬುಡ್ರಿ. ನಮಿಗ್ಯಾಕಪ್ಪ ಈರಪ್ಲೇನ್ ಸವಾಸ. ಆ ಸುಖವಾದ ಸವಾರಿನೂ ಬ್ಯಾಡ, ಅಂತ ಸಾವೂ ಬ್ಯಾಡ."

"ಒಳ್ಳೆ ಸಾವು ಚಿಗಪ್ಪ, ನೋಡು ಹತ್ತು ಲಕ್ಷ ಕೊಡ್ತಾ ಅವುರೆ" ಎಂದುಕೊಂಡು ವಾಟಿಸ್ಸೆ ಬಂದ.

"ತಲಿಗತ್ತು ಲಕ್ಷ ಕೊಟ್ಟರೆ?"

"ಊ ಮತ್ತೆ. ಅದೇ ಬಸ್ಸಲ್ಲಿ ಸತ್ರೆ ಒಂದು ಲಕ್ಷ. ನಮ್ಮ ದೇಸದಲ್ಲಿ ಯಲ್ಲಾ ಸಾವೂ ಒಂದೇ ತರ ಅಲ್ಲ. ಯಾವ ವೆಹಿಕಲ್ಲಿನಲ್ಲಿ ಸತ್ತ ಅನ್ನದು ಇಂಪಾರ್‌ಟೆಂಟ್" ಎಂದ ವಾಟಿಸ್ಸೆ.

"ಎತ್ತಿನಗಾಡಿಲಿ ಸತ್ರು ಯರಡು ಮೂರು ಸವ್ರುರ ಕೊಡ್ತರೆ ಗೊತ್ತೇ?"

"ಗೊತ್ತು ಕಣೊ. ಅದು ದೇವೇಗೌಡ್ರು ಪ್ರಧಾನಿಯಾಗಿದ್ದಾಗ ಮಾಡಿದ್ರು. ಆದ್ರೂ ಆ ಕಾನೂನು ವ್ಯವಸಾಯದ ಕಸುಬು ಮಾಡುವಾಗ ಡೆತ್ತಾದ್ರೆ ಬರೋ ಅಂತ ಬೆನಿಪಿಟ್ಟು. ಈ ನಡುವೆ ಎಡೂರಪ್ಪನೂ ಕೂಡ ಒಂದಿಷ್ಟು ಅಮವುಂಟ ಅನೌನ್ಸ್ ಮಾಡಿದ್ದನಂತೆ. ಅಷ್ಟೇ ಅಲ್ಲ ಸಲಹೆನೂ ಕೊಟ್ಟಿದ್ದನಂತೆ."

"ಏನು ಸಲಹೆ ಕೊಟ್ಟಿದ್ದನ್ಲ?"

"ನ್ಯಡದಿರೊ ಘಟನೆ ಬಗ್ಗೆ ತನಿಖೆ ಮಾಡಿ, ಅಮ್ಯಾಲೆ ಈರಪ್ಲೇನ್ ಇಳಿಯೋ ಜಾಗ ಅಗಲ ಮಾಡಿ. ಇಡೀ ರಾಜ್ಯ ಒಂದು ದಿನ ಶೋಕ ಮಾಡಬೇಕು ಅಂತ ಹೇಳಿಬುಟ್ಟು, ಮೈಸೂರು ಝುರಿಪೇಟ ಗಂಧದಾರ ಹಾಯ್ಕಂಡು ಸನ್ಮಾನ ಮಾಡಿಸಿಗಂಡವುನೆ."

"ಅವುನು ಮಾಡಿಸಿಗಳಕ್ಕೆ ಹೋಗಿರಲಿಲ್ಲ ಕಣೊ. ಕರದಿರೊ ಮುಂಡೆ ಮಕ್ಕಳು ತಲಿಗೆ ಪೇಟ ಹಾಕಿ ಹಾರ ಹಾಕಿದಾಗ ಏನು ಮಾಡಬೇಕು."



"ಅದ ನಾನೂ ಒಪ್ಪಿಗತಿನಿ ಕಣೊ ಉಗ್ರಿ. ಆದ್ರೆ ಈ ಮನುಷ್ಯ 'ಇದ್ಯಲ್ಲ ಬ್ಯಾಡಿ ಕಂಡ್ರಪ್ಪ, ಅಲ್ಲಿ ನೂರ್ರೈವತ್ತೆಂಟು ಜನ ಸತ್ತವುರೆ, ನಾನೇ ಹೋಗಿ ನೋಡಿ ಬಂದಾಗ್ಲಿಂದ ಮನಸಿಗೆ ಒಂಥರಾ ಆಗ್ಯದೆ' ಅಂದ್ರೆ ಜನ ಸುಮ್ಮನಾಗದಿಲವೆ."

"ನೋಡೂ ವಾಟಿಸ್ಸೆ, ಅಂತ ನಡವಳಕೆನ್ಯಲ್ಲ ಎಡೂರಪ್ಪನಿಂದ ನಿರೀಕ್ಷೆ ಮಾಡಬಾರದು. ಮಾಡಿದ್ರೆ ನಮಿಗೇ ತಿಳಿವಳಿಕೆ ಇಲ್ಲ ಅನ್ನಂಗಾಯ್ತದೆ."

"ಅಂಗಂತೀಯಾ?"

"ಊ ಮತ್ತೆ. ಮನುಸ ಇನ್ನೊಬ್ಬರ ಕಷ್ಟಕಾಗಿ ಯಾವಾಗ್ಲು ಅಳದಿಲ್ಲ ಕಣೊ. ಒಂದುಕ್ಷಣ ಅಂಗಾಡಿ ಅವ್ಯಾಲೆ ತನ್ನ ಸುಖ ಸಂತೋಷ ಹುಡಿಕ್ಯಂಡು ಹ್ವಂಟೋಯ್ತನೆ. ಇದು ಸಾಮಾನ್ಯ ಮನುಷ್ಯನ ಸ್ವಭಾವ. ಅಂತ ಸಾಮಾನ್ಯರ ಪೈಕಿ ಅಗ್ರಗಣ್ಯನಾದ ಎಡೂರಪ್ಪನ ಬಗ್ಗೆ ನೀನು ಬಾಳ ಮಾತಾಡ್ತಿ."

"ಎಡೂರಪ್ಪನಗಂಟ ಯಾಕೋದಿಯಾ ನಮ್ಮ ಸುತ್ತಮುತ್ಲೆ ಅವುರಪ್ಪ. ಇಲ್ಲೆ ಅವುನಲ್ಲ ಚಿಕ್ಕಣ್ಣ, ಅವುರವ್ವ ಸತ್ತು ಮನಿಗಿದ್ರೆ ಅವುನು ಗೇಟಿಂತಕ್ಕೋಗಿ ಕುಡಕಂಡು ಬಂದಿದ್ದ, ಕುಡದಮ್ಯಾಲಪ್ಪ ಅವುನಿಗೆ ಅಳು ಬಂದಿದ್ದು. ನೀನೆ ಕೇಳು ಬೇಕಾದ್ರೆ."

"ನಿಜವೇನೋ ಚಿಕ್ಕಣ್ಣ?" ಎಂದಳು ಜುಮ್ಮಿ.

"ಅವುನೇಳ್ತನೆ ಅಂತ ಕೇಳೆ ನೀನು" ಎಂದ ಚಿಕ್ಕ.

"ಲೇ ಚಿಕ್ಕಣ್ಣ ಪ್ರಮಾಣ ಮಾಡಿಬುಡೊ. ನಿಮ್ಮವ್ವ ಸತ್ತು ಅಟ್ಟಲಿ ಹ್ಯಣ ಮಡಿಗಿದ್ದಾಗ ನೀನು ಹೋಗಿ ಕುಡುದು ಬರಲಿಲ್ಲವೇನೋ?"

"ಹತ್ತೊರಸದ ಮಾತು ಕಟಿಗಂಡೇನೀಗ?"

"ಹತ್ತೊರಸನೊ, ನೂರು ವರಸನೊ, ನಡವಳಿಕೆ ಮುಖ್ಯ ಕಣೊ."

"ಅವುನು ಎಡೂರಪ್ಪನ ರಾಜ್ಯದ ಪ್ರಜೆ ಕಣೊ ಉಗ್ರಿ. ಯಥಾ ರಾಜ ತಥಾ ಪ್ರಜಾ. ಅಂಗೆ ನೋಡಿದ್ರೆ ನಾನೇ ಪರವಾಗಿಲ್ಲ. ಯಾವಾಗ ಕುಡಿಬೇಕು, ಯಾವಾಗ ಸುಮ್ಮನಿರಬೇಕು ಅನ್ನೊ ಕಾಮನ್‌ಸೆನ್ಸಾರ ಅದೆ. ಈ ಪೊಲಿಪ್ ಫೆಲೊಗಳಿಗೆ ಅದೂ ಇಲ್ಲ."

"ಇಂತ ಬುದ್ಧಿ ನಿನಿಗೆ ಬರಬೇಕಾದ್ರು ಎಡೂರಪ್ಪನೆ ಕಾರಣ."

"ಅದ್ಯಂಗೊ?"

"ಎಡೂರಪ್ಪ ಈಡಿಗರ ಮಟ್ಟಹಾಕಬೇಕು ಅಂತ ಶರಾಪು ನಿಲ್ಲಿಸಿ ಬುಟ್ಟ. ಅದರಿಂದ ನೀವ್ಯಲ್ಲ ಬ್ರಾಂದಿ, ವಿಸ್ಕಿ ಕುಡಿಬೇಕಾಯ್ತು. ಯಾವಾಗ ಅಂದ್ರಾವಾಗ ಕುಡಿತಿದ್ದೋರು ದುಡ್ಡು ಹೊಂಚಿಗಂಡು ಸಮಯ ಸಂದರ್ಭ ನೋಡಿ ಕುಡಿಯಂಗಾದ್ರಿ, ಅಂಗೆ ನೋಡಿದ್ರೆ ಎಡೂರಪ್ಪನೆ ನಿಮಗೊಂದು ನಿಯಮ ತಂದ ಅಂದಂಗಾಯ್ತು."

"ಇರಬವ್ರುದು ಕಣೊ. ಆದ್ರೆ ಶರಾಪು ಮಾರಾಟದ ಆದಯಕ್ಕಿಂತ್ಲೂ ಮೂರುಪಟ್ಟು ಸರ್ಕಾರಕ್ಕೆ ಆದಾಯ ಬತ್ತಾ ಅದೆ. ಪರೆಗ್‌ಜಾಂಪಲ್ ಒಂದು ಪಾಕಿಟ್ ಕುಡಿಯಕ್ಕೆ ಹನ್ನೆರಡು ರೂಪಾಯಿ ಕೊಡತಿದ್ವೊ, ಈಗ ಒಂದು ಕ್ವಾಟ್ರಿಗೆ ಮೂವತ್ತೈದು ರೂಪಾಯಿ ಕೊಡ್ತಾಯಿದ್ದಿವಿ, ಅಲ್ಲಿಗೆ ಸರ್ಕಾರದ ಆದಾಯ ಜಾಸ್ತಿಯಾಗಲಿಲ್ಲವೇ?"

"ಅದೇನಾರ ಆಗ್ಲಿ ದಿನಾ ಕುಡಿತಿದ್ದೋರು ವಾರಕ್ಕೆ ಮೂರು ದಿನಕೊಂದು ಸತಿ ಕುಡಿತರಲ್ಲ ಅದೇ ಸಾಕು ಬುಡು" ಎಂದಳು ಜುಮ್ಮಿ.

"ಪಂಚಾತಿ ಮೆಂಬ್ರುಗೆ ಟ್ರೈನಿಂಗ್ ಕೊಡ್ತರಂತೆ, ಹೋಗದಿಲವೇನಕ್ಕ?"

"ಇಲ್ಲ ಕಂಡ್ರ. ಅವುರೇಳದೇನೂ ಇವುಕೆ ಗೊತ್ತಾಗದಿಲ್ಲ. ನಾನಾಗ್ಲೆ ಯರಡು, ಮೂರು ಸತಿ ಹೋಗಿದ್ದಿನಿ, ಅವುರೇಳದೇ ಬ್ಯಾರೆ, ಇವುರು ಮಾಡದೇ ಬ್ಯಾರೇ."

"ಅಂಗಿದ್ರೆ ಪಂಚಾತಿ ಅಡಮಿನಿಷ್ಟ್ರೇನ್ನ ಪೈಲೂರಾಗ್ಯದೆ ಅಂತ ಆಯ್ತು."

"??"

...ರೆ ಬೇರೆ ಸ್ತರದ ಸ್ಪರ್ಧೆಗಳು

...ಂಪಿಕ್ಸ್ ಒಳಗಡೆಯೇ ಒಂದು ಸ್ಪರ್ಧೆ ಇದೆ- ಮುಂದಿನ ಒಲಂಪಿಕ್ಸ್ ಅಂದರೆ ...: ವರ್ಷದ್ದು, ಯಾಕೆಂದರೆ 1996 ರ ಒಲಂಪಿಕ್ಸ್ ಅಮೆರಿಕಾದ ಅಟಲಾಂಟಾದಲ್ಲಿ ...ದು ಆಗಲೇ ತೀರ್ಮಾನವಾಗಿ ಸಿದ್ಧತೆಗಳಾಗುತ್ತಿದೆ. ಯಾವ ದೇಶ ನಡೆಸಬೇಕು ...ೆ ಬಗ್ಗೆ, ಇದೊಂದು ಕ್ರೀಡಾ ಮನೋಭಾವದ, ಮಾನವೀಯತೆಯ, ತ್ಯಾಗದ ...ಲ್ಲ-ಅತ್ಯಂತ ಕೆಟ್ಟ ರೀತಿಯಲ್ಲಿ ಈ ಒಲಂಪಿಕ್ಸ್ ಸಮಿತಿಯ ಅಧ್ಯಕ್ಷನಾಗಿ ಮಹಾನ್ ...ಮು ಗತ್ತಿನಿಂದ ಮೆರೆದ ಸಮರಂಚ್ ಎಂಬ ಇಟಲಿಯ ಮೋಜುಗಾರನ ... ಠೀವಿ. ಹಲವಾರು ದೇಶಗಳು ಇವನೆದುರು ವಾದಿಸಿ, ಒತ್ತಾಯಿಸಿ, ...ಸ್ಪತ್ತವೆ. ಕೊನೆಗೂ ಈತನ ಮತ್ತು ಈತನ ಭಟ್ಟಂಗಿಗಳದೇ ತೀರ್ಮಾನ. ... ನಿಗೂಢತೆಯಿಂದಾಗಿ ಈ ಸಲ ಒಲಂಪಿಕ್ಸ್‌ಗಾಗಿ ಸ್ಪರ್ಧೆಯಲ್ಲಿದ್ದ ದೇಶಗಳ ...ಟ್ ಕಟ್ಟಲಾಯಿತು. ಚೈನಾಕ್ಕೆ ಸಿಕ್ಕರೆ ಆಡ್ಸ್ 4 ಕ್ಕೆ 6; ಅಂದರೆ ನೀವು ನಲವತ್ತು ... ಕಟ್ಟಿದ್ದರೆ ಕಟ್ಟಿದ ಹಣದ ಜೊತೆಗೆ ಅರವತ್ತು ರೂ. ಬರುತ್ತದೆ; ಬರ್ಲಿನ್ 2 ..., 4 ಕ್ಕೆ 11, ಮ್ಯಾಂಚೆಸ್ಟರ್ 6 ಕ್ಕೆ 1, ಇಸ್ತಾಂಬುಲ್ 100 ಕ್ಕೆ 1 ಚೈನಾ ...ಯುತ್ತಿಸುತ್ತಿದ್ದುದರಿಂದ ಅದು ಪಡೆದೇಬಿಡಬಹುದೆಂದು ಜೂಜಲ್ಲಿ ಕಡಿಮೆ odds ಇತ್ತು, ಆದರೆ ... ಸಿಕ್ಕಿದ್ದು ಆಸ್ಟ್ರೇಲಿಯಾದ ಸಿಡ್ನಿಗೆ-ಸಮರಂಚ್ ಬೆಟ್ ಮಾಡಿರಬಹುದೆ? ನೂರು ಪೌಂಡ್ ಕಟ್ಟಿದರೆ ...ಜೊತೆಗೆ 275 ಬಂದಿರುತ್ತದೆ!



ಅದೆಲ್ಲಕ್ಕಿಂತ ಕುತೂಹಲದ್ದು ಒಲಂಪಿಕ್ಸ್ ಪಂದ್ಯಗಳನ್ನು ರಾಜಕೀಯದ ಜೊತೆಗೆ ತಳುಕು ಹಾಕಿರುವುದು, ರಾಜಕೀಯ ಕಾರಣಕ್ಕೆ ಸೆಟೆದುಕೊಂಡಿದ್ದ ಈಜಿಪ್ಟ್, ಚೈನಾ, ರಷ್ಯಾ ಮುಂತಾದ ದೇಶಗಳು ಬೇರೆ ಬೇರೆ ಕಾಲದಲ್ಲಿ ಭಾಗವಹಿಸಲಿಲ್ಲ; ದಕ್ಷಿಣ ಆಫ್ರಿಕಾವನ್ನು 1964 ರಿಂದ 1992 ರವರೆಗೆ ವರ್ಣನೀತಿಗೆ ಶಿಕ್ಷೆಯಾಗಿ ಹೊರಗಿಡಲಾಗಿತ್ತು, ಹಾಗೆಯೇ ಇಲ್ಲಿ ರಾಜಕಾರಣಿಗಳ ಕೊಬ್ಬು ವ್ಯಕ್ತವಾಗಿದೆ. 1936 ರಲ್ಲಿ ಬರ್ಲಿನ್‌ನಲ್ಲಿ ನಡೆದ ಒಲಂಪಿಕ್ಸ್‌ನಲ್ಲಿ ತನ್ನ ಬಿಳಿ ಮತ್ತು ಆರ್ಯನ್ ಜನರೇ ಎಲ್ಲಾ ಚಿನ್ನದ ಪದಕ ಗೆಲ್ಲುತ್ತಾರೆ ಎಂದು ಹಿಟ್ಲರ್ ಹೇಳಿದ್ದ; ತನ್ನ ಫ್ಯಾಸಿಸ್ಟ್ ಸರ್ಕಾರಕ್ಕೆ ಅದು ಸಮರ್ಥನೆಯಾಗುತ್ತದೆ ಎಂದು ತಿಳಿದಿದ್ದ, ಆದರೆ ಆತನಿಗೆ ಶಾಕ್ ಆಗುವ ರೀತಿಯಲ್ಲಿ ಜರ್ಮನ್ ಅಥ್ಲೆಟ್‌ಗಳು ಹಿಂದೆ ಬಿದ್ದು ಅಮೆರಿಕಾದ ಕಪ್ಪು ಹುಡುಗ ಜೆಸ್ಸಿ ಓವೆನ್ಸ್ ನಾಲ್ಕು ಚಿನ್ನದ ಪದಕ ಗೆದ್ದ. ಆಮೇಲೆ ಕ್ರೀಡೆ ನಾನಾ ರೀತಿಯಲ್ಲಿ ತನ್ನ ನಿಷ್ಪುರತೆ ಮತ್ತು ಸುಮತಾ ಗುಣಗಳನ್ನು ತೋರಿದೆ. ಕಪ್ಪು ಹುಡುಗ, ಹುಡುಗಿಯರು ಟ್ರಾಕ್‌ಗಳ ರಾಜ, ರಾಣಿಯರಂತೆ ಮಿಂಚಿದ್ದಾರೆ. ಅಲ್ಜೀರಿಯಾದ ಕಂದಾಚಾರಿ ಮುಲ್ಲಾಗಳು ನಾಚಿಕೆಯಿಂದ ತೊಳಲಾಡುವಂತೆ ಆ ದೇಶದ ಮುಸ್ಲಿಂ ಹುಡುಗಿ 1500 ಮೀಟರ್ ಒಲಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದಳು.

–ಅಕ್ಟೋಬರ್ 13, 1993




ತರಂಗಾಂತರ ತಂದ ಗಂಡಾಂತರ

ತರಂಗಾಂತರಗಳ ವಿಲೇವಾರಿ ಹೇಗೆ?

ಮೊದಲನೆ ತಲೆಮಾರಿನದ್ದು ಚಾಲ್ತಿಯಲ್ಲಿತ್ತು, ಎರಡನೆ ತಲೆಮಾರಿನದ್ದು ಬಂದಿತ್ತು. ಅದು 2008 ರಲ್ಲಿ. ಆಗ ಕೇಂದ್ರದಲ್ಲಿ ಸಂಪರ್ಕ ಸಚಿವರಾಗಿದ್ದವರು ಎ. ರಾಜಾ. ಅವರ ಎದುರು ಬಂದಿತು ಈ ಪ್ರಶ್ನೆ.

ಸಚಿವರದ್ದು ವೈಜ್ಞಾನಿಕ ಮನಸ್ಸು.. ವಿಲೇವಾರೀನೂ ವೈಜ್ಞಾನಿಕವಾಗೇ ಆಗಬೇಕು ಎಂದು ನಿರ್ಧರಿಸಿದರು. ಅವರ ಉಗ್ರಾಣದಲ್ಲಿ 2G ತರಂಗಾಂತರ ತುಂಬಿತ್ತಲ್ಲ, ಇದರ ವಿಲೇವಾರಿಗೆ ಯಾವ ಪದ್ಧತಿ ಉಪಯೋಗಿಸುವುದು? FIFO ಪದ್ಧತಿನೋ? LIFO ಪದ್ಧತಿನೊ?

ಅಣಕ



▸ ಎಚ್.ಎಲ್. ಕೇಶವಮೂರ್ತಿ

ಮಾನ್ಯ ವಾಚಕ ಮಹಾಶಯರಿಗಾಗಿ ಒಂದು ಸಣ್ಣ ವಿವರಣೆ.

ಹಜಾಮರ ಶಾಪಿಗೆ ಹೋಗಿರುತ್ತೀರಿ. ಅವನ ಸೇವೆ ಬಯಸುತ್ತೀರಿ. ನಿಮ್ಮ ಹಣ, ಅಧಿಕಾರ, ಅಂತಸ್ತು ಗಣನೆಗೆ ಬರೋಲ್ಲ, ಮೊದಲು ಬಂದವರಿಗೆ ಪ್ರಥಮ ಆದ್ಯತೆ. ಮೊದಲು ಬಂದಿದ್ದರೆ ಮೊದಲ ಸೇವೆ. ತಡವಾಗಿ ಬಂದಿದ್ದರೆ ನಿಮ್ಮ ಸರದಿ ಬರುವವರಿಗೆ ಕಾಯಬೇಕು. ಇದು FIFO ಪದ್ಧತಿ. First in First out ಇದನ್ನು Barber's shop system ಅಂತಾನೆ ಕರೀರಿ ಬೇಕಾದರೆ.


ಅದೇ ನೀವು ದೇವಸ್ಥಾನಕ್ಕೆ ಹೋಗಿರುತ್ತೀರಿ. ದೇವರ ಸೇವೆ ಮಾಡಬೇಕು. ವಿಪರೀತ ಜನಸಂದಣಿ. ಪೂಜಾರಿ ಮುಖ ನೋಡ್ತಾನೆ. ಮಣೆ ಹಾಕ್ತಾನೆ ಅಥವಾ ನೀವೇ ಹಾಕುವ ಹಾಗೆ ಮಾಡಿಕೊಳ್ಳುವ ಚಾಲಾಕುತನ ಹೊಂದಿದ್ದೀರಿ. ಕೊನೇಲಿ ಬಂದರೂ ಮೊದಲು ದೇವರ ಸೇವೆ ಮಾಡಿ ಪುನೀತರಾಗ್ತೀರಿ! ಕೊನೆಗೆ ಬಂದವರಿಗೆ ಮೊದಲ ಸೇವೆಯ ಸೌಭಾಗ್ಯ! ಇದು LIFO system. ಅರ್ಥಾತ್ Last in first out system. ಇದನ್ನ ಬೇಕಾದರೆ Temple system ಅಂತ ಕರೀರಿ.

ಸಂಪರ್ಕ ಸಚಿವರು ಎರಡು ಪದ್ಧತಿಗಳ ಗುಣ ಅವಗುಣಗಳನ್ನು ಅಳೆದರು, ಸುರಿದರು. ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸಮಾನರು. ಕೆಲವರಿಗೆ ತಾಂತ್ರಿಕ ನಿಪುಣತೆ ಇರಬಹುದು. ದಕ್ಷತೆಯಿಂದ ಕಾರ್ಯವನ್ನೂ ನಿರ್ವಹಿಸುತ್ತಿರಬಹುದು. ಆದರೆ ಸಮಯ ಅಂತ ಒಂದು ಇದೆಯಲ್ಲ, ಕೆಲವರು ತಡವಾಗಿ ಬಂದಿದ್ದರು. ಇಂತಹ ಸೋಮಾರಿಗಳಿಗೆ 2G ತರಂಗಾಂತರಗಳನ್ನು ವಹಿಸುವುದು ತರವಲ್ಲ ಎಂದು ಭಾವಿಸಿದರು. Temple systemನ ತಗ್ದು ಮೂಲೆಗೆಸೆದ್ರು. Barber's shop systemನಲ್ಲಿ ಮೊದಲು ಬರಲಿ, ಕೊನೆಯಲ್ಲಿ ಬರಲಿ ಸೇವೆಗೆ ಒಂದೇ ರೀತಿ 'ಬೆಲೆ' ಕೊಡ್ತಾರೆ. ಈ ಪದ್ಧತೀನೆ ಸರಿ ಅಂದುಕೊಂಡರು. ಮೊದಲು ಬಂದವರಿಗೆ ಅನ್ಯಾಯ ಆಗಬಾರದು ಎಂದು ಅವರಿಗೆ ತರಂಗಾಂತರ ಹಂಚಿದರು. ಇದೂ ನ್ಯಾಯವೇಯ.

ಅದು ಯಾಕೋ ಏನೋ ವಿರೋಧ ಪಕ್ಷಗಳಿಗೆ ಸರಿ ಕಾಣಲಿಲ್ಲ, ಒಲ್ಲದ ಗಂಡನ ತರಹ ಮೊಸರಿನಲ್ಲೂ ಕಲ್ಲು ಹುಡುಕಿದರು. ಭ್ರಷ್ಟಾಚಾರ ಕಂಡರು! ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ನಷ್ಟ ಆಗಿದೆ ಎಂದು ಕೂಗಾಡಿದರು. ಇದೂ ಹಾಳಾಗಲಿ ಅಂದರೆ ಸಂಪರ್ಕ ಸಚಿವರು ರಾಜೀನಾಮೆ ನೀಡಲಿ ಅಂತ ಹುಯಿಲೆಬ್ಬಿಸಿದರು. ಪುಟ್ಟ ಕಿಡಿಯೊಂದು ಜ್ವಾಲಾಮುಖಿಯಾಗುವ ಲಕ್ಷಣ ತೋರಿತು.

ಹೇಳಿಕೇಳಿ ಎ. ರಾಜಾ ಡಿಎಂಕೆ ಪಕ್ಷದವರು. ಎಲ್ಲ ಪ್ರಾದೇಶಿಕ ಪಕ್ಷಗಳಂತೆಯೇ ಅದೂ ಕುಟುಂಬದ ಖಾಸಗಿ ಆಸ್ತಿ ಆಗಿರುವುದು ಜಗತ್ತಿಗೇ ತಿಳಿದ ವಿಷಯ. ಪಕ್ಷದ ತಲೈವರ್‌ಗೆ ಇದು ತಲೆನೋವಾಯಿತು. ಚುನಾವಣೆ ಅಂದರೆ ಹಣ. ಅದ ಮಾಡೋಕೆ ಏನೋ ಒಂದು ದಾರಿ ಹುಡುಕಿದ್ದ ಈ 'ಪೈಯ್ಯ' ಅಧಿಕಾರಕ್ಕೆ ಬಂದರೆ ಈಗ ಕೂಗಾಡ್ತಿರೋರು ಮಾಡೋದೂ ಇದೇಯ. ಇದು ಸಾರ್ವಜನಿಕ ಸತ್ಯ. ಇವರ ಕೂಗಾಟಕ್ಕೆ ಬೆದರಿ 'ರಾಜಾ' ಹೋಗಿ 'ಪದಾಳು' ಆದ ಅಂದ್ರೆ ಆ ಸ್ಥಾನಕ್ಕೆ ಬರೋಕೆ ನೇಪಥ್ಯದಲ್ಲಿ ಜನ ಮಂತ್ರಿ ದಿರಿಸಿನಲ್ಲಿ ಕಾಯ್ತಾ ಇದಾರೆ; ನಿಜ. ಅವರೂ ಡಿಎಂಕೆ ಪಕ್ಷದವರೇ. ಆದರೆ ಸಂಬಂಧ ಅಂತ ಒಂದು ಇದೆಯಲ್ಲ, ಕರುಣಾನಿಧಿಯವರ ಮುದ್ದಿನ ಕುವರಿ ಸಂಸದೆ ಕನ್ನಿಮೇಳಿಗೂ, ಸಂಪರ್ಕ ಸಚಿವರಿಗೂ 'ಬರುಮಾದರಿ' ಸಂಪರ್ಕ ಇರುಕ್ಕಿದಿ ಎಂದು ತಮಿಳುನಾಡು ಪಿಸುಗುಡುತ್ತಿದೆ. ಅನಧಿಕೃತ ಆದರೇನಂತೆ. ಅಳಿಯನೇ ಅಲ್ವ. ಭ್ರಷ್ಟಾಚಾರ ಆರೋಪಗಳಿಗೆ ಗುರಾಣಿಯಾಗಲು ಮುದಿ ವಯಸ್ಸಿನ ಕರುಣಾನಿಧಿ ದೆಹಲಿಗೆ ಹಾರುವುದು ಅನಿವಾರ್ಯ ಆಯಿತು.

ದೆಹಲಿಯಲ್ಲಿ ಏನಾಗಿತ್ತು ಎಂದರೆ.... ಯುಪಿಎ ಸರ್ಕಾರ ಎರಡನೆ ಸಲ ಅಧಿಕಾರಕ್ಕೆ ಬಂದಿತ್ತಲ್ಲಾ, ಸರ್ಕಾರದ ಒಂದೊಂದು ನೀತಿ ಜಾರಿಗೆ ತರುತ್ತಿದ್ದಂಗೆ ಒಂದೊಂದು ಬೆರಳಿಗೆ ಕುಷ್ಠರೋಗ ಬಡೀತಿತ್ತು, ಆಗಲೋ ಈಗಲೋ ಅನ್ನುವ ಸ್ಥಿತಿ ತಲುಪಿತ್ತು. ಇಂತಹ ಸಮಯ ನೋಡಿಯೇ ಕರುಣಾನಿಧಿ ಪ್ರವೇಶ ಆಗಿತ್ತು, ಸೋನಿಯಾ ಭೇಟಿ ಮಾಡಿದರು ತಲೈವರ್. ಪರಿಣಾಮ-ಯುಪಿಎ ಸರ್ಕಾರ ಉಳೀತು; ಎ. ರಾಜಾ ಕುರ್ಚಿ ಗಟ್ಟಿಯಾಯಿತು!



ದೆಹಲಿಯ ತಮಿಳುನಾಡು ಭವನದಲ್ಲಿ ಕರುಣಾನಿಧಿಯವರಿಂದ ಪತ್ರಿಕಾಗೋಷ್ಠಿ. ಎ. ರಾಜಾ ಅವರ ದಕ್ಷತೆಗೆ ತಲೆದೂಗಿದರು; ಅವರ ಕಾರ್ಯವೈಖರಿಗೆ ಮೆಚ್ಚುಗೆ ಸೂಚಿಸಿದರು ತಲೈವರ್.

'ಭ್ರಷ್ಟಾಚಾರದ ಆರೋಪ ಇದೆಯಲ್ಲ?' ಪತ್ರಕರ್ತರ ಪ್ರಶ್ನೆ.

'ಅದೆಲ್ಲ ಸುಳ್ಳು' ಉತ್ತರ.

'ಸುಳ್ಳು ಆರೋಪ ಯಾಕೆ ಮಾಡ್ತಾರೆ?' ಪ್ರಶ್ನೆ

'ಅವರು ದಲಿತನಾದುದಕ್ಕೆ!'

ಭ್ರಷ್ಟಾಚಾರಕ್ಕೂ ಜಾತಿ ಇದೆ ಅಂದ ಹಾಗಾಯಿತು!

ಎ. ರಾಜಾ ಭ್ರಷ್ಟಾಚಾರ ಪ್ರಕರಣವು ಇಲ್ಲಿಗೆ ಮುಕ್ತಾಯ ಕಾಣಬೇಕಿತ್ತು, ಆದರೆ ಹಾಗಾಗಲಿಲ್ಲ.

ಮೂರನೆ ತಲೆಮಾರಿನ ತರಂಗಾಂತರ- 3G ವಿಲೇವಾರಿ ಎದುರಾಯಿತು. ಇನ್ನೂ ಭ್ರಷ್ಟಾಚಾರದ ಘಾಟು ಸಂಪೂರ್ಣ ಹೋಗಿರಲಿಲ್ಲ ಅಂತಾನೋ, ಈಗ ಬಂದಿರೋದನ್ನೇ ದಕ್ಕಿಸಿಕೊಂಡರೆ ಧನ್ಯ ಅಂತಾನೋ ಗೊತ್ತಿಲ್ಲ, ತರಂಗಾಂತರವನ್ನು ಹರಾಜು ಹಾಕಲಾಯಿತು. ಬಂದ ಹಣದ ಮೊತ್ತ ಸರ್ಕಾರಕ್ಕೇ ಹುಚ್ಚು ಹಿಡಿಸುವಂತಿತ್ತು, ನಿರೀಕ್ಷಿಸಿದ್ದು 35 ಸಾವಿರ ಕೋಟಿ, ಬಂದದ್ದು 67 ಸಾವಿರ ಕೋಟಿ ರೂಪಾಯಿ! ಆದರೆ....

ಸರ್ಕಾರದ ಖುಷಿ ರಾಜಾಗೆ ಉರುಳಾಯಿತು!

2G ಹಾಗೂ 3G ತರಂಗಾಂತರದ ಬೆಲೆ ಒಂದೇ ಇರಬೇಕು ಎನ್ನುವುದು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರದ (Telcecom Regulatory Authority of India) ಸೂಚನೆ. ಇಲ್ಲಿ ಅದು ಶೇಕಡ 900 ರಷ್ಟು ಅಧಿಕವಾಗಿತ್ತು! ಸುಮಾರು ಅರವತ್ತು ಸಾವಿರ ಕೋಟಿ ರೂಪಾಯಿಗಳ ನಷ್ಟ ಸರ್ಕಾರದ ಬೊಕ್ಕಸಕ್ಕಾಗಿತ್ತು!

ಎಲ್ಲಿ ಹೋಯಿತು ಈ ಹಣ?

ಭ್ರಷ್ಟಾಚಾರ ನಡೆದಿರುವುದಕ್ಕೆ ಸಾಕ್ಷಿಯಾಗಿತ್ತು!

ವಿಪಕ್ಷಗಳ ಆರೋಪಕ್ಕೆ ಪುರಾವೆ ಸಿಕ್ಕಿತ್ತು. ಕಳಂಕಿತ ಸಚಿವರನ್ನು ಕೈಬಿಡಬೇಕೆಂಬ ಕೂಗು ಮುಗಿಲೇರಿತು.

ಎ. ರಾಜಾ ಏನನ್ನುತ್ತಾರೆ ಇದಕ್ಕೆ?

2G-3G ಎರಡೂ ಒಂದೇ ಅಲ್ಲ, 3G ಎಂದರೆ ಬಾಸುಮತಿ ಅಕ್ಕಿ ಇದ್ದಂಗೆ. 2G ಎಂದರೆ ಪಡಿತರ ಅಕ್ಕಿ ಇದ್ದಂಗೆ. ಇವೆರಡಕ್ಕೂ ಒಂದೇ ಬೆಲೆ ನಿಗದಿ ಮಾಡುವುದಕ್ಕಾಗುತ್ತಾ ಎಂಬರ್ಥದ ಮಾತು ಹೇಳಿದರು!

ಆಹಾ, ಚಿನ್ನದಂತಹ ಮಾತು!

ಪಾರದರ್ಶಕವಾಗಿ ವ್ಯವಹಾರ ಮಾಡಿದ್ದೇ ರಾಜಾ ತಪ್ಪು, ಅದರ ಬದಲು Barber's shop system ಅಳವಡಿಸಿದ್ದರೆ ಬೇಪಿತ್ತೇನೋ..... ನೀವೂ ಸರಿ. ಹಾಗೆ ಮಾಡಿದ್ದರೆ ಸಾವಿರಾರು ಕೋಟಿ ರೂಪಾಯಿ ಬರುತ್ತೆ. ಅದನ್ನೆಲ್ಲ ಎಲ್ಲೀ ಇಟ್ಕೊಳೋದು ಎಂದೆಲ್ಲ ಅಳ್ಳೆದೆಯವರು ಯೋಚಿಸಬಹುದು. 2G ನಲ್ಲಿ ಬಂದ ಹಣಕ್ಕೆ ತೋರಿದ ಮಾರ್ಗಾನೆ 3Gಗೂ ತೋರಿಸುವುದಷ್ಟ, ಇದಕ್ಕೇಂತಲೇ ಹಲವಾರು ಬ್ಯಾಂಕುಗಳು, ಮಠಗಳು ಬಾಯಿಬಿಟ್ಟುಕೊಂಡು ಕುಳಿತಿರಲ್ಲಾ....

ಸಂವಿಧಾನದ ಸಂದಿಯಲ್ಲಿ ತೂರುವವರು

ಮುಖ್ಯಮಂತ್ರಿ ಆಗಬೇಕಾದರೇನು ಮಾಡಬೇಕು?

ಮೊದಲು ಶಾಸಕನಾಗಬೇಕು!

ಇದೇತಾನೆ ನಿಮ್ಮ ಉತ್ತರ?

ಅಮಾಯಕರನ್ನು ತಪ್ಪು ದಾರಿಗೆ ಎಳೆಯಬೇ[...] ನಿಜಕ್ಕೂ ನೀವು ಏನೂ ಆಗಿರಬೇಕಿಲ್ಲ!

ಅರೆ, ಅದು ಹೇಗೆ ಸಾಧ್ಯ ಅನ್ನುತ್ತೀರಾ?

ಸಂವಿಧಾನ ಸಾಧ್ಯ ಮಾಡಿದೆ!

ಮುಖ್ಯಮಂತ್ರಿ ಆಗಲು ಯಾವ ಸ್ಥಾನವನ್[...] ಹೊಂದಿರಬೇಕಿಲ್ಲ, ಪ್ರಮಾಣ ವಚನ ಸ್ವೀಕರಿಸಿದ ಆ[...] ತಿಂಗಳ ಒಳಗೆ ಶಾಸಕನಾಗಬೇಕು ಅನ್ನುತ್ತದೆ ಸಂವಿಧಾ[...] ಅಂದರೆ ಆರು ತಿಂಗಳು ಮುಖ್ಯಮಂತ್ರಿತ್ವ ಅಬಾಧಿತ[...]

ಇದು ಎಲ್ಲಾದರೂ ಉಂಟಾ?!

ಉಂಟು. ಶಿಬು ಸೊರೆನ್ ಶಾಸಕರಾಗಿರಲಿಲ್ಲ, ಆದರ[...] ಒಂದಲ್ಲ, ಎರಡಲ್ಲ, ಮೂರು ಸಲ ಜಾರ್ಖಂಡ[...] ಮುಖ್ಯಮಂತ್ರಿ ಆಗಿದ್ದಾರೆ!

ಕಳೆದ ಸಲ ಮುಖ್ಯಮಂತ್ರಿ ಆಗಿದ್ದರು. ಶಾಸಕರಾಗಲ[...] ಚುನಾವಣೆಗೆ ಆರು ತಿಂಗಳ ಒಳಗೆ ನಿಂತರು. ಮಹಾಜನ[...] ಅವರನ್ನು ತಿರಸ್ಕರಿಸಿತು!

ನಾಲ್ಕು ತಿಂಗಳ ಹಿಂದೆ ಚುನಾವಣೆ ನಡೆಯಿತು[...] ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ಬರಲಿಲ್ಲ. ಸೊರೆನ್[...] ಘೋಷಿಸಿದರು-ನನ್ನನ್ನು ಮುಖ್ಯಮಂತ್ರಿ ಮಾಡುವ ಪಕ್ಷ[...] ನಮ್ಮ ಜೆಎಂಎಂ ಪಕ್ಷದ ಬೆಂಬಲ!

ಸಮ್ಮಿಶ್ರ ಸರ್ಕಾರ ಯಾರಾದ್ದಾಗಬೇಕು ಎಂಬುದನ್[...] ತೀರ್ಮಾನಿಸುವವರು ಯಾರು? ಜೆಎಂಎಂ ಅಲ್ಲ! ಕಾಂಗ್ರೆಸ್[...] ಭಾಜಪಗಳು! ಕಾಂಗ್ರೆಸ್ ಬೆಂಬಲಿಸಿದರೆ ಕಾಂಗ್ರೆಸ್ ಸಮ್ಮಿ[...] ಸರ್ಕಾರ; ಭಾಜಪ ಬೆಂಬಲಿಸಿದರೆ ಭಾಜಪ ಸಮ್ಮಿ[...] ಸರ್ಕಾರ!

ಸೊರೆನ್‌ಗೆ ಬೆಂಬಲ ನೀಡಿದ್ದು ಯಾವ ಪಕ್ಷ?

ತತ್ವ, ಸಿದ್ಧಾಂತಗಳ ಪಕ್ಷ[...] ಶಿಬು ಸೊರೆನ್ ಆ[...] ತಿಂಗಳ ಒಳಗೆ ಶಾಸಕನಾಗ[...] ಕಿತ್ತು, ಮಗ ಶಾಸಕ. ಸೊ[...] ಶಾಸಕಿ. ಇವರಲ್ಲದೆ 'ಗುರೂ[...] 'ಗುರೂಜಿ' ಎಂದು ಹಿಂ[...] ಮುಂದೆ ಸುತ್ತಾಡುವ ಹದಿನಾ[...] ಜನ ಶಾಸಕರು. ಇವರ[...] ಯಾರೂ ಸ್ಥಾನ ಬಿಡಲು ಸಿ[...] ರಿರಲಿಲ್ಲ! ಸಮುದ್ರದ ನೆಂಟಸ್ತ[...] ಉಪ್ಪಿಗೆ ಬಡಸ್ತನ ಆಗಿತ್[...] ಮುಖ್ಯಮಂತ್ರಿ ಸ್ಪರ್ಧಿಸಲ[...] ಕ್ಷೇತ್ರವೇ ತೆರವಿರಲಿಲ್ಲ!

ಇಷ್ಟರಲ್ಲಿ ಒಂದು ಬೆ[...] ವಣಿಗೆ ಆಯಿತು. ಕೇಂ[...] ಸರ್ಕಾರದ ವಿರುದ್ಧ ಭಾಜ[...] ಖೋತಾ ಪ್ರಸ್ತಾವನೆ ಮಂಡಿಸಿತ[...] ಶಿಬು ಸೊರೆನ್ ಶಾಸಕ ಅಲ್ಲದಿದ್ದರೂ ಸಂಸದರಾಗಿದ್ದರ[...] ಅವರು ಸರ್ಕಾರದ ಪರ ಮತ ನೀಡಿದರ[...] ಅಂದರೇನಾಯಿತು ಸೊರೆನ್ ಮಹಾಶಯರು ಕೇಂದ್ರದ[...] ಕಾಂಗ್ರೆಸ್ ಪರ ಜಾರ್ಖಂಡ್‌ನಲ್ಲಿ ಭಾಜಪ ಪರ!

ತತ್ವ ಸಿದ್ಧಾಂತಗಳ ಪಕ್ಷ ಸಹಿಸೀತೆ ಇದನ್[...] ಕೆಂಡಮಂಡಲ ಆಯಿತು; ಜಾರ್ಖಂಡ್‌ನಲ್ಲಿ ಸರ್ಕಾರಕ[...] ನೀಡಿದ್ದ ಬೆಂಬಲ ಹಿಂಪಡೆಯುವುದಾಗಿ ಘೋಷಿಸಿತು[...] ಸೊರೆನ್ ತಾನು ಮಾಡಿದ ಅಪರಾಧಕ್ಕಾಗಿ ಕ್ಷಮ[...] ಯಾಚಿಸಿದರು. ಭಾಜಪವೇ ಸರ್ಕಾರ ರಚಿಸಲಿ ಎಂದ[...] ಜೆಎಂಎಂ ಆಹ್ವಾನ ನೀಡಿತು. ಭಾಜಪ ಘೋಷ[...] ಘೋಷಣೆಯಾಗಿಯೇ ಉಳಿಯಿತು. ಕಾರ್ಯರೂಪ[...] ಬರಲು ಅಧಿಕಾರ ಆಮಿಷ ಅಡ್ಡಿ ಆಗಿತ್ತು!

ಭಾಜಪ ಮಾತುಕತೆಗೆ ಮುಂದಾಯಿತು.

'28 ತಿಂಗಳು ನಾವು 28 ತಿಂಗಳು ನೀವು' ಸೂ[...] ಮುಂದಿಟ್ಟಿತು ಜೆಎಂಎಂ.

ಮಾಯಾವತಿ, ಎಚ್.ಡಿ. ಕುಮಾರಸ್ವಾಮಿ ಭೂ[...] ಕಾಡಿತು ಭಾಜಪಗೆ. ಮೊದಲು ಸಾಧ್ಯವಿಲ್ಲ ಎಂದಿತ್ತಾದರ[...] ನಂತರ ಹೇಳಿತು- 'ಮೊದಲು ನಾವು ನಂತರ ನೀವ[...] ಒಪ್ಪಿದಂತಾಯಿತಲ್ಲಾ.

ಮಂದಹಾಸ ಬೀರಿತು ಭಾಜಪ.

ಇವರ ಸಡಗರ ಸಂಭ್ರಮ ನೋಡಿ ಶಿಬು ಸೊರೆನ್[...] ಅನುಮಾನ ಬಂದಿರಬೇಕು. ಇವರು ನನಗೆ ಕುಮಾರಸ್ವಾ[...] ಮಾಡಲ್ಲ ಎನ್ನುವ ಖಾತರಿಯೇನು? ಅದಕ್ಕೆ ಪಟ್ಟಾ[...] ಮುಖ್ಯಮಂತ್ರಿ ಖುರ್ಚೀಲಿ ಕುಳಿತರು!

ಮುಖ್ಯಮಂತ್ರಿ ಮಾಡಲು ಭಾಜಪ ಸಕ[...] ಸಿದ್ಧತೆಯನ್ನೂ ಮಾಡಿಕೊಂಡಿತು. ಆದರೆ.... ಮುಖ್ಯಮಂ[...] ಸ್ಥಾನವೇ ಖಾಲಿ ಇಲ್ಲ!

ಶಿಬು ಸೊರೆನ್ ಹೇಳಿದರು-'ಭಾಜಪ ಸೂತ್ರ ನನ[...] ಒಪ್ಪಿಗೆ ಇಲ್ಲ, ಮುಖ್ಯಮಂತ್ರಿ ಸ್ಥಾನ ತೆರವುಗೊಳಿಸುವುದಿಲ್ಲ[...]

ಜೆಎಂಎಂ-ಭಾಜಪ ನಡುವಿನ ಕಿತ್ತಾಟ ಅಸಂಗ[...] ನಾಟಕಕ್ಕೇ ಸೊಗಸಾದ ವಸ್ತು ಆಗಬಹುದೇನೋ.....

ಬಿದ್ದು ಹೊರಳಾಡುವಷ್ಟು ನಗು ಬರಿಸಿತು...

ಮೇ 26 ರ ಪತ್ರಿಕೆಯಲ್ಲಿ ಪ್ರಕಟವಾದ ಕಲ್ಲುಳಿ ವಿಠಲ ಹೆಗಡೆಯವರ ಲೇಖನ("ಮಠದ ಗೂಳಿ...")ವು, ಬಿದ್ದು ಹೊರಳಾಡುವಷ್ಟು ನಗು ಬರಿಸಿತು.

ಕನ್ನಡ ಪತ್ರಿಕೆಗಳ ಪರಂಪರೆಯಲ್ಲಿ ವ್ಯಂಗ್ಯ ಬರಹಗಳಿಗೇನೂ ಕೊರತೆಯಿಲ್ಲ, ಆದರೆ ಕಲ್ಲುಳಿಯವರ ಭಾಷೆಯಲ್ಲಿ ಜಾಡಿಗೆ ಬೀಳದ ಹೊಸತನವಿದೆ. 'ಸ್ವಾವಲಂಬಿ ಗೂಳಿ'ಗೆ 'ಶೋಕಾಸ್ ನೋಟಿಸ್ ನೀಡದೆ ಹಾರುವ ಗೂಳಿ ಪಟ್ಟದಿಂದ ಕೆಳಗಿಳಿಸಿದ್ದು', 'ಮುತ್ತೈದೆಯರು ಗೊಡ್ಡು ಗೂಳಿಗೂ ಕುಂಕುಮ ಹಚ್ಚಿ ತಮ್ಮ ಮಾಂಗಲ್ಯಕ್ಕೂ ಹಚ್ಚಿಕೊಂಡು (!) ಆರತಿ ಬೆಳಗಿದ್ದು', 'ವಿ.ಹಿಂ.ಪ. ಕಾರ್ಯದರ್ಶಿಯ ಹೆಂಡತಿಯ ಸೊಂಟದ ಪಾಡು', ಕಡೆಗೆ ಅಧ್ಯಕ್ಷರೂ 'ಮಾಮೂಲೀ ಮನುಷ್ಯರಂತೆ ಯೋಚಿಸಲು ಶುರು ಮಾಡಿದ್ದು' - ಇಂಥ ಹರಿತ ಪ್ರಯೋಗಗಳು ಕಲ್ಲುಳಿಯವರ ಅದ್ಭುತ ಲೇವಡಿಯ ಕೌಶಲವನ್ನು ತೋರಿಸುತ್ತವೆ. ಜೊತೆಗೆ ಇಡೀ 'ಪ್ರಸಂಗ'ದ ಸಾಮುದಾಯಿಕ ಆಯಾಮದ ಹಿಂದೆ, ಈ ಧರ್ಮ-ಸೇನಾ ಮನಸ್ಥಿತಿಯ ಬಗ್ಗೆ ವಿಷಾದ, ಕರುಣೆ ಎರಡೂ ಮಿಳಿತವಾಗಿ ಕೋಮುಹಿಂಸೆ ವಿರುದ್ಧ ಹೊಸ ಭಾಷಾ ಸ್ಟ್ರಾಟಜಿಯನ್ನೆ ಹುಟ್ಟಿಸಿದೆ!

ತೇಜಸ್ವಿಯ ಪರಂಪರೆಯ ಮುಂದುವರಿಕೆಯಾಗಿ ಈಗ ಹೊಸ ಅದ್ಭುತ ಲೇಖಕ ಹುಟ್ಟುತ್ತಿದ್ದಾನೆ ಅಂತ ನನಗೆ ಅನ್ನಿಸಿದೆ. ಇದೇ ರೀತಿ ಬಿ.ಚಂದ್ರೇಗೌಡ ಅವರು ಬರೆದ ಒಂದು ಆಕಸ್ಮಿಕ ಲೇಖನದ ಮೂಲಕ ಲಂಕೇಶ್ ಕೈಗೆ ಅವರು 'ಸಿಕ್ಕು ಬಿದ್ದು' ಕನ್ನಡದ ದೊಡ್ಡ ಲೇಖಕರಾಗಿ ಬೆಳೆದದ್ದು ನಮಗೆಲ್ಲ ನೆನಪಿದೆ. ಈಗ, ಹೀಗೆ ಸಿಕ್ಕುಬಿದ್ದಿರುವ ಕಲ್ಲುಳಿಯವರನ್ನು 'ಹಿಡಿದು' 'ಕೂರಿಸಿ' ಬರೆಸಬೇಕಾಗಿದೆ ಪತ್ರಿಕೆ. ಆ ಮೂಲಕ ಪತ್ರಿಕೆಗೂ ವಿಡಂಬನೆಯ ಹೊಸ ನೀರು ಹರಿದುಬರಲಿ ಎಂದು ನನ್ನ ಹಾರೈಕೆ.

- ಸುಮಾ ಎಂಬಾರ್, ಮೈಸೂರು

ಹೊಗಳಿಕೆ ತೆಗಳಿಕೆ

ನಮ್ಮ ತುಮಕೂರಿನ ಶಾಸಕ ಶಿವಣ್ಣನ ಗೂಂಡಾಗಿರಿ ಬಗ್ಗೆ ನೀವು ವರದಿಯನ್ನೇನೋ ಪ್ರಕಟಿಸಿದಿರಿ. ಆದರೆ ಆತ ತುಮಕೂರು ಮತ್ತು ಸುತ್ತಮುತ್ತ ಎಲ್ಲೂ ಪತ್ರಿಕೆಯ ಪ್ರತಿಗಳು ಸಿಗದಂತೆ ಎಲ್ಲವನ್ನೂ ಎತ್ತಿಸಿಹಾಕಿಬಿಟ್ಟ. ನಾನು ಕಷ್ಟ ಪಟ್ಟು 'ಲಂಕೇಶ್' ವಾರ ಪತ್ರಿಕೆಯ ಪ್ರತಿಯೊಂದನ್ನು ಬೆಂಗಳೂರಿನಿಂದ ತರಿಸಿಕೊಂಡಿದ್ದಾಯಿತು.


ಈ ಸೊಗಡು ಶಿವಣ್ಣ ಹಿಂದೆ ಹೇಗಿದ್ದ ಈಗ ಹೇಗಿದ್ದಾನೆ ಎಂಬುದಕ್ಕೆ ಒಂದು ಸಣ್ಣ ಸ್ಯಾಂಪಲ್ ನೀಡಬಹುದು. ಇವತ್ತು ಕೋಟ್ಯಾಧಿಪತಿಯಾಗಿರುವ ಶಿವಣ್ಣನಿಗೆ ಈ ಹಿಂದೆ ಒಂದು ನೆಟ್ಟಗಿನ ಚಪ್ಪಲಿಯೂ ಗತಿ ಇರಲಿಲ್ಲ, ಈತ ತನ್ನ ತಲೆ ಮೇಲೆ ಅವರೆಕಾಯಿ ಹೊತ್ತು 'ಸೊಗಡು ಅವರೇಕಾಯಿ' ಎಂದು ಕೂಗುತ್ತಾ ತುಮಕೂರಿನ ರಸ್ತೆ ಬದಿಯಲ್ಲಿ ಮಾರುತ್ತಿದ್ದ. ಆ ಕಾರಣಕ್ಕಾಗಿಯೂ ಆತನ ಹೆಸರಿನೊಂದಿಗೆ 'ಸೊಗಡು' ಪದ ಸೇರಿಕೊಂಡಿದ್ದು.

ಈತ ರಾಜಕಾರಣಕ್ಕೆ ಬಂದ ನಂತರ ಕೊಳ್ಳೆ ಹೊಡೆದಿರುವ ಹಣಕ್ಕೆ ಲೆಕ್ಕವಿಲ್ಲ. ಅವತ್ತು ಅವರೇಕಾಯಿ ಮಾರುತ್ತಿದ್ದ ಈ ಸೊಗಡು ಶಿವಣ್ಣ ಇವತ್ತು ತಗಡು ಶಿವಣ್ಣನಾಗಿರುವುದಕ್ಕೆ, ಆತನ ಲೂಟಿಯೇ ಕಾರಣ.


- ವಿ. ಶಾಂತಕುಮಾರ್, ತುಮಕೂರು

ನೋಡಿ ಕಾಡ್ತಾರಾ ಮಮ್ಮುಟ್ಟಿ

ಮಲೆಯಾಳಂ ಚಿತ್ರರಂಗದ ಸೂಪರ್‌ಸ್ಟಾರ್ ...ಮ್ಮುಟ್ಟಿ ಕನ್ನಡ ಚಿತ್ರವೊಂದರಲ್ಲಿ ನಟಿಸುತ್ತಿದ್ದಾರೆ. ಚಿತ್ರದ ... 'ಶಿಕಾರಿ'. ಇದರ ನಿರ್ದೇಶಕ ಅಭಯಸಿಂಹ ... ಯುವಕ. ಈತ 'ಗುಬ್ಬಚ್ಚಿಗಳು' ಎಂಬ ಚಿತ್ರವನ್ನು ...ಶಿಸಿದ ಅನುಭವವನ್ನು ಹೊಂದಿ


ಕೆ.ಮಂಜು

...60 ಚಿತ್ರಗಳ ಸರದಾರ, ನಾಲ್ಕು ...ರಾಷ್ಟ್ರಪ್ರಶಸ್ತಿ ಪಡೆದ ಮಮ್ಮುಟ್ಟಿ ...ಪ್ರತಿಭಾವಂತ ಎಂಬುದರಲ್ಲಿ ...ಮವೇ ಇಲ್ಲ. ಆದರೆ ಈಗ ...ಯಲ್ಲಿರುವ ಕನ್ನಡ ಚಿತ್ರರಂಗ ...ಮ್ಮುಟ್ಟಿ ಎಂಟ್ರಿಯಿಂದಾಗಿ ಚೇತರಿಸಿ...ವ ಸಾಧ್ಯತೆ ಇದೆಯೇ? ಅಥವಾ ಮಮ್ಮುಟ್ಟಿ ... ಕನ್ನಡ ಚಿತ್ರರಂಗದ ಸದ್ಯ ಎದುರಿಸುತ್ತಿರುವ ...ನ ಸರಪಳಿಯಲ್ಲಿ ಸಿಲುಕುತ್ತಾರೆಯೇ? ನೋಡಬೇಕು. ...ದರೂ, ಮಮ್ಮುಟ್ಟಿ ಕನ್ನಡ ಚಿತ್ರದಲ್ಲಿ ನಟಿಸುವ ...ಾಂತರ ಒಂದು ಹೊಸ ಅಧ್ಯಾಯ ಸೃಷ್ಟಿಸುವತ್ತ ...ದ್ದಾರೆ. ಕನ್ನಡ ಚಿತ್ರರಂಗದಲ್ಲಿ ಈತನಕ ಕಮಲ ...ನ್ ಹೊರತುಪಡಿಸಿದರೆ ಬೇರೆ ನಾಯಕ ನಟರು ...ಮೆಂಟ್ ಆಗಿ ಕಾಣಿಸಿಕೊಂಡ ಉದಾಹರಣೆಯೇ ... ನಮ್ಮ ಚಿತ್ರರಂಗದ ಜನ ಹಾಗು ಪ್ರೇಕ್ಷಕರೂ ...ಷಾ ನಾಯಕಿಯರ ಬಗ್ಗೆ ತೋರಿ... ಉದಾರತೆಯನ್ನು ನಾಯಕರ ...ತೋರಿಸಿದ್ದಿಲ್ಲ. ಅದೇನು ವಿಚಿತ್ರ ...ತಿ. ನಮ್ಮ ನಾಯಕರಿಗೆಲ್ಲಾ ...ನು, ತಮಿಳು, ಮಲೆಯಾಳಂ ...ಎಗಿಯರೇ ಬೇಕು! ಆದರೆ ...ಷಾ ನಾಯಕರನ್ನು ಅವರು ... ಹೃದಯ ವೈಶಾಲ್ಯತೆಯಿಂದ ...ಸುವುದಿಲ್ಲ!


ಅಭಯಸಿಂಹ

...ಹಳ ಹಿಂದೆ ಸಾಯಿಕುಮಾರ್ ಎಂಬ ತೆಲುಗು ...ನ ಕಲಾವಿದ ಕನ್ನಡದ ಮೂಲಕ ನಾಯಕನಾಗಿ ... ಕಾಣಿಸಿಕೊಂಡರು. ಅದೇ ಸಂದರ್ಭದಲ್ಲಿ ...ಬಾಬು ಎಂಬ 'ಪುಣ್ಯಕೋಟಿ' 'ಅಮೃತವರ್ಷಿಣಿ' ...ಹ ಚಿತ್ರಗಳಲ್ಲಿ ಬಂದುಹೋಗಿದ್ದರು. ವಿಷ್ಣುವರ್ಧನ್ ... ಅಕ್ಷಯ್‌ಕುಮಾರ್ ಒಂದೆರಡು ಚಿತ್ರಗಳಲ್ಲಿ ...ದ್ದರು. ಆದರೆ ಯಾರಿಗೂ ಪರ್ಮನೆಂಟಾಗಿ ...ನಗರದಲ್ಲಿ ಮೊಕ್ಕಾಂ ಹೂಡಲು ಸಾಧ್ಯವಾಗಲಿಲ್ಲ. ...ತುವೆ 'ಸಿಪಾಯಿ' ಚಿತ್ರದಲ್ಲಿ ತೆಲುಗಿನ ಮೆಗಾಸ್ಟಾರ್ ...ಜೀವಿ ಮತ್ತು 'ಲವ್' ಚಿತ್ರದಲ್ಲಿ ಮಲೆಯಾಳಂ ಸೂಪರ್‌ಸ್ಟಾರ್ ಮೋಹನ್‌ಲಾಲ್ ಅತಿಥಿ ನಟರಾಗಿ ಬಂದುಹೋಗಿದ್ದರು.


ಆದರೆ ಈ ಬಾರಿ ಮಮ್ಮುಟಿಯ ಆಗಮನಕ್ಕೆ ಅನೇಕ ಹೊಸ ಅರ್ಥಗಳು ಕಾಣಿಸುತ್ತಿವೆ. ಮೊದಲನೆಯದಾಗಿ ಮಮ್ಮುಟ್ಟಿ ಅತಿಥಿ ನಟರಾಗಿ ಕಾಣಿಸಿಕೊಳ್ಳುವ ಬದಲು ಪೂರ್ಣಪ್ರಮಾಣದ ನಾಯಕರಾಗಿ ಬಂದಿದ್ದಾರೆ. ಹಾಗೆಯೇ ಡಾ.ರಾಜ್‌ಕುಮಾರ್ ಮತ್ತು ವಿಷ್ಣುವರ್ಧನ್ ನಿಧನ ಹೊಂದಿದ ನಂತರ ಕನ್ನಡ ಚಿತ್ರರಂಗದಲ್ಲಿ ಒಂದು ಶೂನ್ಯ ಆವರಿಸಿರುವ ಸಂದರ್ಭದಲ್ಲಿ ಮಮ್ಮುಟ್ಟಿ ಗಾಂಧಿನಗರಕ್ಕೆ ಕಾಲಿಟ್ಟಿದ್ದಾರೆ. ಅವರ ಸಮಕಾಲೀನರಾದ ಅಂಬರೀಶ್ ನೇಪಥ್ಯಕ್ಕೆ ಸರಿದಿರುವುದು, ಅನಂತ್‌ನಾಗ್ ಬೇಡಿಕೆಯಲ್ಲಿಲ್ಲದಿರುವುದು, ಕ್ರೇಜಿಸ್ಟಾರ್ ರವಿಚಂದ್ರ ಚಾರಿಷ್ಮಾ ಕಳೆದುಕೊಂಡಿರುವುದು... ಹೀಗೆ ಕನ್ನಡದ ನಟರೆಲ್ಲಾ ಮಂಕಾಗಿರುವಾಗ ಮಮ್ಮುಟ್ಟಿ ಕೇರಳದಿಂದ ಇಲ್ಲಿಗೆ ಬಂದಿದ್ದಾರೆ.

ಸುಮಾರು 25 ವರ್ಷಗಳ ಹಿಂದೆಯೇ ಮಮ್ಮುಟ್ಟಿ ಕಾಲ್‌ಶೀಟ್‌ಗಾಗಿ ರಾಜೇಂದ್ರಸಿಂಗ್ ಬಾಬು ಪ್ರಯತ್ನಿಸಿದ್ದರಂತೆ. ಬಾಬು ತರಹ ಇನ್ನು ಅನೇಕ ಕನ್ನಡ ನಿರ್ದೇಶಕರು ಮಮ್ಮುಟಿಯ ಕಾಲ್‌ಶೀಟ್‌ಗಾಗಿ ವಿಫಲಯತ್ನ ನಡೆಸಿದ್ದರು. ಈಗ ಮಮ್ಮುಟ್ಟಿಯ ಕಾಲ್‌ಶೀಟ್ ಒಂದೇ ಒಂದು ಚಿತ್ರ ನಿರ್ದೇಶಿಸಿರುವ ಅಭಯಸಿಂಹ ಎಂಬ ಯುವಕನಿಗೆ ದೊರೆತದ್ದು ನೋಡಿ ಗಾಂಧಿನಗರ ಹಿರಿಯ ನಿರ್ದೇಶಕರೆಲ್ಲಾ ಬೆಚ್ಚಿ ಬದ್ದಿದ್ದಾರೆ.


ಕರ್ನಾಟಕದಲ್ಲಿ ತೆಲುಗು ನಟರಾದ ಚಿರಂಜೀವಿ, ಬಾಲಕೃಷ್ಣ ಅಥವಾ ತಮಿಳು ನಟರಾದ ಕಮಲ ಹಾಸನ್ ಮತ್ತು ರಜನೀಕಾಂತ್ ಇವರುಗಳಿಗೆ ಅಪಾರವಾದ ಸಂಖ್ಯೆಯಲ್ಲಿ ಅಭಿಮಾನಿಗಳು ಇದ್ದಾರೆ. ಅಷ್ಟೇ ಯಾಕೆ, ಅವರ ಚಿತ್ರಗಳು ಇಲ್ಲಿ ಬಿಡುಗಡೆಯಾಗುವಾಗ ಅಭಿಮಾನಿ ಸಂಘದವರು ತಮ್ಮ ಆರಾಧ್ಯದೈವ ನಟನ ಕಟೌಟ್ ಕಟ್ಟಿ ಮೆರವಣಿಗೆ ಮಾಡಿದ ಉದಾಹರಣೆಗಳೂ ಬೇಕಾದಷ್ಟಿವೆ. ಈ ಕಾರಣದಿಂದಲೇ ತಮಿಳು ಮತ್ತು ತೆಲುಗು ಚಿತ್ರಗಳು ಕರ್ನಾಟಕದಲ್ಲಿ ಶತದಿನೋತ್ಸವ ಆಚರಿಸಿದ ಅನೇಕ ಉದಾಹರಣೆಗಳೂ ಇವೆ. ಆದರೆ ಮಲೆಯಾಳಂನ ನಟರಾದ ಮಮ್ಮುಟ್ಟಿ, ಮೋಹನ್ ಲಾಲ್ ನಟಿಸಿದ ಚಿತ್ರಗಳು ಇಲ್ಲಿ ಜಯಭೇರಿ ಬಾರಿಸಿದ್ದೇ ಇಲ್ಲ. ಮಂಗಳೂರು-ಕೊಡಗು ಪ್ರದೇಶಗಳಲ್ಲಿ ಇವರ ಚಿತ್ರಗಳು ಪ್ರದರ್ಶನ ಕಾಣುವುದು ಬಿಟ್ಟರೆ ರಾಜ್ಯದ ಬೇರೆ ಭಾಗಗಳಲ್ಲಿ ಬೇಡಿಕೆಯೇ ಇರುವುದಿಲ್ಲ.

ಹೀಗಾಗಿ ಈಗ ಮಮ್ಮುಟ್ಟಿ ಪೂರ್ಣಪ್ರಮಾಣದಲ್ಲಿ ನಾಯಕನಟನಾಗಿ ನಟಿಸುತ್ತಿರುವ ಮೊದಲ ಚಿತ್ರ 'ಶಿಕಾರಿ'ಯ ಭವಿಷ್ಯ ಏನಾಗಬಹುದೋ ಎಂಬ ಕುತೂಹಲವಿದೆ. ಇದು ಕಮರ್ಷಿಯಲ್ ಚಿತ್ರಗಳ ಸಾಲಿಗೆ ಸೇರಿ ನಿರ್ಮಾಪಕ ಕೆ.ಮಂಜುಗೆ ಹಣದ ಥೈಲಿಯನ್ನು ತಂದುಕೊಡುತ್ತದೋ? ಅಥವಾ ರಾಷ್ಟ್ರಪ್ರಶಸ್ತಿ ವಿಜೇತ 'ಗುಬ್ಬಚ್ಚಿಗಳು' ಚಿತ್ರದ ನಿರ್ದೇಶಕ ಅಭಯಸಿಂಹ ಪಾಲಿಗೆ ಮತ್ತೊಂದು 'ಗುಬ್ಬಚ್ಚಿ'ಯಾಗುತ್ತದೋ ಕಾಲವೇ ನಿರ್ಧರಿಸುತ್ತದೆ.

ಆದೇನೆ ಇರಲಿ, ಮಮ್ಮುಟ್ಟಿಯಂತಹ ಪ್ರತಿಭಾವಂತ ನಾಯಕನಟ ಕನ್ನಡ ಚಿತ್ರದಲ್ಲಿ ನಟಿಸುತ್ತಿರುವುದು ಸ್ವಾಗತಾರ್ಹ. ಮಲೆಯಾಳಂನ ಕಮರ್ಷಿಯಲ್ ಮತ್ತು ಕಲಾತ್ಮಕ ಚಿತ್ರಗಳಲ್ಲಿ ನಟಿಸಿ ಭಾರೀ ಜನಮನ್ನಣೆ ಪಡೆದಿರುವ ಈ ನಟನನ್ನು ಕನ್ನಡಿಗರು ಹೇಗೆ ಸ್ವೀಕರಿಸುತ್ತಾರೆ? ಯಾಕೆಂದರೆ ಇವರ ಬೆಂಬಲಕ್ಕೆ ದೊಡ್ಡ ನಿರ್ದೇಶಕರೂ ಇಲ್ಲ, ಅಥವಾ ಕನ್ನಡದ ಜನಪ್ರಿಯ ನಾಯಕಿಯೂ ಇಲ್ಲ. ಹೀಗಾಗಿ ಇಡೀ ಚಿತ್ರದ ಸೋಲು ಗೆಲುವು ಅವರ ನಾಮಬಲದ ಮೇಲೆ ನಿಂತಿದೆ. ಇದನ್ನೇ ತಾನೇ ಏಕಾಂಗಿ ಹೋರಾಟ ಎನ್ನುವುದು. ಈ ಏಕಾಂಗಿ ವೀರನಿಗೆ ಕನ್ನಡಿಗರು ಗೆಲುವಿನ ಸ್ಪರ್ಶ ನೀಡುತ್ತಾರೆಯೇ?


ಮಮ್ಮುಟ್ಟಿ

• ಶೆಣೈ
shenoylankesh@gmail.com



ಬರ್ತ್‌ಡೇ ಬಾಯ್ಸ್

ಈ ವಾರ ರೆಬೆಲ್‌ಸ್ಟಾರ್ ಅಂಬರೀಶ್ ಮತ್ತು ಕ್ರೇಜೆಸ್ಟಾರ್ ರವಿಚಂದ್ರನ್ ಹುಟ್ಟುಹಬ್ಬ. ಅಂಬಿ ಮೇ 29ರಂದು ಜನಿಸಿದರೆ, ರವಿಯ ಡೇಟ್ ಆಫ್ ಬರ್ತ್ ಮೇ 30.

ಇವರಿಬ್ಬರೂ ಜನಪ್ರಿಯತೆಯ ತುತ್ತತುದಿಯಲ್ಲಿದ್ದಾಗ ಈ ಎರಡು ದಿನಗಳು ಉದ್ಯಮದವರ ಪಾಲಿಗೆ ಹಬ್ಬದಂತಿದ್ದವು. ಅಂಬಿ ಪಾರ್ಟಿ ಆರಂಭವಾಗುವುದು ಮೇ 29ರ ಮಧ್ಯರಾತ್ರಿ. ಅದೇ ಸಮಯಕ್ಕೆ ರವಿ ಹುಟ್ಟಿದ ಹಬ್ಬವೂ ಆರಂಭ ತಾನೇ? ಇಬ್ಬರ ಸ್ನೇಹಿತರ ವಲಯವೂ ಒಂದೇ ಆಗಿರುತ್ತಿತ್ತು. ಚಿತ್ರರಂಗದಲ್ಲಿ ಇಬ್ಬರೂ ಅಜಾತ ಶತ್ರುಗಳಾಗಿದ್ದರಿಂದ ಇಡೀ ಉದ್ಯಮವೇ ಅವರ ಬರ್ತ್‌ಡೇಗೆ ಹಾಜರಾಗುತ್ತಿತ್ತು. ಹೀಗಾಗಿ ಕೆಲವೊಮ್ಮೆ ಸಂತೋಷಕೂಟಗಳು ಹೇಗಿರುತ್ತಿದ್ದವೆಂದರೆ ಇದು ಅಂಬಿಯ ಬರ್ತ್‌ಡೇ ಪಾರ್ಟಿನೋ? ರವಿಯ ಪಾರ್ಟಿನೋ ಎಂದು ಗೊತ್ತಾಗುತ್ತಿರಲಿಲ್ಲ.

ಆದರೆ ಕಳೆದ ಕೆಲವು ವರ್ಷಗಳಿಂದ ಇವರಿಬ್ಬರ ಬರ್ತ್‌ಡೇ ಪಾರ್ಟಿಯ ಅದ್ದೂರಿತನ ಕುಂದಿದೆ. ಇದಕ್ಕೆ ಕಾರಣ ಇವರಿಬ್ಬರೂ ಈಗ ಅಷ್ಟೊಂದು ಲೈಮ್ ಲೈಟ್‌ನಲ್ಲಿ ಇಲ್ಲದಿರುವುದು. ಅಂಬಿ ಸಿನಿಮಾದಲ್ಲಿ ಮಾತ್ರವಲ್ಲ, ರಾಜಕೀಯದಲ್ಲೂ ಸೋತು ಸುಣ್ಣವಾಗಿದ್ದಾರೆ. ರವಿ ಒಂದು ಸೂಪರ್ ಹಿಟ್ ಚಿತ್ರಕೊಡಲು ಪರದಾಡುತ್ತಿದ್ದಾರೆ. ಸಾಮಾನ್ಯವಾಗಿ ನಾಯಕನಟರ ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ಜಯಭೇರಿ ಬಾರಿಸಿದ್ದ ಸಂದರ್ಭಗಳಲ್ಲಿ ಅವರ ಹುಟ್ಟುಹಬ್ಬದ ಅದ್ದೂರಿತನವೂ ತೀವ್ರವಾಗಿರುತ್ತದೆ. ಹೀಗಾಗಿ ಇತ್ತೀಚಿನ ದಿನಗಳಲ್ಲಿ ಗೆಲುವಿನ ರುಚಿ ಕಾಣದ ಅಂಬಿ ಮತ್ತು ರವಿ ಈ ಬಾರಿಯೂ ಸದ್ದುಗದ್ದಲವಿಲ್ಲದೇ ಬರ್ತ್‌ಡೇ ಆಚರಿಸಲಿದ್ದಾರೆ. ಅದೇನೆ ಇರಲಿ, ರೆಬೆಲ್ ಸ್ಟಾರ್‌ಗೂ ಕ್ರೇಜಿ ಸ್ಟಾರ್‌ಗೂ ಹುಟ್ಟುಹಬ್ಬದ ಶುಭಾಶಯಗಳು.

ತೆಲುಗಿಗೆ ಸೌಂದರ್ಯ

...ಯಮಾಲಾ ಅವರ ಪುತ್ರಿ ಸೌಂದರ್ಯ ಸದ್ದುಗದ್ದಲವಿಲ್ಲದೇ ತೆಲುಗು ಚಿತ್ರದ ಮುಖಾಂತರ ... ಲೋಕಕ್ಕೆ ಪಾದಾರ್ಪಣೆ ಮಾಡಿದ್ದಾಳೆ. ಚಿತ್ರದ ಹೆಸರು 'ಮಿಸ್ಟರ್ ಪ್ರೇಮಿಕುಡು'. 'ಉಲ್ಲಾಸಂಗ, ...ಹಂಗಾ' ತೆಲುಗು ಚಿತ್ರದ ನಾಯಕ ಯಶೋಸಾಗರ್ ಈ ಚಿತ್ರದ ನಾಯಕ. ಆದರೆ ಸೌಂದರ್ಯ ತನ್ನ ...ನ್ನು ಉನ್ನತಿ ಎಂದು ಬದಲಾಯಿಸಿಕೊಂಡಿದ್ದಾಳೆ.

...ಳೆದ ವರ್ಷ ಯೋಗರಾಜ್ ಭಟ್ ನಿರ್ದೇಶನದಲ್ಲಿ ಆರಂಭವಾಗಬೇಕಿದ್ದ 'ಲಗೋರಿ' ಚಿತ್ರದಲ್ಲಿ ...ತ್‌ಗೆ ಈಕೆಯೇ ನಾಯಕಿಯಾಗುತ್ತಾಳೆಂದು ಭಾರೀ ಸುದ್ದಿಯಾಗಿತ್ತು. ಆದರೆ ಆ ಚಿತ್ರ ಆರಂಭವಾಗಲೇ ... ಈ ಮಧ್ಯೆ ಸೌಂದರ್ಯಾಳ ಕಾಲ್‌ಶೀಟ್‌ಗಾಗಿ ಅನೇಕ ನಿರ್ಮಾಪಕರು, ನಿರ್ದೇಶಕರು ಜಯಮಾಲಾ ...ನ್ನು ಸಂಪರ್ಕಿಸಿದ್ದುಂಟು. ಆದರೆ ರಾಜ್‌ಕುಮಾರ್ ಕುಟುಂಬದೊಂದಿಗೆ ನಿಕಟಸಂಪರ್ಕ ಹೊಂದಿರುವ ...ಮಾಲಾ ಅವರು ತನ್ನ ಮಗಳ ವೃತ್ತಿಜೀವನ ಪವರ್‌ಸ್ಟಾರ್ ಪುನೀತ್‌ರಾಜ್‌ಕುಮಾರ್ ಜೋಡಿಯಾಗಿಯೇ ...ಭವಾಗಬೇಕು ಎಂದು ಆಸೆಪಟ್ಟಿದ್ದರಿಂದ ಬೇರೆಯವರಿಗೆ ಸೌಂದರ್ಯ ದಕ್ಕಲಿಲ್ಲ.

...ಾಗೆ ನೋಡಿದರೆ ಜಯಮಾಲಾ ಕೂಡ ಲೈಮ್‌ಲೈಟ್‌ಗೆ ಬಂದಿದ್ದು ರಾಜ್ ಜತೆ ನಟಿಸಿದ್ದ 'ಗಿರಿಕನ್ಯೆ' ...ಂದ. ಹೀಗಾಗಿ ತನ್ನ ಮಗಳ ಬಣ್ಣದ ಬದುಕು ರಾಜ್ ಪುತ್ರನ ಜೊತೆಯಿಂದಲೇ ಆರಂಭವಾಗಲಿ ... ಭಾವನಾತ್ಮಕ ನಂಟು ಆಕೆಗಿದ್ದಿದ್ದು ತಪ್ಪಲ್ಲ. ಕನ್ನಡ ಚಿತ್ರರಂಗದಲ್ಲಿ ಒಂದು ಪ್ರತೀತಿ ಇದೆ. ...ನೆಂದರೆ ಓರ್ವ ನಾಯಕಿಯ ವೃತ್ತಿ ಜೀವನ ರಾಜ್ ಸಂಸ್ಥೆಯಿಂದ ಆರಂಭವಾದರೆ ಆಕೆ ಬಹು ಎತ್ತರಕ್ಕೆ ...ಮತ್ತಾರೆಂದು. ಇದಕ್ಕೆ ಉದಾಹರಣೆ ಸುಧಾರಾಣಿ, ಪ್ರೇಮ, ಮಾಲಾಶ್ರೀ, ರಕ್ಷಿತಾ, ರಮ್ಯಾ... ...ಲಾದವರು. ಆ ಕಾರಣಕ್ಕೆ ಜಯಮಾಲ ತನ್ನ ಪುತ್ರಿ ಸೌಂದರ್ಯ ಕೂಡಾ ರಾಜ್ ಸಂಸ್ಥೆಯಿಂದಲೇ ...ಯವಾಗಲಿ ಎಂದು ಆಶಿಸಿದ್ದರು. ಜಯಮಾಲಾರಂತೆ ಆಶಿಸಿದ ಮತ್ತೊಬ್ಬ ...ಬೆಂದರೆ ಪ್ರಮೀಳ ಜೋಷಾಯ್. ಆಕೆ ಕೂಡ ತನ್ನ ಪುತ್ರಿ ಮೇಘನಾ ... ಮೊದಲು ಅಪ್ಪು ಜತೆ ನಟಿಸಬೇಕೆಂದು ಆಶಿಸಿದ್ದರು. ಅದಕ್ಕಾಗಿ ... ಕಾದು ಸುಸ್ತಾಗಿ ಕೊನೆಗೆ ತಮಿಳು ಚಿತ್ರದ ಮೂಲಕ ಆಕೆಯ ...ಜೀವನ ಆರಂಭವಾಯಿತು.

...ಅಂತೂ ಕನ್ನಡ ಚಿತ್ರರಂಗದ ಮತ್ತೊಬ್ಬ ಮಾಜಿ ನಾಯಕಿ ...ಮಾಲಾ ತನ್ನ ಪುತ್ರಿಯನ್ನು ತನಗೆ ಬದುಕು ನೀಡಿದ್ದ ಈ ...ದಾಲೋಕಕ್ಕೆ ಅರ್ಪಿಸಿದ್ದಾರೆ. ತೆಲುಗು ಚಿತ್ರದ ಮೂಲಕ ...ಕ್ಕೆ ಬಣ್ಣ ಹಚ್ಚಿರುವ ಸೌಂದರ್ಯ ಆದಷ್ಟು ಬೇಗ ...ಚಿತ್ರಗಳಲ್ಲಿ ಕಾಣಿಸಿಕೊಂಡರೂ ಆಶ್ಚರ್ಯವಿಲ್ಲ. ಚೇಂಬರ್ ... ಪದವಿಯಿಂದ ಕೆಳಗಿಳಿದ ಒಂದೇ ವಾರಕ್ಕೆ ...ಮಾಲಾ ಈಗ ತನ್ನ ಪುತ್ರಿಯ ಜೊತೆ ಅಮ್ಮನಾಗಿ ...ಗು ಚಿತ್ರರಂಗದಲ್ಲಿ ಓಡಾಡುತ್ತಿರುವುದು ...ವಾಗಿ ಕಾಣುತ್ತದೆಯಲ್ಲವೇ?



ಗುರು ಮತ್ತು ಗುಲಾಮರು


ಗುರುಕಿರಣ್ ಕನ್ನಡ ಚಿತ್ರರಂಗ ಕಂಡ ಅತ್ಯಂತ ಬೇಡಿಕೆಯ ಮತ್ತು ಕ್ರಿಯಾಶೀಲ ಸಂಗೀತ ನಿರ್ದೇಶಕ. ಸಿನಿಮಾಗಳ ಸಂಗೀತ ನಿರ್ದೇಶನದ ಜೊತೆಗೆ ಟಿವಿಗಳಲ್ಲಿ ರಿಯಾಲಿಟಿ ಷೋಗಳಲ್ಲಿ ತೀರ್ಪುಗಾರರಾಗಿ ಕಾಣಿಸಿಕೊಳ್ಳುವ ಗುರುಕಿರಣ್ ತನ್ನದೇ ತಂಡ ಕಟ್ಟಿಕೊಂಡು ರಾಜ್ಯ ಮತ್ತು ಪರದೇಶಗಳಲ್ಲಿ ಕಾರ್ಯಕ್ರಮವನ್ನು ಕೂಡಾ ನೀಡಿದ ಖ್ಯಾತಿ ಹೊಂದಿದ್ದಾರೆ.

ಮೊನ್ನೆ 'ಮೈಲಾರಿ' ಚಿತ್ರದ ನಾಯಕ ಶಿವರಾಜ್‌ಕುಮಾರ್ ಬಹಳ ಜಾಣ್ಮೆಯಿಂದ ಗುರುಕಿರಣ್ ಬಗ್ಗೆ ಎರಡು ಮಾತನಾಡಿದರು. ಅದರ ಸಾರಾಂಶ ಹೀಗಿದೆ:


"ನಮ್ಮ ಚಿತ್ರಕ್ಕೆ ಗುರುಕಿರಣ್ ಸಂಗೀತ ನಿರ್ದೇಶಕರು. ಅವರು ಈ ಹಿಂದೆಯೂ ನನ್ನ ಚಿತ್ರಗಳಿಗೆ ಒಳ್ಳೆಯ ಸಂಗೀತ ನೀಡಿದ್ದಾರೆ. ಆದರೆ ಅವರದ್ದು ಒಂದೇ ಒಂದು ಸಮಸ್ಯೆಯೆಂದರೆ ಹೇಳಿದ ಸಮಯಕ್ಕೆ ಸರಿಯಾಗಿ ಹಾಡುಗಳನ್ನು ನೀಡುವುದಿಲ್ಲ. ಹೀಗಾಗಿ ಈ ಬಾರಿ 'ಮೈಲಾರಿ' ಚಿತ್ರಕ್ಕೆ ಅವರ ಹಾಡು ಮತ್ತು ಸಂಗೀತ ಬಾರದಿದ್ದರೂ ನಾನು ನೃತ್ಯ ಮಾಡಿ ಮುಗಿಸಿದ್ದೇನೆ. ನನ್ನ ವೃತ್ತಿಜೀವನದಲ್ಲಿ ಹಾಡುಗಳ ಟ್ರ್ಯಾಕ್ ಇಲ್ಲದೇ ನಾನು ನೃತ್ಯ ಮಾಡಿದ್ದು ಇದೇ ಮೊದಲ ಬಾರಿ. ಆದರೆ ಇದಕ್ಕೆ ಗುರುಕಿರಣ್ ಖಂಡಿತಾ ಕಾರಣರಲ್ಲ."

ಇದರರ್ಥ ಗುರುಕಿರಣ್ ಲೇಟ್‌ಲತೀಫ್ ಎಂದು ಅಲ್ಲಿದ್ದವರಿಗೆ ಸುಲಭವಾಗಿ ಅರ್ಥವಾಯಿತು. ಆದರೆ ಶಿವು ಹೇಳಿದ ರೀತಿಯಲ್ಲಿ ಒಂಥರಾ ಜಾಣತನವಿತ್ತು. ಅವರು ಹೇಳಬೇಕಾದ ವಿಷಯಗಳನ್ನು ಮಾಧ್ಯಮದವರಿಗೆ ನಾಜೂಕಾಗಿ ತಿಳಿಸಿಯೇಬಿಟ್ಟರು.

ಇದು ಗುರುಕಿರಣ್ ಬಗ್ಗೆ ಉದ್ಯಮದಲ್ಲಿ ಕೇಳಿಬರುವ ಏಕೈಕ ಅಪಸ್ವರ. ಈ ಹಿಂದೆಯೂ ಅನೇಕ ನಿರ್ದೇಶಕರು ಗುರುವಿನ ಸಂಗೀತ ಟ್ರ್ಯಾಕ್‌ಗಾಗಿ ಕಾದು ಕಾದು ಸುಸ್ತಾದ ಉದಾಹರಣೆಗಳಿವೆ. ಕೆಲವರು 'ಗುರು'ವಿನ ಗುಲಾಮನಾಗುವತನಕ ಕಾದರು. ಆದರೆ ಶಿವರಾಜ್‌ಕುಮಾರ್ 'ಗುರು'ವಿನ ಗುಲಾಮನಾಗುವ ಬದಲು 'ಗುರು'ವಿಲ್ಲದೇ ಮುನ್ನಡೆದರು. ಈಗಲಾದರೂ 'ಗುರು' ಎಚ್ಚೆತ್ತುಕೊಂಡು ಕಾಲ ಅಥವಾ ಟೈಂ ಕೀಪಪ್ ಮಾಡುವುದು ಕಲಿತುಕೊಳ್ಳಲಿ. ಯಾಕೆಂದರೆ 'ಕಾಲವನ್ನೂ ತಡೆಯೋರೋ ಯಾರೂ ಇಲ್ಲ...'



ಹೂ ಕ್ರೇಜಿಸ್ಟಾರ್‌ಗೆ ಕೊನೇ ಛಾನ್ಸು!



ರವಿಚಂದ್ರನ್ 50

ಕನ್ನಡ ಚಿತ್ರರಂಗದ ಶೋ ಮ್ಯಾನ್, ಕರ್ನಾಟಕದ ರಾಜ್‌ಕಪೂರ್, ಕನಸುಗಾರ, ಕ್ರೇಜಿಸ್ಟಾರ್... ಹೀಗೆ ಹತ್ತು ಹಲವು ಬಿರುದು, ಪತಾಕೆಗಳಿಗೆ ಪಾತ್ರರಾಗಿರುವ, ಸ್ಯಾಂಡಲ್‌ವುಡ್‌ನ ಅಮಲುಗಣ್ಣಿನ ಚೆಲುವ ಇದೇ ಮೇ ಇಪ್ಪತ್ತೊಂಭತ್ತಕ್ಕೆ ಭರ್ತಿ ಐವತ್ತನೇ ವರ್ಷಕ್ಕೆ ಕಾಲಿಡುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಬಹಳ ದೊಡ್ಡ ಗ್ಯಾಪ್ ನಂತರ ಅವರ ನಿರ್ದೇಶನ ಮತ್ತು ನಟನೆಯ 'ಹೂ' ಚಿತ್ರ ಬಿಡುಗಡೆ ಗೊಳ್ಳುತ್ತಿದೆ...

ರವಿಚಂದ್ರನ್ ಪಾಪ್ಯುಲಾರಿಟಿ ಪಡೆದದ್ದು ಹೀರೋ ಆದ ನಂತರವಾದರೂ, ಅವರು ಮೊಟ್ಟ ಮೊದಲಿಗೆ ಬಣ್ಣಹಚ್ಚಿದ್ದು 'ಕುಲಗೌರವ' ಚಿತ್ರಕ್ಕೆ. ಪೇಕೇಟಿ ಶಿವರಾಮ್ ನಿರ್ದೇಶನದ ಆ ಚಿತ್ರದಲ್ಲಿ ಡಾ.ರಾಜ್ ತ್ರಿಪಾತ್ರದಲ್ಲಿ ನಟಿಸಿದ್ದರು. ರವಿಚಂದ್ರನ್ ಅವರ ತಂದೆ ವೀರಾಸ್ವಾಮಿ ಅವರೇ ನಿರ್ಮಿಸಿದ್ದ ಈ ಚಿತ್ರದಲ್ಲಿ ಬಾಲ ಕಲಾವಿದನೊಬ್ಬನ ಅವಶ್ಯಕತೆಯಿದ್ದುದರಿಂದ ಮುದ್ದುಮುದ್ದಾಗಿ ಕಾಣುತ್ತಿದ್ದ ರವಿಚಂದ್ರನ್ ಅವರನ್ನೇ ಆ ಪಾತ್ರಕ್ಕೆ ಹಾಕಿಕೊಂಡಿದ್ದರು. ಹಾಗೆ ಸಣ್ಣ ವಯಸ್ಸಿಗೇ ರವಿ 'ಕಲಾವಿದ'ನಾಗಿದ್ದರು. ನಂತರ 'ಖದೀಮ ಕಳ್ಳರು' ಎಂಬ ಚಿತ್ರದಲ್ಲಿ ಪ್ರಭಾಕರ್ ಮತ್ತು ಅಂಬರೀಶ್ ಜೊತೆ ಪುಟ್ಟ ಪಾತ್ರವೊಂದರಲ್ಲಿ ರವಿ ನಟಿಸಿದ್ದರು.

ಪ್ರೇಮಲೋಕದ ಹಮ್ಮೀರ

ಆದರೆ ರವಿಚಂದ್ರನ್ ಎಂಬ ಸುರಸುಂದರಾಂಗನನ್ನು ಪೂರ್ಣ ಪ್ರಮಾಣದಲ್ಲಿ ನಾಯಕನನ್ನಾಗಿಸಿದವರು ದೈತ್ಯ ದೇಹಿ ಎಂ.ಪಿ. ಶಂಕರ್. ತಮ್ಮದೇ ನಿರ್ಮಾಣದ 'ನಾನೇ ರಾಜ' ಸಿನಿಮಾವನ್ನು ತೆಗೆದು, ರವಿಯನ್ನು ಹೀರೋ ಮಾಡಿದ್ದರು. ನಂತರ 'ಸ್ವಾಭಿಮಾನ', 'ಪ್ರಳಯಾಂತಕ', 'ಸಾವಿರ ಸುಳ್ಳು' ಮುಂತಾದ ಚಿತ್ರಗಳ ಮೂಲಕ ರವಿ ಹೀರೋ ಆಗಿ ಮುಂದುವರೆದಿದ್ದರು. ಆಗ ಇವರು ಸಾಧಾರಣ ಹೀರೋ ಮಾತ್ರ ಆಗಿದ್ದರು.

ಆಗ ಪರದೆಯನ್ನು ಸೀಳಿ ಬಂತು 'ಪ್ರೇಮಲೋಕ'. 1987ರಲ್ಲಿ ಬಂದ 'ಪ್ರೇಮಲೋಕ'ದಲ್ಲಿ ರವಿ ನಟಿಸಿದ್ದರಲ್ಲದೆ ಅದನ್ನು ಅವರೇ ನಿರ್ದೇಶಿಸಿದ್ದರು. ತಾಜಾತನ, ಹೊಸ ರೀತಿಯ ಡೈಲಾಗ್‌ಗಳು ಇದ್ದ ಆ ಚಿತ್ರದ ಮೂಲಕ ರವಿಚಂದ್ರನ್ ಯುವಕರ ಮನಸ್ಸಿಗೆ ಲಗ್ಗೆಯಿಟ್ಟು ಕನಸುಗಾರನಾಗಿ ಹೊರಹೊಮ್ಮಿದರು. ತನ್ನೊಟ್ಟಿಗೆ ಹಂಸಲೇಖ ಎಂಬ ಮತ್ತೊಬ್ಬ ಮಾಂತ್ರಿಕನನ್ನೂ ಚಿತ್ರರಂಗಕ್ಕೆ ಪರಿಚಯಿಸಿದರು. ಆ ಚಿತ್ರದ ಬೆನ್ನಿಗೇ ಬಂದ 'ರಣಧೀರ' ಈ ಕನಸಿನ ಪಕ್ಷಿಯ ರೆಕ್ಕೆಗಳನ್ನು ಮತ್ತಷ್ಟು ಹುರಿಗೊಳಿಸಿತು. ತಮ್ಮ ನಿರ್ದೇಶನದ ಚಿತ್ರಗಳಲ್ಲದೆ ಬೇರೆ ನಿರ್ದೇಶಕರ ಚಿತ್ರಗಳಲ್ಲೂ ಬ್ಯುಸಿಯಾದ ರವಿ ಒಂದರಹಿಂದೆ ಒಂದು ಸಿನಿಮಾವನ್ನು ಮಾಡುತ್ತಾ ಬಂದರು. ಹೀಗೆ ಯಶಸ್ಸನ್ನೇ ಹೊದ್ದು ಮಲಗಿದ್ದ ರವಿಚಂದ್ರನ್‌ಗೆ ಮೊಟ್ಟಮೊದಲ ಬಾರಿಗೆ ಸೋಲು ಎಂಬ ಹೊಡೆತ ಬಿದ್ದದ್ದು 'ಶಾಂತಿಕ್ರಾಂತಿ'ಯ ಮೂಲಕ. 1991ರಲ್ಲಿ ಕನ್ನಡ, ತಮಿಳು, ತೆಲುಗು ಮತ್ತು ಹಿಂದಿ ಭಾಷೆಗಳಲ್ಲಿ ಬಂದ 'ಶಾಂತಿಕ್ರಾಂತಿ' ಆ ಕಾಲಕ್ಕೇ ಐದಾರು ಕೋಟಿಯನ್ನು ನುಂಗಿಹಾಕಿತ್ತು, ಆದರೆ ಅದೇನು ದುರಾದೃಷ್ಟವೋ ಆ ಚಿತ್ರ ನಿರೀಕ್ಷೆಗಳನ್ನೆಲ್ಲಾ ಸುಳ್ಳು ಮಾಡಿ ಅಟ್ಟರ್‌ಫ್ಲಾಪ್ ಆಗಿಬಿಟ್ಟಿತು. ಆ ಸಿನಿಮಾ ರವಿಚಂದ್ರನ್‌ಗೆ ಅದ್ಯಾವ ಪರಿ ಪೆಟ್ಟು ನೀಡಿತೆಂದರೆ ಹಲವು ವರ್ಷಗಳ ಕಾಲ ರವಿ ಚಿತ್ರ ನಿರ್ಮಾಣವನ್ನೇ ನಿಲ್ಲಿಸಿಬಿಟ್ಟಿದ್ದರು.

'ಶಾಂತಿಕ್ರಾಂತಿ' ಕೆಟ್ಟ ಸೋಲು ಕಂಡರೂ ರವಿಯ ಇಮೇಜ್‌ಗೆ ಯಾವುದೇ ಧಕ್ಕೆಯಾಗಿರಲಿಲ್ಲ. ಅದೇ ಸಮಯಕ್ಕೆ ಬಂದ 'ರಾಮಾಚಾರಿ' ರವಿಚಂದ್ರನ್‌ಗೆ ಹೊಸ ಹಳ್ಳಿ ಹೀರೋ ಇಮೇಜು ತಂದುಕೊಟ್ಟಿತು. ಅಲ್ಲಿಂದ ಶುರುವಾಯ್ತು ರವಿಯ ಹಳ್ಳಿ ವರಸೆ. 'ಹಳ್ಳಿ ಮೇಷ್ಟ್ರು', 'ಚಿಕ್ಕೆಜಮಾನ್ರು', 'ಪುಟ್ನಂಜ', 'ಅಣ್ಣಯ್ಯ' ಮುಂತಾದ ಸಾಲು ಸಾಲು ಹಳ್ಳಿಹೈದನ ಪಾತ್ರಗಳು ರವಿ ಬದುಕನ್ನು ಹಸನಾಗಿಸಿದವು. ಜೊತೆಜೊತೆಗೇ 'ಮನೆ ದೇವರು', 'ರಸಿಕ', 'ಗಡಿಬಿಡಿ ಗಂಡ', 'ಜಾಣ', 'ಚಿನ್ನ'ದಂಥ ಚಿತ್ರಗಳು ರವಿಚಂದ್ರನ್ ಅವರನ್ನು ರೊಮ್ಯಾಂಟಿಕ್ ಹೀರೋ ಆಗಿಯೂ ಬಿಗಿದಪ್ಪಿದವು. ಈ ಮಧ್ಯೆ 'ಕಲಾವಿದ' ಎಂಬ ಫ್ಲಾಪು ಸಿನಿಮಾ, 'ಸಿಪಾಯಿ' ಎಂಬ ಸೂಪರ್ ಹಿಟ್ ಸಿನಿಮಾಗಳೂ ಸೇರಿದಂತೆ ವರ್ಷಕ್ಕೆ ಎರಡು-ಮೂರು ಸಿನಿಮಾಗಳಲ್ಲಿ ನಟಿಸುವುದರಲ್ಲೇ ತಲ್ಲೀನರಾದರು ರವಿ. ಆದರೆ ಈ ಚಿತ್ರಗಳಲ್ಲಿ ಬಹುತೇಕ ಸಿನಿಮಾಗಳು ರಿಮೇಕುಗಳೇ ಆಗಿದ್ದವು.

ದುರಂತವೆಂದರೆ 'ಶಾಂತಿಕ್ರಾಂತಿ'ಯ ನಂತರ ಹತ್ತಿಪ್ಪತ್ತು ಸಿನಿಮಾಗಳಲ್ಲಿ ರವಿಚಂದ್ರನ್ ನಟಿಸಿದರೂ ಆ ಸಿನಿಮಾಕ್ಕಾಗಿ ಮಾಡಿದ್ದ ಸಾಲ ಮಾತ್ರ ಅವರನ್ನು ಬಿಟ್ಟು ದೂರ ಹೋಗಲೇ ಇಲ್ಲ. ಈ ನಡುವೆ ತನ್ನ ತಮ್ಮನಿಗಾಗಿ ಮಾಡಿದ 'ಅಹಂ ಪ್ರೇಮಾಸ್ಮಿ' ಚಿತ್ರ ಹಾಗು 'ಹೊಸತೇನನ್ನೋ ಮಾಡುತ್ತಿದ್ದೇನೆ' ಎಂಬ ಭ್ರಮೆಯಲ್ಲಿ ಮಾಡಿದ 'ಏಕಾಂಗಿ' ಸಿನಿಮಾಗಳು ರವಿಚಂದ್ರನ್‌ರನ್ನು ಆರ್ಥಿಕವಾಗಿ ಮತ್ತಷ್ಟು ಸಂಕಷ್ಟಕ್ಕೆ ದೂಡಿದವು. ಯಾವ ಚಿತ್ರಗಳ ಬಗ್ಗೆ ಅವರು ಮಹತ್ವಾಕಾಂಕ್ಷೆ ಇರಿಸಿಕೊಂಡಿದ್ದರೋ ಆ ಎರಡೂ ಚಿತ್ರಗಳು ಕನಸುಗಾರನ ಕನಸುಗಳನ್ನು ನುಚ್ಚುನೂರು ಮಾಡಿಬಿಟ್ಟವು.

ಮತ್ತದೇ ಹಳೇ ಫಾರ್ಮುಲಾ

'ಏಕಾಂಗಿ' ಆದನಂತರ 'ಕೋದಂಡ ರಾಮ', 'ಒಂದಾಗೋಣ ಬಾ', 'ಸಾಹುಕಾರ', 'ರಾಮಕೃಷ್ಣ', 'ಪಾಂಡುರಂಗ ವಿಠಲ' ಮುಂತಾದ ಕಮರ್ಷಿಯಲ್ ಸಿನಿಮಾಗಳಲ್ಲಿ ರವಿ ಕಾಣಿಸಿಕೊಂಡರು. ಆದರೆ ಈ ಎಲ್ಲ ಚಿತ್ರಗಳು ಶೋಚನೀಯ ಸೋಲು ಕಂಡಿದ್ದರಿಂದ "ರವಿ ಜಮಾನಾ ಮುಗಿದೇಹೋಯ್ತು" ಎಂಬಂತಾಯಿತು. ಆದರೆ ರವಿಚಂದ್ರನ್ ಅಷ್ಟು ಸುಲಭಕ್ಕೆ ಸೋಲುವ ವ್ಯಕ್ತಿಯೇ? ಹೀಗೇ ಬಿಟ್ಟರೆ ಜನ ತನ್ನನ್ನು ಮರೆತೇಬಿಡುತ್ತಾರೆ ಎಂದು ಅರಿತ ರವಿ 'ಮಲ್ಲ' ಎಂಬ ಪಕ್ಕಾ ಮಸಾಲೆ ಚಿತ್ರವನ್ನು ನಿರ್ದೇಶಿಸಿ ಅದರಲ್ಲಿ ನಟಿಸಿದರು. ಉಪೇಂದ್ರನ ಪತ್ನಿ ಪ್ರಿಯಾಂಕ ಈ ಚಿತ್ರದ ಹೀರೋಯಿನ್ನು. ಹೊಕ್ಕಳ ಮೇಲೆ ದ್ರಾಕ್ಷಿ, ನವಿಲುಗರಿ, ಪಾರಿವಾಳ ಎಲ್ಲವನ್ನೂ ಒಟ್ಟೊಟ್ಟಿಗೇ ಸೇರಿಸಿ ಹೊಸ ಮ್ಯಾಜಿಕ್ಕು ಮಾಡಿಬಿಟ್ಟರು. ಯಾರೂ ನಿರೀಕ್ಷಿಸದ ರೀತಿಯಲ್ಲಿ 'ಮಲ್ಲ' ಹಿಟ್ ಆಯಿತು.

ತಂದೆಯ ಪರಮ ಭಕ್ತ



ರವಿಚಂದ್ರನ್ ಯಶಸ್ಸಿನ ಮುಂಚೂಣಿಯಲ್ಲಿದ್ದಾಗಲೂ ದೇವರು-ದಿಂದಿರು ಎಂದು ಟೈಂ ವೇಸ್ಟ್ ಮಾಡಿದವರಲ್ಲ. ಆದರೆ ಬೆಳಗ್ಗೆ ಮನೆಯಿಂದ ಹೊರಡುವಾಗ ಬಾಗಿಲಲ್ಲೇ ಇರುವ ತಮ್ಮ ತಂದೆ ವೀರಾಸ್ವಾಮಿ ಅವರ ಫೋಟೋಗೆ ಕೈಮುಗಿದು ಹೋಗುವುದು ರವಿಚಂದ್ರನ್ ವಾಡಿಕೆ. ಒಂದು ವರ್ಷದ ಹಿಂದೆ ತಮ್ಮ ತಂದೆಯ ಹುಟ್ಟೂರಿಗೆ - ತಮಿಳುನಾಡಿನಲ್ಲಿರುವ ತಿರುವನಾಕೋಟೈ - ಹೋಗಿ ಅಲ್ಲಿ ದೊಡ್ಡ ದೇವತೆಯ ಶಿಲೆಯನ್ನು ನಿರ್ಮಿಸಿ, ಊರ ಹಬ್ಬ ಮಾಡಿ ಬಂದಿದ್ದರು.

ಒಮ್ಮೆ ರವಿ ಸಹೋದರ ಬಾಲಾಜಿ ಹುಡುಗಿಯೊಬ್ಬಳ ಆತ್ಮಹತ್ಯೆ ಕೇಸಿನಲ್ಲಿ ಸಿಕ್ಕಿಕೊಂಡುಬಿಟ್ಟಿದ್ದರು. ಈ ವಿಚಾರ ಮಾಧ್ಯಮಗಳಿಗೆ ಗೊತ್ತಾಗುತ್ತಿದ್ದಂತೆ ಎಲ್ಲಾ ಪತ್ರಿಕಾ ಕಚೇರಿಗಳಿಗೂ ಸ್ವತಃ ರವಿಚಂದ್ರನ್ ಅವರೇ ಫೋನು ಮಾಡಿದ್ದರು. ಬಹುಶಃ ತನ್ನ ತಮ್ಮನ ಬಗ್ಗೆ ವರದಿ ಪ್ರಕಟಿಸಬೇಡಿ ಎಂದು ರಿಕ್ವೆಸ್ಟ್ ಮಾಡಲು ರವಿ ಫೋನ್ ಮಾಡಿರಬಹುದು ಎಂದು ಪತ್ರಕರ್ತರು ಊಹಿಸಿದ್ದರು. ಆದರೆ ರವಿ ಮಾತ್ರ "ನನ್ನ ತಮ್ಮನ ಬಗ್ಗೆ ಬರಿಬೇಡಿ" ಎಂಬ ಸಣ್ಣ ಮನವಿಯನ್ನೂ ಮಾಡಲಿಲ್ಲ. ಬದಲಿಗೆ "ಸಮಾಜದ ದೃಷ್ಟಿಯಿಂದ ಆತ ಏನೇ ತಪ್ಪು ಮಾಡಿದ್ದರೂ ಅದನ್ನು ಬರೆಯಿರಿ. ಅದು ನಿಮ್ಮ ಹಕ್ಕು. ಆದರೆ ದಯವಿಟ್ಟು ಆತ ವೀರಾಸ್ವಾಮಿ ಮಗ ಎಂಬುದನ್ನು ಮಾತ್ರ ದಾಖಲಿಸಬೇಡಿ. ನನ್ನ ತಮ್ಮ ಮಾಡಿದ ತಪ್ಪು ನನ್ನ ತಂದೆಯ ಹೆಸರಿಗೆ ಕಪ್ಪುಚುಕ್ಕೆಯಾಗಬಾರದು" ಎಂದು ವಿನಂತಿ ಮಾಡಿಕೊಂಡಿದ್ದರು. ರವಿಚಂದ್ರನ್ ತನ್ನ ತಂದೆಯ ಮೇಲಿಟ್ಟಿರುವ ಗೌರವ ಎಂಥದ್ದು ಎಂಬುದಕ್ಕೆ ಇದೇ ಸಾಕ್ಷಿ.

ಮಂಜಿನ ಹನಿಯಲ್ಲಿ...

ಈಗ ಚಿತ್ರರಂಗದಲ್ಲಿ ಹೊಸಬರ ಅಲೆ ಎಂಥದ್ದೇ ಇದ್ದರೂ ತಾನು ಅದನ್ನು ಮೀರಿ ಲೈಮ್‌ಲೈಟಿಗೆ ಬಂದೇ ಬರುತ್ತೇನೆ ಎನ್ನುತ್ತಿರುವ ರವಿಚಂದ್ರನ್ ಹೊಸ ಹುರುಪಿನೊಂದಿಗೆ 'ಮಂಜಿನ ಹನಿ' ಚಿತ್ರವನ್ನು ಆರಂಭಿಸಿದರು. ಸಂದೇಶ್ ನಾಗರಾಜ್ ಆರಂಭಿಸಿದ್ದ ಈ ಚಿತ್ರದ ಖರ್ಚು ಯಾವಾಗ ಕೈ ಮೀರುತ್ತಾ ಹೋಯಿತೋ ಆಗ ರವಿಚಂದ್ರನ್ ಅದನ್ನು ಮೂರು ಕೋಟಿಗೆ ಸ್ವತಃ ತಾವೇ ಖರೀದಿಸಿಬಿಟ್ಟರು. ಆನಂತರವೂ ಆ ಚಿತ್ರದ ಕೆಲಸ ಮುಂದುವರೆಯಿತು. ಸುಮಾರು ಎರಡು ವರ್ಷಗಳ ಕಾಲ ಚಿತ್ರೀಕರಣಗೊಂಡಿದ್ದ 'ಮಂಜಿನ ಹನಿ'ಗಾಗಿ ಸುಮಾರು ಎಂಬತ್ತು ಪರ್ಸೆಂಟ್ ಶೂಟಿಂಗ್ ಮುಗಿಸಲಾಗಿತ್ತು. ಆದರೆ ರವಿಚಂದ್ರನ್‌ಗೆ ಚಿತ್ರೀಕರಣಗೊಂಡಿದ್ದ ಆ ದೃಶ್ಯಗಳ ಬಗ್ಗೆ ಅದೇನು ಅತೃಪ್ತಿ ಉಂಟಾಯಿತೋ ಏನೋ? ಅಷ್ಟೂ ಭಾಗವನ್ನು ಸಾರಾಸಗಟಾಗಿ ತಿಪ್ಪೆಗೆ ಬಿಸಾಡಿ ಮತ್ತೆ ಹೊಸದಾಗಿ ಚಿತ್ರೀಕರಿಸಲು ನಿರ್ಧರಿಸಿದರು.



ಇಂಥ ಹುಚ್ಚು ಸಾಹಸಗಳನ್ನು, ಹುಂಬ ಕೆಲಸಗಳನ್ನು ಕನ್ನಡ ಚಿತ್ರರಂಗದಲ್ಲಿ ರವಿಚಂದ್ರನ್ ಅಲ್ಲದೇ ಮತ್ಯಾರು ಮಾಡಲು ಸಾಧ್ಯ?

ಈ ನಡುವೆ ದಿನೇಶ್ ಗಾಂಧಿ ನಿರ್ಮಾಣದ 'ಹೂ' ಚಿತ್ರವನ್ನು ರವಿ ಸಿದ್ಧಗೊಳಿಸಿದ್ದಾರೆ. ಜೂನ್ 4ಕ್ಕೆ 'ಹೂ' ತೆರೆಗೆ ಬರುತ್ತಿದೆ. ತೆಲುಗಿನ ಬ್ಲಾಕ್‌ಬಸ್ಟರ್ ಸಿನಿಮಾ 'ವಸಂತಂ'ನ ರಿಮೇಕ್ ಚಿತ್ರವಿದು. ಈ ಬಾರಿ ಗೆದ್ದೇ ತೀರಬೇಕೆಂದು ಪಣ ತೊಟ್ಟಿರುವ ರವಿ 'ಮಲ್ಲ'ನ ಟ್ರಿಕ್ಸ್‌ಗಳನ್ನೇ ಇಲ್ಲೂ ಮುಂದುವರೆಸಿದ್ದಾರೆ. ಬಾಂಬ್ ಶೆಲ್ ನಮಿತಾಳನ್ನು ಕರೆತಂದು ಕ್ಯಾಮೆರಾ ಮುಂದೆ ಆಕೆಯನ್ನು ಉಳ್ಳಾಡಿಸಿ, ಒದ್ದೆ-ಮುದ್ದೆಯಾಗಿಸಿದ್ದಾರೆ! ಜೊತೆಗೆ ಮೀರಾ ಜಾಸ್ಮಿನ್‌ಳ ಮೋಹಕ ನಟನೆಯನ್ನೂ 'ಹೂ'ನಲ್ಲಿ ಮಿಕ್ಸ್ ಮಾಡಿದ್ದಾರೆ.

ರವಿಚಂದ್ರನ್ ಅವರ ಈ ಗಿಮಿಕ್ಕುಗಳೆಲ್ಲಾ ಈ ಬಾರಿ ವರ್ಕ್‌ಔಟ್ ಆಗುತ್ತಾ? ಕಳೆದುಹೋಗಿರುವ ಅವರ ಕ್ರೇಜು ಮತ್ತೆ ವಾಪಸ್ ಬರುತ್ತಾ? ಕನಸುಗಾರನ ಕನಸುಗಳು ಮತ್ತೆ ಚಿಗುರಲಿವೆಯಾ? ಇವೆಲ್ಲ ಸದ್ಯದ ಪ್ರಶ್ನೆಗಳಷ್ಟೇ.

50ಕ್ಕೆ ಕಾಲಿರಿಸಿರುವ ಈ 'ರಸಿಕ' ಚಿತ್ರರಂಗದಲ್ಲಿ ಮತ್ತೆ 'ಸಿಪಾಯಿ'ಯಂತೆ ಎದ್ದುಬರುವಂತಾಗಲಿ...

• ಅರುಣ್ ಕುಮಾರ್.ಜಿ
arunodayagc@gmail.com

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44